TIGHT BINDING

UNIVERSAL
LIBRARY
OU_200528
UNIVERSAL
LIBRARY

**OSMANIA UNIVERSITY LIBRARY**

Call No. K 81/M 19S Accession No. K 1270 Pt. 1

Author [illegible]

Title [illegible]

This book should be returned on or before the date last marked below.

# ಸಾಹಿತ್ಯಮಣಿಮಾಲೆ

ಸಂಪಾದಕ

ಉಗ್ರಾಣ ಮಂಗೇಶರಾವ್

ಪ್ರಥಮಸಂಪುಟ

ಮದ್ರಾಸ್ ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಶಾಲಾ ಉಪಯೋಗಕ್ಕಾಗಿ
ಮಂಜೂರಾತಿ ಪಡೆದದೆ.

ಬಾಸೆಲ್ ಮಿಶ್ಯನ್ ಪ್ರೆಸ್ ಎಂಡ್ ಬುಕ್ ಡಿಪೊ, ಮಂಗಳೂರು
ಇವರಿಂದ ಪ್ರಕಟಿಸಲ್ಪಟ್ಟಿತು.

೧೯೩೦

ಎಲ್ಲ ಹಕ್ಕುಗಳು ಕಾದಿಡಲ್ಪಟ್ಟಿವೆ.

ಕಮಳಕ್ಕಾವಗಮಲ್ತು ಲಕ್ಷ್ಮಿಯುವರಂ ಸಸ್ಕಾಬ್ಬಕ್ಕಮುಂಬಗ್ಗದಿಂ- |
ಸಮುದ್ರಂಗೊಳ್ಳ್ಕತಮಲ್ತು ಮುಕ್ತಿವರ ನಾಕ್ಷ್ಯಯೂಸಮ್ಯಾರಕ್ಕಮುಂ- ||
ಟಿಮುರಗರ್ಸಿತಮಲ್ತು ಸೌಖ್ಯಮಿವರಿಂ ಸಂಸ್ಕೃತಕಾವ್ಯಂಗಳಿಂ |
ಸಮುಸಂದಾಲಿಸುವರ್ಗಮುಂಟೆಸಿಪರೀಗೊಳ್ಳಂ ಕವೀಂದ್ರೋತ್ತಮರ್ ||

(ಕುಂದೇಂದು—ಅರ್ಧ ನೇಮಿಪುರಾಣ)

# ಮುನ್ನುಡಿ

ಒಂದು ಭಾಷೆಯ ಸಾಹಿತ್ಯವು ಅಭಿವೃದ್ಧಿಯಾಗುತ್ತಲಿದ್ದಂತೆ ಸಾಹಿತ್ಯಪ್ರೇಮಿಗಳ ಸೌಕರ್ಯಕ್ಕಾಗಿ ಉತ್ಕೃಷ್ಟಕಾವ್ಯಭಾಗಗಳನ್ನು ಸಂಕಲಿಸುವ ಕ್ರಮವು ಪೂರ್ವದಿಂದಲೂ ನಡೆದುಬಂದಿದೆ. ಕನ್ನಡಸಾಹಿತ್ಯಕ್ಕೆ ಮಲ್ಲಿಕಾರ್ಜುನನ (೧೩ನೆಯ ಶತಮಾನ) ಸೂಕ್ತಿಸುಧಾರ್ಣವವೂ ಅಭಿನವವಾದಿವಿದ್ಯಾನಂದನ (೧೬ನೆಯ ಶತಮಾನ) ಕಾವ್ಯಸಾರವೂ ಪೂರ್ವದ ಪ್ರಸಿದ್ಧ ಕಾವ್ಯಸಂಗ್ರಹಗಳು. ಇವೆರಡೂ ಕಾವ್ಯದ ಅಂಗಗಳಾದ ಅಷ್ಟಾದಶವರ್ಣನೆಗಳನ್ನು ಅನುಸರಿಸಿ ವಿವಿಧ ಕವಿಗಳ ಚಾತುರ್ಯವನ್ನೊಳಕೊಂಡರೂ ಒಂದೇ ಕಾವ್ಯದ ಭಾವನೆಯಾಗುವಂತೆ ಅಂದವಾಗಳವಡಿಸಿದ ಸಂಕಲನಗಳು. ಅನಂತರ ಈಚೆಗೆ ಹುಟ್ಟಿದ ಕಾವ್ಯಸಂಗ್ರಹಗಳು ಆ ಕ್ರಮವನ್ನು ಬಿಟ್ಟು ವಿವಿಧಕಾವ್ಯಗಳ ಅಂದವಾದ ಭಾಗಗಳನ್ನೊಳಕೊಂಡುವು. ಇವುಗಳಲ್ಲಿ ಕೆಲವು ಕವಿಗಳ ಕಾಲಕ್ರಮವನ್ನೂ ಕೆಲವು ಪದ್ಯಬಂಧ (ದ್ವಿಪದಿ, ತ್ರಿಪದಿ, ಚತುಷ್ಪದ್ಯಾದಿ) ಕ್ರಮವನ್ನೂ, ಕೆಲವು ವಿಷಯಗಳ ಸರಳಕ್ಲಿಷ್ಟಕ್ರಮವನ್ನೂ ಅನುಸರಿಸಿದುವು. ಕಾವ್ಯಸಂಗ್ರಹಗಳು ಹೃದ್ಯವಾಗಬೇಕಾದರೆ ಆಯ್ದುಕೊಂಡ ವಿಷಯಗಳು ಒಂದು ವಿಧದ ವಿಷಯಸಂಮೇಳನದಿಂದ ಹೊಂದಿರಬೇಕೆಂದು ಆ ಪೂರ್ವಾಚಾರ್ಯರು ನಮಗೆ ದಾರಿದೋರಿದರೂ ಕರ್ಣಾಟಕಸಾಹಿತ್ಯದ ನವಚೇತನದ ಈ ಕಾಲದಲ್ಲಿ ಪ್ರಕಟವಾದ ಹಲವು ಸಂಗ್ರಹಗಳು ಕೇವಲ ಕಾವ್ಯಭಾಗಗಳ ಸಮುದಾಯಗಳಾದುವಲ್ಲದೆ ವಿಷಯಸಮನ್ವಯಲೋಪದಿಂದ ಭಾಷಾಪ್ರೇಮಿಗಳಿಗೆ ಮನೋರಂಜಕಗಳಾಗಲಿಲ್ಲವೆಂದು ಅನೇಕ ಸುಹೃದರು ತೋರಿದ ಕೊರತೆಯನ್ನು ಪರಿಹರಿಸುವುದಕ್ಕೆ ಈ ಸಾಹಿತ್ಯಮಣಿಮಾಲೆ ಯತ್ನಿಸುತ್ತದೆ.

ಈ ಮಣಿಮಾಲೆಯಲ್ಲಿ ಈ ಮೊದಲು ಯಾವ ಸಂಗ್ರಹದಲ್ಲಿಯೂ ಇಲ್ಲದ ಮಾಸಲಾಗಿರುವ ಕಾವ್ಯಭಾಗಗಳನ್ನೇ ಕೂಡಿಸಬೇಕೆಂಬ ಯತ್ನವಿರದೆ ಅತ್ಯುತ್ತಮಕಾವ್ಯಭಾಗಗಳನ್ನು ಶೇಖರಿಸುವ ಉದ್ದೇಶವಿದ್ದುದರಿಂದ ಸಾಹಿತ್ಯವಿದ್ಯಾರ್ಥಿಗಳಿಗೆ ಪೂರ್ವಪರಿಚಯವಿರುವ ಕೆಲವು ವಿಷಯಗಳು ಇದರಲ್ಲಿ ದೊರಕಬಹುದು. ಸಾಹಿತ್ಯರತ್ನಾಕರದೊಳಗಣ ಅಖಿಳ ರತ್ನಗಳ ಪರೀಕ್ಷೆ ಯಾವನೊಬ್ಬನಿಗೂ ಅಸಾಧ್ಯವು.

ರತ್ನಪರೀಕ್ಷಕನಾಂ ಕೃತಿ |
ರತ್ನಪರೀಕ್ಷಕನೆನೆಂದು ಫಣಿಪತಿಯುಂ ಫಣಾ ||
ರತ್ನಮುಮಂ ರನ್ನನ ಕೃತಿ |
ರತ್ನಮುಮಂ ಪೇಳ್ ಪರೀಕ್ಷಿಪಂಗೆಂಟೆರ್ದೆಯೇ ||

ಎಂದು ಕವಿರನ್ನನು ಎಚ್ಚರಿಸಿರುವಾಗ ಅಂತಹ ಯತ್ನಕ್ಕೆ ಹೆಚ್ಚು ಸಾಹಸವು ಬೇಕು ಅಷ್ಟು ಸಾಹಸವೂ ಬುದ್ಧಿಶಕ್ತಿಯೂ ಇರದಿದ್ದರೂ ಈ ಸಂಪಾದಕನು ತನ್ನ ಅಲ್ಪಮತಿಗೆ ಗೋಚರ

ವಾದಷ್ಟು ಮಣಿಗಳನ್ನು ಹೆಕ್ಕಿತೆಗೆದು ಮಾಲೆಯಾಗಿ ಪೋಣಿಸಿ ಪ್ರಥಮಸಂಪುಟವಾಗಿ ಸಾಹಿತ್ಯವಿದ್ಯಾರ್ಥಿಗಳಿಗೆ ಸಮರ್ಪಿಸಿರುವನು.

ಈ ಮಣಿಮಾಲೆಯು ಮುಖ್ಯವಾಗಿ ವಿದ್ಯಾರ್ಥಿಗಳಿಗಾಗಿ ಏರ್ಪಟ್ಟರೂ ಸಾಮಾನ್ಯ ವಾಚಕರಿಗೂ ಸ್ವೀಕಾರಾರ್ಹವಾದೀತೆಂಬ ನಂಬಿಕೆಯಿಂದ ಇದರೊಳಗೆ ಕವಿಚರಿತೆಯೂ ವಿಷಯಪರಿಚಯವೂ ಲಘುಟಿಪ್ಪಣವೂ ಸೇರಿಸೋಣಾಗಿವೆ.

ಈ ಮಣಿಮಾಲೆಯನ್ನು ರಚಿಸಲು ಉತ್ತೇಜನ ಕೊಟ್ಟ ಗವರ್ನಮೆಂಟ್ ಕಾಲೇಜು ಮತ್ತು ಟ್ರೈನಿಂಗ್ ಶಾಲೆಯ ಮುಖ್ಯೋಪಾಧ್ಯಾಯರಾದ ರಾ। ತೋನ್ಸೆ ಮಂಗೇಶರಾವ್, ಬಿ. ಎ., ಎಲ್. ಟಿ. ಯವರಿಗೂ, ರಚನಾಕಾಲದಲ್ಲಿ ತಕ್ಕ ಸಲಹೆಗಳನ್ನು ಕೊಟ್ಟು, ಮುದ್ರಣ ಪತ್ರಕಗಳನ್ನು ತಿದ್ದುವಾಗ ಬಹಳ ಸಹಾಯಮಾಡಿದ ರಾ। ರಾವ್‌ಸಾಹೇಬ್ ಮಂಜೇಶ್ವರ ಅನಂತರಾವ್, ಬಿ. ಎ., ಬಿ. ಎಲ್., ರವರಿಗೂ ಕಾವ್ಯಭಾಗಗಳ ಪರಿಶೋಧನಾಕಾರ್ಯ ದಲ್ಲಿ ವಿಶೇಷ ಸಹಾಯಮಾಡಿದ ಪುತ್ತೂರು ಬೋರ್ಡ್ ಹೈಸ್ಕೂಲ್ ಪಂಡಿತರಾದ ಕಡವದ ಶಂಭುಶಾಸ್ತ್ರೀ ಶಿರೋಮಣಿಯವರಿಗೂ ಮಣಿಮಾಲೆಯ ಸಂಪಾದಕನು ಚಿರಋಣಿಯಾ ಗಿರುವನು.

ಈ ಮಣಿಮಾಲೆಯೊಳಗೆ ಸೇರಿದ 'ಅಗ್ರಪೂಜೆ', 'ಸೀತಾಸ್ವಯಂವರ'ಗಳ ಬಗ್ಗೆ ಮೈಸೂರು ವಿದ್ಯಾ ಇಲಾಖಾ ಡೈರೆಕ್ಟರ್ ಅವರುಗಳನ್ನೂ, 'ಪುಷ್ಪಾಂಜಲಿಯ' ಬಗ್ಗೆ ಮೈಸೂರು ಸರ ಕಾರದ ಪ್ರಾಚ್ಯಕೋಶಾಲಯದ ಅಧಿಕಾರಿಗಳನ್ನೂ, 'ಭೂನಾಥರ್ಕಳಬಾಳ್ಕೆ'ಯ ಬಗ್ಗೆ 'ವಿಶ್ವಬಂಧು'ವಿನ ಸಂಪಾದಕರಾದ, ಮ. ರಾ. ಎ. ಶಾಂತಿರಾಜಶಾಸ್ತ್ರಿಗಳವರನ್ನೂ ಮಣಿ ಮಾಲೆಯ ಸಂಪಾದಕನು ವಂದಿಸುವನು. ಮಣಿಮಾಲೆಯೊಳಗೆ ಅಡಕವಾದ 'ವನವಿಹಾರ', 'ಶ್ರೀರಾಮಪಟ್ಟಾಭಿಷೇಕ' 'ಬಾಷ್ಪಾಂಜಲಿ', 'ಉತ್ತಮಧರ್ಮ', 'ಮಾಯದಬಲೆಯರ ಮಾಯದ ಬಲೆ', 'ಹೆಮ್ಮಕ್ಕಳಾಳ್ವಿಕೆ', 'ಪ್ರಹ್ಲಾದ' ವೆಂಬ ಭಾಗಗಳನ್ನು ತಯಾರಿಸಲು ಅಗತ್ಯವಾದ ಆಯಾ ಗ್ರಂಥಗಳ ಮೂಲಪ್ರತಿಗಳನ್ನು ಉಪಯೋಗಿಸುವುದಕ್ಕೆ ದಯವಿಟ್ಟು ಕೊಟ್ಟ ಮೈಸೂರು ಮತ್ತು ಮದರಾಸು ಪ್ರಾಚ್ಯಕೋಶಾಲಯಗಳ ಅಧಿಕಾರಿಗಳ ಉಪಕಾರ ವನ್ನು ಸಂಪಾದಕನು ಇಲ್ಲಿ ಸ್ಮರಿಸದಿರಲಾರನು.

ಉ. ಮ. ರಾ.

# ವಿಷಯಸೂಚಿ


| ಪಾಠ | | ಪುಟ |
|---|---|---|
| ೧. | ಕವಿತೆ | 1 |
| ೨. | ಪುಷ್ಪಾಂಜಲಿ | 5 |
| ೩. | ಭರತಚಕ್ರೇಶ್ವರನ ಠೀವಿ | 9 |
| ೪. | ಭೂನಾಥರ್ಕಳ ಬಾಳ್ಕೆ | 13 |
| ೫. | ಮಾಯದಬಲೆಯರ ಮಾಯದ ಬಲೆ | 16 |
| ೬. | ವನವಿಹಾರ | 22 |
| ೭. | ಸೀತಾಸ್ವಯಂವರ | 25 |
| ೮. | ರಾವಣಗರ್ವಭಂಗ | 30 |
| ೯. | ರಾವಣವಧೆ | 37 |
| ೧೦. | ಶ್ರೀರಾಮಪಟ್ಟಾಭಿಷೇಕ | 45 |
| ೧೧. | ಸೀತಾಪರಿತ್ಯಾಗ | 50 |
| ೧೨. | ಬ್ರಾಹ್ಮಣರ ಬಲುಹು | 57 |
| ೧೩. | ಅಗ್ರಪೂಜೆ | 64 |
| ೧೪. | ಶಬರಶಂಕರವಿಲಾಸ | 69 |
| ೧೫. | ಧರ್ಮಸಂಕಟ | 77 |
| ೧೬. | ಬಾಷ್ಪಾಂಜಲಿ | 84 |
| ೧೭. | ಪಶ್ಚಾತ್ತಾಪ | 88 |
| ೧೮. | ಬಾಲಲೀಲೆ | 93 |
| ೧೯. | ಪ್ರಹ್ಲಾದ | 97 |
| ೨೦. | ಪುತ್ರಶೋಕ | 105 |
| ೨೧. | ಹೆಮ್ಮಕ್ಕಳಾರೈಕೆ | 109 |
| ೨೨. | ದಕ್ಷಯಜ್ಞ | 114 |
| ೨೩. | ವಿರೂಪಾಕ್ಷದರ್ಶನ | 122 |
| ೨೪. | ಉತ್ತಮಧರ್ಮ | 128 |
| ೨೫. | ಸೂಕ್ತಿಮುಕ್ತಾವಳಿ | 134 |

# ೨. ಪುಷ್ಪಾಂಜಲಿ

[ಕನ್ನಡ ಕವಿಗಳಲ್ಲಿ ಪಂಪನು ಅಗ್ರಗಣ್ಯನು. ಈತನು ಕ್ರಿ. ಶ. ೧೦ನೆಯ ಶತಮಾನದ ಆದಿಭಾಗದಲ್ಲಿ ಪುಲಿಗೆರೆಯ ಚಾಳುಕ್ಯವಂಶದ ಅರಿಕೇಸರಿರಾಜನ ಆಸ್ಥಾನಪಂಡಿತನಾಗಿದ್ದನು. ಈತನಿಂದ ಮೊದಲು ಅನೇಕ ಕವಿಗಳು ಇದ್ದರೆಂದು ಕವಿರಾಜಮಾರ್ಗವೆಂಬ ಲಕ್ಷಣಗ್ರಂಥದಲ್ಲಿ ತಿಳಿಯಬರುವುದಾದರೂ, ಅವರ ಗ್ರಂಥಗಳು ಪ್ರಕೃತ ದೊರೆಯುವುದಿಲ್ಲವಾದುದರಿಂದ ಕನ್ನಡಕ್ಕೆ ಆದಿಕವಿ ಪಂಪನೆಂದು ಮಧುರನು ಪಟ್ಟ ಅಭಿಪ್ರಾಯವು ಸರ್ವಮಾನ್ಯವಾಗಿದೆ. ಪಂಪಪೊನ್ನರನ್ನರು 'ಜಿನಸಮಯದೀಪಕರೆಂದೂ ರತ್ನತ್ರಯರೆಂದೂ ಪ್ರಸಿದ್ಧರಾಗಿರುವರು. ಈತನ ಕಾವ್ಯಗಳಾದ ಆದಿಪುರಾಣವೂ ವಿಕ್ರಮಾರ್ಜುನವಿಜಯ (ಪಂಪಭಾರತ)ವೂ ಸಾಹಿತ್ಯಪ್ರಪಂಚದಲ್ಲಿ ಅಗ್ರಸ್ಥಾನವನ್ನು ಪಡೆದಿರುವುವು. 'ಆದಿಪುರಾಣದೊಳರಿವುದು ಕಾವ್ಯಧರ್ಮಮುಮಂ ಧರ್ಮಮುಮಂ' ಎಂದು ಕವಿ ಹೇಳಿರುವಂತೆ ಇದು ಕಾವ್ಯರಚನೆಗೆ ಲಕ್ಷಣಗ್ರಂಥವಾಗಿದೆ ಎನ್ನಬಹುದು. ಈತನು ತನ್ನ ಕಾವ್ಯಗಳನ್ನು ಆಗ ಅಚ್ಚಗನ್ನಡವೆಂದು ಪ್ರತೀತಿಯಿದ್ದ 'ರಾಜಸುಧಾನಿಯ ಪುಟವಹ ಪುಲಿಗೆರೆಯ ತಿರುಳ ಕನ್ನಡದೊಳ್' ಬರೆದಿರುವುದರಿಂದ ಪಂಪನು ಅನಂತರದ ಕವಿಗಳಿಗೆಲ್ಲ ಆದರ್ಶಸ್ವರೂಪನಾದನು.

'ಪುಷ್ಪಾಂಜಲಿ'ಯು ಆದಿಪುರಾಣದ ಏಕಾದಶಾಶ್ವಾಸದಿಂದ ಆಯ್ದುತೆಗೆದುದು. ಆದಿತೀರ್ಥಂಕರರ ಪುತ್ರನೂ ಪ್ರಥಮಚಕ್ರವರ್ತಿಯೂ ಆದ ಭರತೇಶ್ವರನು ದಿಗ್ವಿಜಯಕ್ಕೆ ಹೊರಟಾಗ ಶರತ್ಕಾಲದ ಬಿಸಿಲಿಗೆ ಬಳಲಿದ ಆತನ ರಾಣಿಯರು ಲತಾಗೃಹಗಳಲ್ಲಿ ಸ್ವಲ್ಪ ವಿಶ್ರಮಿಸಿಕೊಂಡು ವಿಹಾರಕ್ಕಾಗಿ ವನವನ್ನು ಪ್ರವೇಶಿಸಿದರು. ಆ ವನದಲ್ಲಿ ಅರಳಿದ ಹೂಗಳ ಅಂದಕ್ಕೆ ಮೆಚ್ಚಿ ಒಬ್ಬೊಬ್ಬ ರಾಣಿ ಒಂದೊಂದು ಹೂವನ್ನು ಗುಣಪಕ್ಷಪಾತದಿಂದ ಹೊಗಳಿ ಆಡಿದ ನುಡಿಗಳೇ ಇಲ್ಲಿ 'ಪುಷ್ಪಾಂಜಲಿ'ಯಾಗಿ ಕೊಡಲಾಗಿವೆ.]

ಮಗಮಗಿಸಲ್ಕೆ ಮಂದಯಿಸಿ ದಿಕ್ತಟಮಂ ಬಳಸಲ್ಕೆ ಪೀರ್ವ ತುಂ- |
ಬಿಗೆ ತಣಿಪಲ್ಕೆ ನಮ್ಮ ಜಸಮಂ ಬೆಳಗಲ್ಕಿವೆ ಸಾಲ್ಗುಮೆಂದು ತ- ||
ಳ್ತಗಲ[1]ದಲಂಪಿನಿಂ ಮಧು ಮನೋಭವರಿರ್ವರುಮಳ್ತಿವಟ್ಟು ಮ- |
ಲ್ಲಿಗೆಗೆ ಬಸಂತದೊಳ್ ಬಯಸಿ ಮಾಡಿದರಲ್ಲರೆ ಪಟ್ಟಬಂಧಮಂ || ೧ ||

ರತಿಗೆ ಮುಡಿಯಲ್ಕೆ ಮದನಂ- |
ಗೆ ತುರುಂಬಲ್ಕಿರ್ದುವೆಂದು ಮಧು ಸುಳಿವ ಮಧು- ||
ವ್ರತಮುಮನಲೆದಪನೆಂಬೀ |
ಪ್ರತೀತಿಗಿರುವಂತಿಯಂತೆ ನೋಂತ[2]ಲರೊಳವೇ || ೨ ||

---

1 ಅಲಂಪು=ಸೊಬಗು. 2 ನೋನ್=ವ್ರತಮಾಡು.

ಇದಿರೊಳ್ ನನೆದೋರಿ ವಸಂ- |
ತದೂತಿಯೆನೆ ನೆಗಳ್ದ ಮಾಧವೀಲತೆಯೆನೆ ಸಂ- ||
ದದಿರ್ಮುತ್ತೈಯ ಪೂಗೊಂಚಲ |
ಪುದುವಿನೊಳೆರಗದ ಮದಾಳಿಗಳ್ ಮೆರೆದಪುವೇ || ೩ ||

ಪೊಸತಲರ್ದ ಪದದೊಳುಣ್ಮುವ |
ಪೊಸಗಂಪಂ ಪಡೆದು ಪೊಳ್ತರೊಳ್[1] ಜನಮಂ ಸೋ- ||
ಲಿಸುಗುಮನಂಗಾಮೃತ ಸೌ- |
ಖ್ಯಸಾರಮಂ ಚಾದಿಯಲ್ಲದೇಂ ಪಡೆದಪುದೇ || ೪ ||

ಪುಲ್ಲಶರಂಗಿಸುವೆಡೆಗಿವೆ |
ನಲ್ಲಂಬುಗಳೆನಿಸಿ ತುರುಗಿ ಮಲರ್ದಲರ್ದೆಸೆವೀ ||
ಮೊಲ್ಲೆಯುಮೊಲಿಸಿದ ನಲ್ಲರ |
ಲಲ್ಲೆಯುಮಾರಾರ ಮನಮುಮಂ ಸೋಲಿಸವೇ || ೫ ||

ಕಂಪುಗೊಳಲ್ ಕುಸಿರ್ದುಸಿರಿನಿ- |
ಸಂ ಪೊರಮಟ್ಟೆಸಳ ತುದಿಯನೆಯ್ದಲೊಡಂ ಮು- ||
ನ್ನಂ ಪಳೆಯವಪ್ಪ ಪೂಗಳ |
ಕಂಪಿನೊಳೇಂ ಪೊಗಳ ಪಾಟಳೀಪರಿಮಳಮಂ || ೬ ||

ಎಸಳ್ಗಳನೆಯ್ದೆ ಕಂಡರಿಸಿ[2] ಮುತ್ತಿನೊಳಲ್ಲಿ ಸುವರ್ಣಚೂರ್ಣಮಂ |
ಪಸರಿಸಿ ಕೇಸರಾಕೃತಿಯೊಳಲ್ಲಿಗೆ ಕರ್ಣಿಕೆಯಂದಮಾಗೆ ಕೀ- ||
ಲಿಸಿ ಪೊಸತಪ್ಪ ಮಾಣಿಕದ ನುಣ್ಬರಲಂ ಮಧು ಮನ್ಮಥಂಗೆ ಬ- |
ಣ್ಣಿಸಿ ಸಮೆದಂತೆ ತೋರುವುದು ಪೂಗಳೊಳೇಂ ಸುರಹೊನ್ನೆ ಚೆನ್ನನೋ || ೭ ||

ಪರಿಣಯನೋತ್ಸವಂ ರತಿಗನಂಗನೊಳಾಗೆ ವಸಂತಕಾಂತೆಯರ್ |
ನೆರೆದು ದಿಗಂಗನಾಸಮಿತಿಗಳ್ಕರಿನೊಳ್ ಕುಡುವಲ್ಲಿ ಕೇಸರಂ ||
ಬೆರಸಿದ ಪೊನ್ನ ಬಾಯಿನದ ಬಟ್ಟಲಿವೆಂಬಿನಮಾರ್ದ್ರಕೇಸರಂ |
ಬೆರಸಿದ ಚೆಲ್ವು ತಳ್ತೆಸಳದೇನೆಸೆದಿರ್ದುದೊ ಕರ್ಣಿಕಾರದಾ || ೮ ||

1 ಪೊಳ್ತರು=ಹೊತ್ತಾರೆ    2 ಕಂಡರಿಸು=ಕೆತ್ತು.

ಪಡೆದೊಡೆ ಕಂಪಂ ಬಣ್ಣಂ- |
ಬಡೆಯವು ಬಣ್ಣಮನೆ ಪಡೆದುವಪ್ಪೊಡೆ ಕಂಪಂ ||
ಪಡೆಯವುಳಿದಲರ್ಗಳೆರಡುಮ- |
ನೊಡೆವೆಳೆದೀ ಚಂಪಕಕ್ಕೆ ಪೂಗಳ್ ದೊರೆಯೇ || ೯ ||

ಎಸಳಂ ಮುಟ್ಟಲೊಡಂ ತ- |
ನ್ನ ಸೌರಭಂಗೆಟ್ಟು ನೆಗಳ್ದ ಕತ್ತುರಿವಣ್ಣಂ ||
ಮಸಿಗಮೆಣೆಯಪ್ಪುದೆನೆ ಬ- |
ಣ್ಣಿಸುವಂ ಕೇದಗೆಯ ಕಂಪನೇವಣ್ಣಿಸುವಂ || ೧೦ ||

ಅಲರ್ದರೆಗಳಿಗೆಯೆ ಜಾದಿಯ |
ಮಲೆಪುಂ[1] ಮಲ್ಲಿಗೆಯ ಪೊಂಕಮುಂ[2] ಬಳಿಕವನಾರ್ ||
ತಲೆಯೊಳ್ ತಾಳ್ದುವರೆಂದೇ- |
ಸಲೆದುದೊ ಸಿಂದುವರೆ ತವದ ತನಿಗಂಪಿಂದಂ || ೧೧ ||

ಉನ್ನತವಾಗಿರೆ ಸೊಕ್ಕಿ- |
ರ್ದುನ್ನತಕುಚೆಯರ ವಿಲೋಚನಾರುಣರುಚಿಯಂ ||
ತನ್ನೆಸಳ್ಗಳಿನನುಕರಿಸುವ |
ಚೆನ್ನೈದಿಲ ಕೆಂಪನೈದಲಾರ್ಪುವೆ ಪೂಗಳ್ || ೧೨ ||

ಮುಕ್ಕುಳಿಸಿಯುಗುಳ್ವ ಮಧುವಿಂ |
ಮಿಕ್ಕೆಸೆವಾಮೋದಮಿದರ ತಣ್ಗಂಪಿನೊಳಂ ||
ಪೊಕ್ಕುದೆನೆ ಮಧುವ ಕಂಪಂ |
ಮುಕ್ಕುಳಿಸಿದ ವಕುಳಮಾರುಮಂ ಸೊಕ್ಕಿಸದೇ || ೧೩ ||

ಮಗಮಗಿಸುವ ಕಂಪೆಸಳೊಳೆ |
ತಗುಳ್ದಂ ಮೆಲ್ಪೆಸೆಯೆ ಮನಮುನಳಿಗಳ ಬಳಗಂ ||
ಜಗದ ಮನದೊಡನೆ ಸೇವಂ- |
ತಿಗೆಗಂ ಗೊಜ್ಜಗೆಗೆ[3] ಮಲ್ಲದೇನೆರಗುಗುಮೇ || ೧೪ ||

---

1 ಮಲೆಪು=ಉದ್ಧಟತನ. 2 ಪೊಂಕ=ಅಹಂಕಾರ.
3 ಗೊಜ್ಜಗ=ಒಂದು ಬಗೆಯ ಸೇವಂತಿಗೆ

ಉದಿರ್ದೊಪ್ಪುವುದೆಯ್ದೆ ತುರುಂ- |
ಬಿದೊಡೊಪ್ಪುವುದೆಸಳ ಮೆಲ್ಪಿನಿಂದೊಪ್ಪುವುದು- ||
ಣ್ಮೆದ ತಣ್ಗಂಪಿಂದೊಪ್ಪುವು- |
ದದರಿಂದಲರೊಳಗೆ ಗೊಜ್ಜ ಗೊಜ್ಜಗೆಯೆ ವಲಂ || ೧೫ ||

ಪರಿಮಳಿತಸೌಂದರಂ ಬಂ- |
ಧುರಗಂಧಂ ಮದನರಾಗವರ್ಧನಕರಮಿಾ ||
ಮರುವಂ ಕರ್ಬಾಳಮುಮಿರೆ |
ಮರುಳಲ್ಲವೆ ಕುಸುಮನಿಚಯದೊಳ್ ಪಾಯ್ವಳಿಗಳ್ || ೧೬ ||

ಲಲನಾಮುಖೇಂದುಲಾವ- |
ಣ್ಯಲೀಲೆಯಂ ಪಡೆವ ಬಣ್ಣದಿಂ ಕಂಪಿಂದೇ- ||
ನಲೆದುದೊ ಬಯ್ತುಗದಂತಿರೆ |
ತಲೆಗೇರುವ ಕುಸುಮನಿಚಯಮಂ ಕಾಶ್ಮೀರಂ || ೧೭ ||

# ೩. ಭರತಚಕ್ರೇಶ್ವರನ ಠೀವಿ

[ಈ ವಿಷಯವು ರತ್ನಾಕರಸಿದ್ಧನ ಭರತೇಶವೈಭವದ ಆಸ್ಥಾನಸಂಧಿಯೊಳಗಣದು. ರತ್ನಾಕರನು ಕ್ರಿ. ಶ. ೧೬ನೆಯ ಶತಮಾನದ ಮಧ್ಯಭಾಗದಲ್ಲಿ ಕಾರ್ಕಳದ ಭೈರಸ ಒಡೆಯರ ಆಸ್ಥಾನಕವಿಯಾಗಿದ್ದನು. ದಕ್ಷಿಣ ಕನ್ನಡದ ಕವಿಗಳಲ್ಲಿ ಈತನೇ ಶ್ರೇಷ್ಠನೆನ್ನಬಹುದು. ಭರತೇಶವೈಭವವು ಹತ್ತು ಸಾವಿರ ಪದ್ಯಸಂಖ್ಯೆಯುಳ್ಳ ದೊಡ್ಡ ಗ್ರಂಥವಾದರೂ ಈತನು ಆ ಕಾವ್ಯವನ್ನು ೯ ತಿಂಗಳಲ್ಲಿ ರಚಿಸಿದನೆಂದರೆ ಈತನ ಕವಿತಾಶಕ್ತಿಯನ್ನು ಬೇರೆ ಹೊಗಳಬೇಕಾಗಿಲ್ಲ. ಸಾಂಗತ್ಯಕಾವ್ಯಗಳನ್ನು ಬರೆದ ಕನ್ನಡ ಕವಿಗಳಲ್ಲಿ ಈತನೇ ಪ್ರಥಮಸ್ಥಾನಕ್ಕೆ ಯೋಗ್ಯನೆಂದು ಧಾರಾಳವಾಗಿ ಹೇಳಬಹುದು. ಈತನು ಪ್ರಾಚೀನ ಕವಿಮಾರ್ಗವನ್ನು ಅನುಸರಿಸಿದರೂ ಈತನ ಕವಿತೆಗೆ ಒಂದು ಹೊಸ ಬೆಡಗಿದೆಯೆಂಬುದು ಇಲ್ಲಿ ಕೊಟ್ಟ 'ಭರತಚಕ್ರೇಶ್ವರನ ಠೀವಿ' ಎಂಬುದರಲ್ಲಿಯೂ ಒಡೆದು ಕಾಣುವುದು.

ಈತನು ಈ ಕಾವ್ಯವಲ್ಲದೆ ಶತಕತ್ರಯಿಯೆಂದು ಪ್ರಸಿದ್ಧವಾಗಿರುವ ರತ್ನಾಕರಶತಕ ಅಪರಾಜಿತಶತಕ ತ್ರಿಲೋಕಶತಕಗಳೆಂಬ ಬೇರೆ ಮೂರು ಕಾವ್ಯಗಳನ್ನು ರಚಿಸಿರುವನು. ಇವುಗಳಲ್ಲಿ ರತ್ನಾಕರಶತಕದ ಕರ್ತೃವಿನ ವಿಷಯದಲ್ಲಿ ಕವಿಚರಿತೆಯಲ್ಲಿ ಭಿನ್ನಾಭಿಪ್ರಾಯವಿದೆ. ಕವಿಚರಿತೆಯ ತೃತೀಯ ಸಂಪುಟವನ್ನೂ ಶತಕತ್ರಯಿಯ ಪೀಠಿಕೆಯನ್ನೂ ಭರತೇಶವೈಭವದ ಪೀಠಿಕೆಯನ್ನೂ ಓದಿ ನೋಡಿದರೆ ಇದು ಚರ್ಚಾಸ್ಪದವಾದುದೆಂದಾದರೂ ತೋರದಿರದು. 'ಭೂನಾಥರ್ಕಳ ಬಾಕ್ಕಿ' ರತ್ನಾಕರಶತಕದೊಳಗಣದು.]

ಭರತಭೂತಳಕೆ ಸಿಂಗರವಾದಯೋಧ್ಯಾ- |
ಪುರದೊಳು ಮೂಲೋಕ ಪೊಗಳೆ ||
ಭರತಚಕ್ರೇಶ್ವರ ಸುಖಬಾಳುತಿರ್ದನಾ |
ಸಿರಿಯನದೇಸ ಬಣ್ಣಿಪೆನು || ೧ ||

ಹೊಲ್ಲದ ನೃಪರಿಗಿಲ್ಲದ ಗುಣಗಳನಿಟ್ಟು |
ಸೊಲ್ಲಿಪ ಕೃತಿಮಾರ್ಗವಲ್ಲ ||
ಉಳ್ಳ ಸದ್ಗುಣಗಳ ಕಡೆಗಂಡು ಬಣ್ಣಿಸ |
ಬಲ್ಲವನಾವನಾ ನೃಪನ || ೨ ||

ಕೋಮಲಾಂಗನು ಹೇಮವರ್ಣನು ಜಗವೆಲ್ಲ |
ಕಾಮಿಸತಕ್ಕ ಚೆನ್ನಿಗನು ||
ಆಮೋದವುಕ್ಕುವ ಜವ್ವನಿಗನು ಸರ್ವ |
ಭೂಮಿಾಶರೊಡೆಯನಾ ಚಕ್ರಿ || ೩ ||

ಆ ವಿಭುವೊಂದಿನದುದಯಕಾಲದೊಳೆದ್ದು |
ದೇವತಾರ್ಚನೆಯನು ಮಾಡಿ ||
ಚಾವಡಿಗೈದಿ ತಾನೋಲಗವಾದೊಂದು |
ಶ್ರೀವಿಲಾಸವನೇನನೆಂಬೆ || ೧ ||

ನವರತ್ನಹೇಮನಿರ್ಮಿತವೆನಿಪಾಸ್ಥಾನ |
ಭವನದೊಳಾ ರಾಜರತ್ನ ||
ಛವಿವಡೆದೆಸೆದನು ರತ್ನಪುಷ್ಪಕದೊಳು |
ದಿವಿಜೇಂದ್ರನೊಪ್ಪುವಂದದೊಳು || ೫ ||

ಸಿಂಗರಿಸಿದ ಝಲ್ಲಿಪಟ್ಟೆ ಪೂಮಾಲೆ ಬೆ- |
ಡಂಗಾದ ಮಂಟಪದಲ್ಲಿ ||
ಶೃಂಗಾರವನದೊಳು ಮೆರೆವ ವಸಂತರಾ- |
ಜಂಗೆಣೆಯಾದನಾ ಸೊಬಗಾ || ೬ ||

ತನುಕಾಂತಿ ತುಂಬಿದ ಸಭೆಯೆಂಬ ಕೊಳದಲ್ಲಿ |
ಕನಕಸಿಂಹಾಸನವೆಂಬ ||
ಕನಕಾಂಬುಜದ ಮೇಲಾ ರಾಜಹಂಸನಿ- |
ದ್ದನು ರಾಜಹಂಸನೆಂಬಂತೆ || ೭ ||

ಉದಯಗಿರಿಯ ಮೇಲೆ ಮೆರೆವ ಭಾನುವಿಗೆ ಮ- |
ತ್ತಿದಿರಾದ ಪ್ರತಿಸೂರ್ಯನಂತೆ ||
ಪದುಳದುತ್ತುಂಗ ಸಿಂಹಾಸನವೇರಿ ದೇ- |
ಹದ ಕಾಂತಿ ಮೆರೆಯೆ ಮೆರೆದನು || ೮ ||

ಜವ ಬಿಂಕವೊ ಎಡಗಾಲ ಗದ್ದುಗೆಯ ಮೇ- |
ಲೋಪಿ ಮಡಿದು ಮತ್ತು ಕೆಳಗೆ ||
ಹಾವುಗೆಯೊಳು ಪೆಂಡೆಯದ[1] ಬಲಗಾಲೂರಿ |
ಠೀವಿಯೊಳೆಸೆದನಾ ರಾಯಾ || ೯ ||

---

1 ಪೆಂಡೆಯ=ಪಾಯವಟ್ಟು; ಕಾಲಿಗೆ ಹಾಕುವ ಬಿರುದಿನ ಕಡಗ.

ಬಲಗೈಯೊಳಾಂತ ಹೊನ್ನೊರೆಯ ಕಠಾರಿಯ |
ಕೆಲಕೂರಿ ಮತ್ತೆಡಗೈಯ ||
ಮಲಗಿನ[1] ಮೇಲೂರಿ ಪೇರಸಿರಿಯನಾಳ್ದ |
ಕಲಿಗಳ ದೇವನೊಪ್ಪಿದನು || ೧೦ ||

ಮಿರುಪ ಕಿರೀಟವುಂಟದನಂದು ಧರಿಸಿತಿ- |
ಲ್ಲರೆ ಮನದೊಂದು ಲೀಲೆಯೊಳು ||
ತುರುಬ ಚುಂಗೆಸೆಯೆ[2] ಚಿಮ್ಮುರಿಸುತ್ತಿ[3] ಸೊಬಗನೆ |
ಕರೆವುತಿದ್ದನು ನೋಡುವರಿಗೆ || ೧೧ ||

ಉಬ್ಬಿ ಬೆಳೆದು ಬಾಗಿತಿಲ್ಲ ರೇಖೆಗೆ ಬಂದು |
ಹುಬ್ಬಿನಂತೆಸೆವೆಳಮೀಸೆ ||
ಹುಬ್ಬುಮೀಸೆಯ ನೋಡಿ ನಲಿವ ಬವರಿ[4] ಕಣ್ಣ |
ಹಬ್ಬವ ಮಾಳ್ಪನೆಲ್ಲರಿಗೆ || ೧೨ ||

ಆರು ಬಣ್ಣಿಪರವನಂಗದ ನಿರ್ಮಲಾ- |
ಕಾರವ ಕೊರಳೊಳಿಕ್ಕಿರ್ದ ||
ತೋರಮುತ್ತುಗಳೆಲ್ಲ ತಿಳಿಗೊಳದೊಳು ತೋರ್ಪ |
ತಾರಾಳಿಯಂತೆ ತೋರಿದುವು || ೧೩ ||

ಮಿಗೆ ತೋರ ಮುತ್ತಿನ ತೊಡಿಗೆಯೊಡನೆ ಧಗ- |
ಧಗಿಸುವ ಲಾವಣ್ಯದಿಂದ ||
ಹಗಲು ನಕ್ಷತ್ರವೆರಸಿ ಪೂರ್ಣಚಂದ್ರಮ |
ಸೊಗಸಿದಂತೆಸೆದನು ಚಿತ್ರಾ || ೧೪ ||

ಚಿತ್ರಿಸಬಾರದವನ ರೂಪು ಕರುವಿಟ್ಟು[5] |
ಸೂತ್ರಿಸಿಯೆರೆಯಲಶಕ್ಯ ||
ನೇತ್ರಕೆ ಮನಕೆ ಗೋಚರವಲ್ಲದದು ವಾಕು |
ಮಾತ್ರಕೆ ಗೋಚರವೈಸೆ || ೧೫ ||

---

1 ಮಲಗು=ದಿಂಬು.
2 ಚುಂಗು=ಕೊನೆ.
3 ಚಿಮ್ಮುರಿಸುತ್ತು=ಕಟ್ಟಿಕೊಳ್ಳು.
4 ಬವರಿ=ಗಡ್ಡ.
5 ಕರುವಿಡು=ಎರಕಹೊಯ್.

ಹೆಂಗಳ ರೂಪು ಗಂಡರನು ಗಂಡರ ರೂಪು |
ಹೆಂಗಳ ಸೋಲಿಪುದೆಂಬ ||
ಪಾಂಗಲ್ಲ[1]ವವನ ಚೆಲ್ವಿಕೆ ಗಂಡುಪೆಂಗಳ |
ಕಂಗಳ ಸೆರೆವಿಡಿದಿಹುದು || ೧೬ ||

ನೋಡುವವರಿಗೆ ಕಣ್ಣಲಸಿಕೆಯಿಲ್ಲ ಕೊಂ- |
ಡಾಡುವವರಿಗಾಸರಿಲ್ಲ ||
ನೋಡಿದನಿತಕೆ ಕೊಂಡಾಡಿದನಿತಕಿಚ್ಚೆ |
ಮಾಡುವ ಸೊಬಗಿನೊಳೆಸೆದ || ೧೭ ||

ಈ ರೂಪುರೇಖೆ ಮತ್ತೀ ಗಾಡಿ[2]ವೋಡಿಯಿಂ- |
ತೀ ರಾಯಗಲ್ಲದನ್ಯರಿಗೆ ||
ಬಾರದು ಬಂದರೊಬ್ಬರಿಗೆ ಮೆರೆಯದೆಂದು |
ತೋರುತಿಹರು ತಮತಮಗೆ || ೧೮ ||

ತರತರವಿಡಿದು ಥಾಳಿಸುತಿಹ[3] ದೀರ್ಘಚಾ- |
ಮರಗಳ ಸಾಲೊಳೆಸೆದನು ||
ಹರಿವ ಬೆಳ್ಮುಗಿಲೊಳು ತೋರಿ ಮರಸುವ ಚಂ- |
ದಿರನೋ ಭಾಸ್ಕರನೋಯೆಂಬಂತೆ || ೧೯ ||

ಅಂಬುಜವೆಲ್ಲವು ರವಿಯ ನೋಳ್ಪಂತೆ ನೀ- |
ಲಾಂಬುಜ ನೋಳ್ಪಂತೆ ಶಶಿಯಾ ||
ತುಂಬಿದ ಸಭೆಯೆಲ್ಲ ನೃಪನ ನೋಡುತ ಮಿಕ್ಕ |
ಹಂಬಲ[4] ಮರೆದುದಲ್ಲಲ್ಲಿ || ೨೦ ||

---

1 ಪಾಂಗು=ರೀತಿ. 2 ಗಾಡಿ=ಸೊಬಗು. 3 ಥಾಳಿಸು=ಪ್ರಕಾಶಿಸು.
4 ಹಂಬಲ=ಚಿಂತೆ.

# ೪. ಭೂನಾಥರ್ಕಳ ಬಾಳ್ಕೆ

ಭೂನಾಥರ್ಕಳ ಬಾಳ್ಕೆ ಚಿತ್ತಕೆ ಸದಾ ತಳ್ಕಂಕವೆಷ್ಟೆಷ್ಟು ಧಾ- |
ತ್ರೀನಾರೀಧನಸೇನೆ ಸಾರ್ದೊಡಮದುಂ ಸಾಲ್ದಪ್ಪುವೇ ಮತ್ತೆ ದು- ||
ರ್ದಾನಾಪೇಕ್ಷೆಯೆ ಪೆರ್ಚುಗುಂ ಬಗೆಯಲಂತಾ ಚಿಂತೆಯೇ ವ್ಯಾಧಿ ಸು- |
ಜ್ಞಾನೈಶ್ವರ್ಯಕೆ ಸಾಟಿ ಸೌಖ್ಯಮೊಳವೇ ರತ್ನಾಕರಾಧೀಶ್ವರಾ || ೧ ||

ಪಡೆಯೊಳ್ ಬಲ್ಲಿದನಾದೊಡಾ ಪಡೆಯಿನೇಂ ಪಾಪಾರಿಯಂ ಗೆಲ್ವನೇ |
ಕಡುಪಿಂದಂ ಜವನಂ ತೆರಳ್ಚುವನೆ ಬಲ್ಪಿಂ ಮೋಕ್ಷಮಂ ಕೊಳ್ವನೇ ||
ಕಡೆಗಾ ಭೂಪನ ಶಕ್ತಿ ನಾಲ್ಗಳಿಗೆ ಸಲ್ಗುಂ ಮರ್ತ್ಯಕೀಟಂಗಳೊಳ್ |
ಬಿಡು ಯೋಗೀಂದ್ರನ ಶಕ್ತಿಗಾವುದು ಸಮಂ ರತ್ನಾಕರಾಧೀಶ್ವರಾ || ೨ ||

ತಮ್ಮಂ ಕೀರ್ತಿಸೆ ನಲ್ಮೆಯೊಲ್ಮೆ ಕಡುಚಾಗಂ[1] ಕೂಡೆ ಸಂಭಾಷಣಂ |
ನಿಮ್ಮಂ ಕೀರ್ತಿಸಲಡ್ಡ ಮೋರೆ ಬಡಚಾಗಂ ಮೌನಮೀ ಭೂಮಿಪರ್ ||
ತಮ್ಮಂ ಕೊಲ್ವ ನರೇಂದ್ರನಂ ಪೊಗಳಲಳ್ಕಿಂ ಮುನ್ನಿಪರ್ ನಿಮ್ಮೊಳೇಂ |
ಹಮ್ಮಂ ತೋರ್ಪರೊ ಕಾವನೊಳ್ ಕಲಹವೇ ರತ್ನಾಕರಾಧೀಶ್ವರಾ || ೩ ||

ಆರಿಂದಾದುದೊ ರಾಜ್ಯಲಕ್ಷ್ಮಿಯದು ನಿಮ್ಮಿಂದಾದುದೆಂತೆಂದೊಡಾ- |
ಚಾರಂ ಮುನ್ನಣುಮಾತ್ರವಿರ್ದ ಫಲದಿಂದಾ ಜೀವಕೀ ಜನ್ಮದೊಳ್ ||
ಸೇರಿತ್ತಾಚರಣಕ್ಕೆ ನೀನೆ ಪತಿ ನಿನ್ನಂ ಮಾಣ್ದವಂ ಕಷ್ಟಸಂ- |
ಸಾರಾಂಭೋಧಿಯ ದಾಂಟಲೇನರಿವನೇ ರತ್ನಾಕರಾಧೀಶ್ವರಾ || ೪ ||

ಅಣುಮಾತ್ರಂ ವ್ರತಮಲ್ಪಕಾಲಮಿರೆ ಮುನ್ನಂ ತತ್ಫಲಪ್ರಾಪ್ತಿಯಿಂ |
ಪ್ರಣುತಕ್ಷ್ಮಾಪತಿಯಾದೆನಿನ್ನಧಿಕದಿಂ ಸಮ್ಯಗ್ವ್ರತಾಚಾರಲ- ||
ಕ್ಷಣಮಂ ಶಾಶ್ವತವಾಂತು ದೇವಪದಮುಂ ಕೈವಲ್ಯಮಂ ಕೊಳ್ವೆನೆಂ- |
ದೆಣಿಸುತ್ತುಜ್ಜುಗಿಪಾತನೇ ಸುಖಿಯಲಾ ರತ್ನಾಕರಾಧೀಶ್ವರಾ || ೫ ||

---

1 ಚಾಗ—ತ್ಸ. ತ್ಯಾಗ.

ಪಡೆದತ್ತಿಲ್ಲವೆ ಪೂರ್ವದೊಳ್ ಧನವಧೂರಾಜ್ಯಾದಿ ಸೌಭಾಗ್ಯಮಂ |
ಪಡೆದಂ ತನ್ಮಮಕಾರದಿಂ ಪಡೆದನೀ ಸಂಸಾರಸಂವೃದ್ಧಿಯಂ ||
ಪಡೆದತ್ತಿಲ್ಲ ನಿಜಾತ್ಮತತ್ತ್ವರುಚಿಯಂ ತದ್ಬೋಧಚಾರಿತ್ರಮಂ |
ಪಡೆದಂದಾಗಳೆ ಮುಕ್ತಿಯಂ ಪಡೆಯನೇ ರತ್ನಾಕರಾಧೀಶ್ವರಾ || ೬ ||

ಪುಣ್ಯಂಗೆಯ್ಯದೆ ಪೂರ್ವದೊಳ್ ಬರಿದೆ ತಾನೀಗಳ್ ಮನಂ ನೋಡೆ ಲಾ- |
ವಣ್ಯಕ್ಕಾಭರಣಕ್ಕೆ ಭೋಗಕೆನಸುಂ ರಾಗಕ್ಕೆ ಚಾಗಕ್ಕೆ ಕಾ- ||
ರುಣ್ಯಕ್ಕಗ್ಗದ ಲಕ್ಷ್ಮಿಗಂ ಬಯಸಿ ಬಾಯಂ ಬಿಟ್ಟು ಕಾಂಕ್ಷಾಮಹಾ- |
ರಣ್ಯಂಬೊಕ್ಕಕಟೇಕೆ ಚಿಂತಿಸುವುದೋ ರತ್ನಾಕರಾಧೀಶ್ವರಾ || ೭ ||

ಆರಿತ್ತಾರ್ ಕಳೆದರ್ ದರಿದ್ರಮನದಾವಂಗಾವನೇನೊಂದು ಸ- |
ತ್ಕಾರಂ ಗೆಯ್ಯದೆ ಭಾಗ್ಯಮಂ ಕಿಡಿಸಿದಂ ಪೂರ್ವಾರ್ಜಿತಪ್ರಾಪ್ತಿಯಿಂ ||
ದಾರಿದ್ರ್ಯಂ ಧನಮೆಂಬೆರಳ್ಸಮನಿಕುಂ ಮತ್ತೇಕೆ ಧೀರತ್ವಮಂ |
ದೂರಂ ಮಾಡಿ ಮನಂ ಸದಾ ಕುದಿವುದೋ ರತ್ನಾಕರಾಧೀಶ್ವರಾ || ೮ ||

ಭೃತ್ಯಂ ತನ್ನನದೆಂತು ಕಾಣ್ಬನವನಂತುರ್ವೀಶ್ವರರ್ ನಿಮ್ಮ ಕಂ- |
ಡತ್ಯಾನಂದದೆ ಕಾಣ್ಕೆ ಕೈಮುಗಿತಮಷ್ಟಾಂಗಾನತಂ ಸಮ್ಮುಖಂ ||
ಸ್ತೌತ್ಯಂ ಸೇವೆಗಳೆಂಬಿವಂ ನೆಗಳ್ತುಂ ನಂಬಿರ್ದೊಡಾತಂಗೆ ತ- |
ತ್ಪ್ರತ್ಯರ್ಥಿಕ್ಷಿತಿಪಾಲರೇನೆರಗರೇ ರತ್ನಾಕರಾಧೀಶ್ವರಾ || ೯ ||

ಸುರಪಂ ತನ್ನಿಭವಿತ್ತು ಮಾವತಿಗನಪ್ಪಂ ಕಾಂತೆಯಿಂ ಪಾಡಿಪಂ |
ಸುರಸೈನ್ಯಂ ಸಹಮಾಗಿ ನಿಮ್ಮ ಜಳಕ[1]ಕ್ಕೊಲ್ದೋಳಿಗಂ ಮಾಳ್ಪನಾ- ||
ದರದಿಂ ಛತ್ರಮನೆತ್ತುವಂ ನಡಿಸುವಂ ಪಲ್ಲಕ್ಕಿಯಂ ತಾಳ್ಪನೀ |
ನರಕೀಟಾದಿಗಳೇಕೆ ಗರ್ವಿಸುವರೋ ರತ್ನಾಕರಾಧೀಶ್ವರಾ || ೧೦ ||

ದೊರೆಯೇನಂ ಪಿಡಿದಿರ್ಪನಂತದನೆ ಲೋಕಂ ಮೆಚ್ಚುಗುಂ ತದ್ಧರಾ- |
ವರನಾ ದುರ್ಮತದತ್ತ ತಾನೆಳಸಿದಂದಾ ಸಾರ್ದರಂ ತನ್ನುಮಂ ||
ನರಕಕ್ಕಿಕ್ಕಿದನೊಲ್ದು ನಿಮ್ಮ ಮತದತ್ತಿಚ್ಚೈಸಿದಂದಾತನು- |
ದ್ಧರಿಸಲ್ ತಾನೆ ಸಮರ್ಥನಾದ ನರನೈ ರತ್ನಾಕರಾಧೀಶ್ವರಾ || ೧೧ ||

---

1 ಜಳಕ=ಸ್ನಾನ.

ನರರೊಳ್ ಪುಟ್ಟಿ ನರೇಂದ್ರನಾದ ದಿನದೊಳ್ ಸದ್ಧರ್ಮಮಂ ಸನ್ಮುನೀ- |
ಶ್ವರರಂ ಭವ್ಯರನೊಲ್ದು ಮನ್ನಿಸಿಯನಾಥಗಾರ್ಶ್ರಿತರ್ಗೀಯುತುಂ ||
ಪರಿವಾರಪ್ರಜೆಗಳ್ಗೆ ತಾಯ ತೆರದಿಂದೋವುತ್ತುಮಿರ್ಪಂ ಧರಾ- |
ವರನಿಂದಾ ಬರ್ದಿಲಕ್ಕೆ[1] ನಾಳಿನವನೈ ರತ್ನಾಕರಾಧೀಶ್ವರಾ || ೧೨ ||

ವ್ರತಮಂ ಮಾಣ್ದೊಡೆ ಸೇವೆ ಮಾಣ್ಬುದರಿದೇ ಶಿಲೋಪವಾಸಕ್ಕೆ ಬೆ- |
ರ್ಚುತಿರಲ್ ವಿಕ್ರಮಲಕ್ಷ್ಮಿ ಜಾರ್ವುದರಿದೇ ಸತ್ಪಾತ್ರದಾನಂ ವಿವ- ||
ರ್ಜಿತಮಾಗಲ್ ಸಿರಿ ಕುಂದಿವರ್ಪುದರಿದೇ ನಿಮ್ಮರ್ಚನಾಸಂಭ್ರಮಂ |
ಚ್ಯುತಮಾಗಲ್ ನೃಪವೈಭವಂ ಸಡಿಲದೇ ರತ್ನಾಕರಾಧೀಶ್ವರಾ || ೧೩ ||

ಚೇತೋರಂಗದೊಳಿಟ್ಟು ನಿಮ್ಮಡಿಗಳಂ ಬಂದೋಲಗಂಗೊಟ್ಟೊಡಂ |
ಪ್ರಾತಃಕಾಲದ ರಾಗದೊಳ್ ಪದದೊಳಂ ಪದ್ಯಂಗಳೊಳ್ ವೀಣೆಯೊಳ್ ||
ಶ್ರೀತೀರ್ಥಂಕರ ನಿಮ್ಮ ಪಾಡಿಸುತೆ ಪಾಡುತ್ತಳ್ತಿಯಂ ಮಾಡುತಿ- |
ರ್ಪಾತಂ ಭೂಪನೆ ಪಾಪಲೋಪಕನಲ್ತೆ ರತ್ನಾಕರಾಧೀಶ್ವರಾ || ೧೪ ||

ರಾಜಶ್ರೀಯೊಳನೇಕಕಾಮಿನಿಯರುಂಟಾಳಾಪನೃತ್ಯಂಗಳುಂ- |
ಟಾ ಜಿಹ್ವಾರುಚಿಯುಂಟು ಕಾಮಿಸಿದುವೆಲ್ಲಾವುಂಟುವುಂಟಾದೊಡಾ ||
ರಾಜೀವಂ ಕೆಸರಳ್ದಿ[2]ಯಳ್ದದವೊಲಿರ್ದೂರ್ಧ್ವಕ್ಕೆ ಕಣ್ಣಿಟ್ಟೊಡಾ |
ರಾಜಂ ರಾಜನೆ ತಾನೆ ರಾಜಋುಷಿಯೈ ರತ್ನಾಕರಾಧೀಶ್ವರಾ || ೧೫ ||

ಅಂದೇಂ ತಂದನೆ ಗರ್ಭದಿಂ ಪರರ ದೇಶಂಲಕ್ಷ್ಮಿಸೈನ್ಯಂಗಳಂ |
ಮುಂದೇನೊಯ್ವನೆ ತಳ್ತ ಪೆಣ್ಬಡೆದ ಮಕ್ಕಳ್ ಪೊತ್ತ ದೇಹಂಗಳಂ ||
ಬಂದತ್ತೊಂದು ವಿನೋದಗೋಷ್ಠಿಯದು ಮುನ್ನಂ ನಿಮ್ಮ ಕಂಡಿರ್ದ ಸೈ[3]- |
ಪಿಂದಂ ಮತ್ತದನೇಕೆ ತಾಂ ಮರೆವನೋ ರತ್ನಾಕರಾಧೀಶ್ವರಾ || ೧೬ ||

ಭಂಡಾರಂ ಬರುವನ್ನಮಿರ್ಪನೆ [ಸುಖಂ ಸಂಸಾರದೊಳ್] ಸಾಕೆನಲ್ |
ಕಂಡೇಂ ಪೋಪನೆಯಳ್ಕರಿಂ ಪಡೆದ ರಾಜ್ಯಶ್ರೀಯನೇನಂತ್ಯದೊಳ್ ||
ಕೊಂಡೊಯ್ದಪ್ಪನೆ ನಾಸ್ತಿ ನಾಸ್ತಿ ಗುರುದೈವಕ್ಕೊಲ್ದು ಕೊಟ್ಟಷ್ಟು ತಾ- |
ನುಂಡುಟ್ಟೈಸು ತನತ್ತು[4] ಮತ್ತೆ ಬರಿದೈ ರತ್ನಾಕರಾಧೀಶ್ವರಾ || ೧೭ ||

---

1 ಬರ್ದಿಲ=ಸ್ವರ್ಗ.
2 ಅಳ್ದು=ಮುಳುಗು.
3 ಸೈಪು=ಪುಣ್ಯ.
4 ತನತ್ತು=ತನ್ನದು.

# ೫. ಮಾಯದಬಲೆಯರ ಮಾಯದ ಬಲೆ

[ಹರಿಶ್ಚಂದ್ರಕಾವ್ಯವು ಷಟ್ಪದೀಕಾವ್ಯಗಳಲ್ಲಿ ಅತಿಪ್ರಾಚೀನವಾದುದು. ಅದರ ಕವಿ ರಾಘವಾಂಕನು ವೀರಶೈವಕವಿಗಳಿಗೆ ಅತಿ ಗೌರವಾಸ್ಪದರಾದ ಕವಿಗಳಲ್ಲಿ ಒಬ್ಬನು. ಆತನ ಕಾಲವು ೧೩ನೆಯ ಶತಮಾನದ ಮಧ್ಯಭಾಗವು. ಆತನಿಂದ ಮೊದಲು ಶರಷಟ್ಪದಿ ಮಾತ್ರವಿದ್ದಿತೆಂದು ನಾಗವರ್ಮನ ಛಂದಸ್ಸಿನಲ್ಲಿ ಶರಷಟ್ಪದಿಗೆ ಮಾತ್ರ ಕನ್ನಡ ಗಣ ಲೆಕ್ಕವನ್ನು ಹೇಳಿರುವುದರಿಂದ ಅನುಮಾನಿಸಬಹುದು. ಅಂತು ವಾರ್ಧಕ ಷಟ್ಪದಿಯನ್ನು ಆತನೇ ಸೃಷ್ಟಿಸಿದನೆಂದು ರಾಘವಾಂಕಚರಿತ್ರೆಯನ್ನು ಬರೆದ ಸಿದ್ಧನಂಜೇಶನು ಅಭಿಪ್ರಾಯಪಡುವನು. ತನ್ನ ಚರಿತೆಯನ್ನು ಬೇರೊಬ್ಬ ಕವಿಯಿಂದ ಪುರಾಣರೂಪವಾಗಿ ಬರೆಯಿಸಿಕೊಳ್ಳುವಷ್ಟು ಯೋಗ್ಯತೆಯೂ ಪುಣ್ಯವೂ ಈ ಒಬ್ಬ ಕವಿಗೆ ಮಾತ್ರ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಉಂಟಾದುದು ಆತನ ಒಂದು ವಿಶೇಷ ಕೀರ್ತಿಯೆನ್ನಬಹುದು. ಆತನು ಈ ಹರಿಶ್ಚಂದ್ರ ಕಾವ್ಯವಲ್ಲದೆ ಸೋಮನಾಥಚರಿತೆ, ಸಿದ್ಧರಾಮಪುರಾಣ, ವೀರೇಶ್ವರಚರಿತೆ, ಶರಭಚಾರಿತ್ರ, ಹರಿಹರ ಮಹತ್ತ್ವ ಎಂಬ ಬೇರೆ ಐದು ಗ್ರಂಥಗಳನ್ನು ರಚಿಸಿರುವನು. ನರಸ್ತುತಿಯುಳ್ಳ ಹರಿಶ್ಚಂದ್ರಕಾವ್ಯವನ್ನು ಬರೆದ ತಪ್ಪಿಗೆ ಪ್ರಾಯಶ್ಚಿತ್ತವಾಗಿ ಆತನ ಗುರುವೂ ಸೋದರಮಾವನೂ ಮಹಾಕವಿಯೂ ಆದ ಹರಿಹರದೇವನು ಆ ಐದು ಕಾವ್ಯಗಳನ್ನು ಆತನಿಂದ ಬರೆಯಿಸಿದನೆಂದು ಪ್ರವಾದವಿದೆ. ತನ್ನ ಕಾವ್ಯಗಳನ್ನು ಆಗಿನ ವ್ಯವಹಾರಭಾಷೆಯಲ್ಲಿ ಆತನು ರಚಿಸಿರುವುದರಿಂದ ಅವು ಅತಿ ಸರಳವಾಗಿವೆ.

'ಮಾಯದಬಲೆಯರ ಮಾಯದ ಬಲೆ' ಎಂಬ ವಿಷಯವು ಹರಿಶ್ಚಂದ್ರ ಕಾವ್ಯದ ಸಪ್ತಮಸ್ಥಲದೊಳಗಿದೆ. ಹರಿಶ್ಚಂದ್ರನ ಸತ್ಯಪರೀಕ್ಷೆಗಾಗಿ ವಿಶ್ವಾಮಿತ್ರನು ಕಾಡುಮೃಗಗಳ ಉಪಟಳವನ್ನು ಹೆಚ್ಚಿಸಿ, ರಾಜನು ಮೃಗಬೇಟೆಗೆ ಬರುವಂತೆ ಮಾಡಿ, ಆತನು ಗಾಯಪಡಿಸಿದ ಹಂದಿಯ ನೆವದಿಂದ ಕೋಪ ಹೊಂದಿ ಸೃಷ್ಟಿಸಿದ ಮಾಯದಬಲೆಯರನ್ನು ತಮ್ಮ ಹಾವಭಾವವಿಲಾಸಗಳಿಂದ ಮಾಯೆಗೊಳಗಾಗಿಸಿ ರಾಜನನ್ನು ಸತ್ಯಭ್ರಷ್ಟನನ್ನಾಗಿ ಮಾಡುವಂತೆ ಕಳುಹಿಸಿದನು. ಹರಿಶ್ಚಂದ್ರನಾದರೊ ಮೃಗಬೇಟೆಯ ಆಯಾಸದಿಂದಲೂ, ಗುರು ವಸಿಷ್ಠನ ಆಜ್ಞೆಯನ್ನು ಮರೆತ ವ್ಯಸನದಿಂದಲೂ, ಹಿಂದಿನ ರಾತ್ರಿ ಕಂಡ ದುಃಸ್ವಪ್ನದ ವ್ಯಥೆಯಿಂದಲೂ ಚಿಂತಾಕ್ರಾಂತನಾಗಿದ್ದುದರಿಂದ ಅವರ ನೃತ್ಯದಿಂದ ಹರ್ಷಗೊಳ್ಳುವನು. ಆಗ ಆ ಕನ್ಯೆಯರು ತಮ್ಮ ಮಾಯದ ಬಲೆಯನ್ನು ಬೀಸುವರು.]

ಮಾಯದಬಲೆಯರು ಕಾಣುತ್ತ ಮುಝು ಭಾಪಧಟ |
ರಾಯ ಮುಝುರೇ ರಾಯರಾಯ ದಳದುಳಕಾರ |
ರಾಯ ಕಂಟಕ ರಾಯರಾಯ ಜಗಜಟ್ಟಿದಲ್ಲಣರಾಯ ಕೋಳಾಹಳ ||
ರಾಯ ಭುಜಬಲಭೀಮ ರಾಯಮರ್ದನ ರಾಯ |
ಜೀಯ ಸ್ಥಿರಂಜೀವಯೆಂದು ಕೀರ್ತಿಸಿ ಗಾಣ- |
ನಾಯಕಿಯರೆತ್ತಿ ಪೊಡಮಟ್ಟು ದಂಡಿಗೆವೆರಸಿ ಪಾಡಲುದ್ಯೋಗಿಸಿದರು || ೧ ||

ಎಕ್ಕಲನ ಬಳಿವಿಡಿದು ಸುತ್ತಿದಾಸರಸು ಮುನಿ |
ರಕ್ಕಸನ ಬಸಕೆ ಬಂದಂಜಿಕೆಯನೆರಡನೆಯ |
ಮುಕ್ಕಣ್ಣನೆನಿಪ ಗುರುವಾಜ್ಞೆಗೆಟ್ಟಳಲನಲ್ಲದ ಕನಸ ಕಂಡ ಭಯಮಂ ||
ಮಿಕ್ಕು ಮರೆವಂತಡಸಿ ಕವಿವ ಗತಿಗಳ ಸೊಗಸ |
ಲೆಕ್ಕಿಸದೆ ಸಮಯೋಚಿತದ ಪಸಾಯಕ್ಕೆ[1] ಮನ- |
ವುಕ್ಕಿ ಸರ್ವಾಭರಣಮಂ ಗಾಣನಾರಿಯರಿಗಿತ್ತಂ ಹರಿಶ್ಚಂದ್ರನು || ೨ ||

ಬಡತನದ ಹೊತ್ತಾನೆ ದೊರಕಿ ಫಲವೇನು ನೀ- |
ರಡಸಿರ್ದ ಹೊತ್ತಾಜ್ಯ ದೊರಕಿ ಫಲವೇನು ರುಜೆ- |
ಯಡಸಿ ಕೆಡೆದಿಹ ಹೊತ್ತು [ಭಕ್ಷ್ಯಭೋಜ್ಯಗಳಿಂದ] ಫಲವೇನು ಸಾವ ಹೊತ್ತು ||
ಪೊಡವಿಯೊಡೆತನ ದೊರಕಿ ಫಲವೇನು ಕಡುವಿಸಿಲು |
ಹೊಡೆದು ಬೆಂಡಾಗಿ ಬೀಳ್ವಮಗೆ ನೀನೀಗ ಮಣಿ- |
ದೊಡಿಗೆಗಳನಿತ್ತು ಫಲವೇನು ಭೂಪಾಲ ಹೇಳೆನುತ ಮತ್ತಿಂತೆಂದರು || ೩ ||

ಕಡಲೊಳಾಳ್ವಂಗೆ[2] ತೆಪ್ಪವನು ದಾರಿದ್ರಂಗೆ |
ಕಡವರವನತಿರೋಗಿಗಮೃತಮಂ ಕೊಟ್ಟೊಡವ- |
ರಡಿಗಡಿಗದಾವ ಹರುಷವನೈದುತಿರ್ಪರವರಂತಿರ್ಪೆವೀ ಹೊತ್ತಿನ ||
ಸುಡುಸುಡನೆ ಸುಡುವ ಬಿರುವಿಸಿಲ ಬೇಗೆಯ ಸೆಗಳಿ[3] |
ಹೊಡೆಯಲುರಿಯೆತ್ತಿ ಬಾಯ್ಬತ್ತಿ ಡಗೆ ಸುತ್ತಿ ಸಾ- |
ವಡಸುತಿದೆ ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು ಭೂಭುಜಯೆಂದರು || ೪ ||

ರವಿಕುಲದ ಪೀಳಿಗೆಯೊಳೊಗೆದ ರಾಯರ್ಗೆ ಪ- |
ಟ್ಟವ ಕಟ್ಟುವಂದಿದಿಲ್ಲದೊಡರಸುತನ ಸಲ್ಲ- |
ದವನಿಯೊಳು ಯುದ್ಧರಂಗದೊಳಿದಂ ಕಂಡ ಹಗೆಗಳು ನಿಲ್ಲರಿದರ ಕೆಳಗೆ ||
ಕವಿವ ನೆಳಲೊಳಗಾವನಿರ್ದನಾತಂಗೆ ತಾಂ |
ತವೆಯೆಡರು ಬಡತನಂ ದುಃಖವಪಕೀರ್ತಿ ಪರಿ- |
ಭವದಪಜಯಂ ಸಾರವಿದನರಿದು ಬೇಡಿದೊಡೆ ಕುಡಬಹುದೆ ಹೇಳೆಂದನು || ೫ ||

---

1 ಪಸಾಯ=ಪಾರಿತೋಷಕ. 2 ಆಳ್=ಮುಳುಗು. 3 ಸೆಗಳಿ=ಸೆಕೆ.

ಕುಡಬಾರದೊಡವೆಯಂ ಕುಡುವುದರಿದ್ದೈಸೆ ಕುಡು- |
ವೊಡವೆಗಳನಾರಾದೊಡಂ ಕುಡರೆ ಹೇಳೆನಲು |
ಬಿಡೆ ಬೇಡುವರ ಬಾಯಿ ಹರಿವುದೇ ಬೇಡಿದುದನೀವ ದೊರೆಯಾವನೆನಲು ||
ಕುಡರೆ ಮುನ್ನಿನ ಬಲಿದಧೀಚಿಶಿಬಿಗಳು ಬೇಡಿ- |
ದೊಡವೆಗಳನೆನಲದೇಂ ತ್ಯಾಗವೇ ದಾನ ಗುಣ- |
ವಿಡಿದ್ದೈಸಲೇ ಕೊಟ್ಟರೆನೆ ಹಿಂದುಗಳೆವರೇ ಕುಡಬೇಹುದಿದನೆಂದರು || ೬ ||

ಪಾಡಿ ಮೆಚ್ಚಿಸಿದ ಕತದಿಂ ತ್ಯಾಗವಾಸತ್ತು |
ಬೇಡಿದುದರಿಂ ದಾನ ಹವಣಿಪ ಪದಸ್ಥಿಕೆಯ |
ಜೋಡಿಯುಂಟದರೊಳುಪಕಾರ ಕೌಶಿಕನ ಹೆಸರಿಂದಿತ್ತೊಡಾರಾಧನೆ ||
ಗಾಡಿಕಾತಿಯರಾಗಿ ವಿಟಲಕ್ಷಣಂ ಮನದ |
ಪಾಡರಿಯಲೆಂದೆವದರಿಂ ಸಲುಗೆ ಶಂಕಿಸದೆ |
ನೀಡಿದೊಡೆ ಕೀರ್ತಿ ಕರುಣಿಸಿ ಕೊಡಲು ಪುಣ್ಯವೀ ಸತ್ತ್ರಿಗೆಯೊಳಿಹುದೆಂದರು || ೭ ||

ಅನುನಯದೊಳೆಲ್ಲವಂ ಕುಡಬಹುದು ಬಿಡಬಹುದು |
ಜನನಿಯಂ ಜನಕನಂ ನಲ್ಲಳಂ ದೈವವಂ |
ಮನವಾರೆ ನಂಬಿ ನಚ್ಚಿರ್ದ ಪರಿವಾರಮುಂ ಕುಡುವ ಬಿಡುವತಿಕಲಿಗಳು ||
ಜನರೊಳಗೆ ಜನಿಸರೆಂದೆನಲು ನೀನೀಗೆಣಿಸಿ- |
ದನಿಬರಂ ಬೇಡಿದೊಡೆ ಕುಡಬೇಡ ಕೊಡೆಯನೀ- |
ಯೆನೆ ಲೋಭವೇಕರಸಯೆನಲಿದಲ್ಲದೆ ಬೇರೆ ಮಾತೆಪಿತರಿಲ್ಲೆಂದನು || ೮ ||

ಲೋಗರಿಗೆ ಕುಡಬಾರದಾಗಿ ಸತಿ ವಂಶಗತ- |
ವಾಗಿ ಬಂದುದರಿಂದ ತಂದೆ ಪಟ್ಟವ ಕಟ್ಟು- |
ವಾಗಲರ್ಚಿಸಿಕೊಂಬುದಾಗಿ ದೈವಂ ನೆಳಲ ತಂಪನೊಸೆದೀವುದಾಗಿ ||
ಸಾಗಿಸುವ ತಾಯ್ ಧುರದೊಳರಿಗಳಂ ಬೆದರಿಸುವು- |
ದಾಗಿ ಚತುರಂಗಬಲವೀ ಸಿತಚ್ಛತ್ರವೆಂ- |
ಬಾಗಳಿದನರಿದು ಬೇಡುವರತಿ ಮರುಳರೆನ್ನದಿಹುದೆ ಮೂಜಗವೆಂದನು || ೯ ||

ಇಳೆಯೊಳಗೆ ಹೆಸರುಳ್ಳ ದಾನಿಯೆಂಬುದನು ಕೇ- |
ಳ್ದೆಳಸಿ ಕಟ್ಟಾಸೆವಟ್ಟೈತಂದು ಬೇಡಿ ನಿ- |
ಷ್ಫಲವಾಗದಂತೆ ನಾವತಿಮರುಗದಂತಳಲದಂತೆ ಬಿಸುಸುಯ್ಯದಂತೆ ||
ತಿಳಿದ ನೀನೆಮಗೆ ವಲ್ಲಭನಾಗಿ ಚಿತ್ತದು- |
ಮ್ಮಳಿಕೆಯಂ[1] ಕಳೆ ಹರಿಶ್ಚಂದ್ರ ಭೂನಾಥಯೆಂ- |
ದಳವಳಿದು ಕೈಮುಗಿದು ಬಾಯ್ವಿಟ್ಟು ಸುಡಿದರಳುಪಿಂದನಾಮಿಕಸತಿಯರು || ೧೦ ||

ಲಲಿತವಸುಮತಿ ಹುಟ್ಟಿದಂದು ಹುಟ್ಟಿದ ಸೂರ್ಯ- |
ಕುಲದ ರಾಯರ್ಗೆ ವಂಶದೊಳು ಕೀರ್ತಿಯೊಳು ಭುಜ- |
ಬಲದೊಳೊರೆದೊರೆಯೆನಿಸಿ ಕನ್ನಿಕೆಯರಂ ಕುಡುವ ಭೂಪರಿಲ್ಲಿನ್ನುತನಕ ||
ಹೊಲತಿಯರು ನೀವೆನಗೆ ಸತಿಯರಾಗಿಪ್ಪೆವೆಂ- |
ದುಲಿಹ[2]ವೆಂದೆಂಬುದಿದು ಕಾಲಗುಣವೋ ನಿಂದ |
ನೆಲದ ಗುಣವೋ ನೋಡು ನೋಡೆಂದು ಕಡುಮುಳಿದು ಕೋಪಿಸಿದನವನೀಶನು || ೧೧ ||

ಪಾವನಕ್ಷೀರಮಂ ಕೊಡುವ ಕೆಚ್ಚಲ ಮಾಂಸ- |
ವಾವ ಲೇಸಿನಿದುಳ್ಳ ಮಧುವನೊಸೆದೀವ ನೊಳ- |
ವಾವ ಲೇಸಧಿಕಕಸ್ತೂರಿಯಂ ಕುಡುವ ಮೃಗನಾಭಿ ತಾನಾವ ಲೇಸು ||
ದೇವರಿಗೆ ಸಲ್ಲವೇ ಉತ್ತಮಗುಣಂಗಳಿ- |
ರ್ದಾವ ಕುಂದಂ ಕಳೆಯಲಾರವವನೀಶ ಕೇಳ್ |
ಭಾವಿಸುವೊಡಿಂದೆಮ್ಮರೂಪಯೌವನವಿರಲು ಕುಲದ ಮಾತೇಕೆಂದರು || ೧೨ ||

ಅಕ್ಕಕ್ಕು ಬಚ್ಚಲುದಕಂ ತಿಳಿದೊಡಾರ ಮಿಾ- |
ಹಕ್ಕೆ ಯೋಗ್ಯಂ ನಾಯ್ಗೆ ಹಾಲುಳ್ಳೊಡಾರವೂ- |
ಟಕ್ಕೆ ಯೋಗ್ಯಂ ಪ್ರೇತವನದೊಳಗೆ ಬೆಳೆದ ಹೂವಾರ ಮುಡಿಹಕ್ಕೆ ಯೋಗ್ಯಂ ||
ಮಿಕ್ಕ ಹೊಲತಿಯರು ನೀವೆನೆ ನಿಮ್ಮ ಜವ್ವನದ |
ಸೊಕ್ಕು ರೂಪಿನ ಗಾಡಿ ಜಾಣತನದೊಪ್ಪವೇ- |
ತಕ್ಕೆ ಯೋಗ್ಯಂ ರಮಿಸಿದವರುಂಟೆ ಶಿವಶಿವಾ ಮಾತು ತಾ ಹೊಲೆಯೆಂದನು || ೧೩ ||

---

1 ಉಮ್ಮಳಿಕೆ=ಚಿಂತೆ.   2 ಉಲಿಹ=ಮಾತು.

ಹಾಡನೊಲಿದಾಲಿಸಿದ ಕಿವಿಗೆ ಹೊಲೆಯಿಲ್ಲ ಮಾ- |
ತಾಡಿ ನುಡಿಸಿದ ಬಾಯ್ಗೆ ಹೊಲೆಯಿಲ್ಲ ರೂಪ ನೆರೆ |
ನೋಡಿದ ವಿಲೋಚನಕೆ ಹೊಲೆಯಿಲ್ಲ ಮೆಯ್ಮುಡಿಗಳಿಂ ಸುಳಿವ ತಂಗಾಳಿಯಿಂ ||
ತೀಡುವ ಸುಗಂಧಮಂ ವಾಸಿಸಿದ ನಾಸಿಕಕೆ |
ನಾಡೆ ಹೊಲೆಯಿಲ್ಲ ಸೋಂಕಿಂಗೆ ಹೊಲೆಯಿರ್ದಪುದೆ |
ಕೂಡಿರ್ದ ಪಂಚೇಂದ್ರಿಯಂಗಳೊಳು ನಾಲ್ಕಧಿಕವೊಂದಧಮವೇನೆಂದರು ||೧೪||

ಕಂಡರಿವುವೈಸಲೇ ನಯನೇಂದ್ರಿಯಂ ಘ್ರಾಣ |
ಕೊಂಡರಿವುವೈಸಲೇ ವಾಸನೆಗಳಂ ಕರ್ಣ |
ವುಂಡರಿವುವೈಸಲೇ ಶಬ್ದಮಂ ದೂರದಿಂದಲ್ಲದವು ಮುಟ್ಟಲಿಲ್ಲ ||
ಭಂಡತನದೀ ಮಾತದೇಕೆಯುಪಮಾನವೇ |
ಕೆಂಡವನು ಮುಟ್ಟಿದೊಡೆ ಬೇವಂತೆ ಕೇಳ್ದೊಡಂ |
ಕಂಡು ವಾಸಿಸಿದೊಡಂ ಸುಡುವುದೇ ಕಾಳುಗೆಡೆಯದೆ ನೀವು ಹೋಗೆಂದನು
|| ೧೫ ||

ಶಾಪದಿಂದೆಮಗಾದ ದುಷ್ಕುಲಂ ಸತ್ಕುಲಜ |
ಭೂಪ ನಿನ್ನಯ ಸಂಗದಿಂ ಶುದ್ಧವಪ್ಪುದೆಂ- |
ಬಾಪೇಕ್ಷೆಯಿಂ ಬಂದೆವೆನಲೊಡನೆ ನಿಮಗೋಸುಗೆನ್ನ ಕುಲಮಂ ಕೆಡಿಪೆನೆ ||
ಪಾಪಿಗಳ ಪಾಪಮಂ ತೊಳೆವ ಗಂಗೆಗೆ ಪಾಪ- |
ಲೇಪವುಂಟಾಯಿತೇ ಹೇಳರಸ ಕುಲಧರ್ಮ- |
ವಾ ಪಂಥವಲ್ಲ ಕೊಡವಾಲ ಕೆಡಿಸುವೊಡಾವ್ರುವೆನಿತಾಗಬೇಕೆಂದನು || ೧೬ ||

ಏಗೆಯ್ದೊಡಂ ಕುಲಜರಧಮಸತಿಯರ ನೋಡ- |
ಲಾಗದರಿಯದೆ ಪಾಪದಿಂ ನೋಡಿದೊಡೆ ನುಡಿಸ- |
ಲಾಗದೆಂತಕ್ಕೆ ನುಡಿಸಿದೊಡೆ ಮನ್ನಿಸಲಾಗದನುಗೆಟ್ಟು ಮನ್ನಿಸಿದೊಡೆ ||
ಮೇಗೇನುಮಂ ಕರೆದು ಕುಡಲಾಗದಿತ್ತೊಡವ- |
ರೇಗೈದೊಡೊಪ್ಪದಿಂದೆನಗೆ ನೀವಂಗನೆಯ- |
ರಾಗಿಪ್ಪೆವೆಂದಿರ್ಕೆ ಸಲ್ಲದೊಡತಿಯರಪ್ಪೆವೆನಲು ತೀರದೆಯೆಂದನು || ೧೭ ||

ಮಾತಿಂಗೆ ಮಾತುಗುಡಲರಿದು ನಿನ್ನಯ ಸುತ- |
ಖ್ಯಾತಿಗಘಟಿಂಗೆ[1] ರೂಪಿಂಗೆ ಸುರುಚಿರಗುಣ- |
ವ್ರಾತಕ್ಕೆ ಹರೆಯಕ್ಕೆ ಗರುವಿಕೆಗೆ ಮನಸಂದು ಮತಿಗೆಟ್ಟು ಮರುಳಾದೆವು ||
ಓತು ಬಂದವರನುಪಚರಿಸದಿಪ್ಪುದು ನಿನಗೆ |
ನೀತಿಯೇ ಏಗೆಯ್ದೊಡಂ ಗಂಡನಾದಲ್ಲ- |
ದಾತುರಂ ಪೋಗದಿನ್ನೊಲಿದಂತೆ ಮಾಡು ನಿನ್ನಂ ಬೆನ್ನ ಬಿಡೆವೆಂದರು || ೧೮ ||

ಬಳಿವಿಡಿದು ಬಂದು ಮಾಡುವುದೆನ್ನನೇನು ಬೆಂ- |
ಬಳಿಯೊಳನಿಬರು ಹೊಲೆಯರಿಲ್ಲೆಂದೊಡಹಗೆ ಬಿಡೆ- |
ವೆಳಸಿ ಮೆಚ್ಚಿಸಿ ಮರುಳ್ಮಾಡಿ ಮತ್ತೊಲ್ಲನವನಿಪಸೆಂದು ಮೊರೆಯಿಡುತ್ತ ||
ಇಳಿಗೆಯ್ದೆ ಸಾರುತ್ತ ದೂರುತ್ತ ಬಪ್ಪವೆನೆ |
ಮುಳಿದು ಘುಡುಘುಡಿಸಿ ಕೋಪಾಟೋಪದಿಂ ಹಲ್ಲ |
ಕಳೆ ಬಾಯ ಹರಿ ಬೆಂಗೆ ಹೊಯ್ ಹೊಡೆಯೆನುತ್ತೆದ್ದನುರವಣಿಸಿ ಭೂನಾಥನು
|| ೧೯ ||

ತುಡುಕಿ ಚಮ್ಮಟಿಕೆಯಂ ಸೆಳೆದು ಪ್ರಧಾನ ಬಳಿ- |
ವಿಡಿದೇಳಲೊಬ್ಬರೊಬ್ಬರನು ಬೆನ್ನೊಡೆಯೆ ಮುಡಿ |
ಹುಡಿಯೊಳಗೆ ಹೊರಳೆ ಹಲುಬೀಳೆ ಬಾಯೊಡೆಯೆ ಮೆಯ್ ನೋಯೆ
ಕೈಯಳುಕೆ ವಿಾರಿ ||
ನಡೆದಲ್ಲಿ ನಡೆದು ಹೊಕ್ಕಲ್ಲಿ ಹೊಕ್ಕೊಡನೆ ಬಳಿ- |
ವಿಡಿದು ಹೇಸದೆ ಹೊಯ್ದು ಬೆನ್ನಟ್ಟಿ ತಿರುಗಲ್ಕೆ |
ಬಿಡಲವರು ಮೊರೆಯಿಡುತ ಗೋಳಿಡುತ ಬೆದರುತ್ತ ಹರಿದರಾ ಮುನಿಪನೆಡೆಗೆ
|| ೨೦ ||

1 ಅಘಟು=ಸಾಮರ್ಥ್ಯ F.

# ೬. ವನವಿಹಾರ

[ಕನ್ನಡ ಮಹಾಕವಿಗಳಲ್ಲಿ ಕವಿಕುಂಜರ, ಚತುರ್ಭಾಷಾಕವಿಚಕ್ರವರ್ತಿ ಎಂಬಿವೇ ಮೊದಲಾದ ಅಮೋಘ ಬಿರುದುಗಳುಳ್ಳ ನೇಮಿಚಂದ್ರನು ಕರ್ಣಾಟಕ ಕೃತಿಗೆ ಇಬ್ಬರೇ ಆದ ಸೀಮಾಪುರುಷರಲ್ಲಿ ಒಬ್ಬನು. ಆತನು ೧೨ನೆಯ ಶತಮಾನದ ಅಂತ್ಯಭಾಗದಲ್ಲಿ ಇದ್ದನು. ಆತನ ಲೀಲಾವತೀ ಗ್ರಂಥವು ಅಸದೃಶವಾದ ಶೃಂಗಾರಕಾವ್ಯವು. ಆತನಿಂದೀಚೆಯ ಕವಿಗಳನೇಕರು ಆತನ ಸ್ತುತಿ ಮಾಡುವಾಗ 'ಸುಡಿಸಿ ಕಾದಂಬರಿಯನು ಲೀಲಾವತಿಗಿಡಿಸಿ ಕಪ್ಪನು ಕೀರ್ತಿಜಗವ ಎಡೆಗೊಂಡ ನೇಮಿಚಂದ್ರ'ನೆಂದು ಹೇಳುವುದನ್ನು ನೋಡಿದರೆ ಶೃಂಗಾರದಲ್ಲಿ ಆತನನ್ನು ಮಿಗಿಸಿದ ಕವಿಗಳೇ ಇಲ್ಲವೆನ್ನಬೇಕು. ಆತನ ಇನ್ನೊಂದು ಗ್ರಂಥವು ಅರ್ಧವೇ ದೊರಕುವುದರಿಂದ ಅದಕ್ಕೆ ಅರ್ಧನೇಮಿಪುರಾಣವೆಂದು ಹೆಸರಾಗಿದೆ. ಇದರಿಂದ ಕವಿ ಅದನ್ನು ಮುಗಿಸುವುದರೊಳಗಾಗಿಯೇ ಕಾಲವಾದನೆಂದು ಊಹಿಸಬಹುದು. ಅದೂ ಒಂದು ಉತ್ಕೃಷ್ಟವಾದ ಗ್ರಂಥವು.

ಲೀಲಾವತೀ ಗ್ರಂಥದ ಷಷ್ಠಾಶ್ವಾಸದಲ್ಲಿ 'ವನವಿಹಾರ'ದ ವಿಷಯವು ದೊರೆಯುವುದು. ಕಥಾನಾಯಕನಾದ ಕಂದರ್ಪದೇವನು ಕನಸಿನಲ್ಲಿ ಒಬ್ಬ ಚೆಲುವೆಯನ್ನು ಕಂಡು ಮೋಹಗೊಂಡು ಆಕೆಯನ್ನು ಹುಡುಕುವುದಕ್ಕಾಗಿ ತನ್ನ ಗೆಳೆಯ ಮಕರಂದನೊಡನೆ ಹೊರಟು ಅನೇಕ ಪಟ್ಟಣಗಳನ್ನು ಕಳೆದು ಕುಮುದಾಕ್ಷಿಯೆಂಬ ಕೊಳದ ಬಳಿಯಲ್ಲಿ ವಿಶ್ರಮಿಸಿಕೊಂಡನು. ಅಲ್ಲಿ ಕಾರಣಾಂತರದಿಂದ ಒಂದು ಗಂಡು ಗಿಳಿ ತನ್ನ ಹೆಣ್ಣಿಗೆ ಕುಸುಮಪುರದ ಲೀಲಾವತಿಯ ವಿಷಯವನ್ನು ಹೇಳಿತು. 'ವನವಿಹಾರ'ದಲ್ಲಿ ಆ ಪುರದ ಸ್ತ್ರೀಯರು ಎಷ್ಟು ಆನಂದವಾಗಿ ಬನದಲ್ಲಿ ಬಿನದಿಸುವರೆಂದು ಗಿಳಿ ವಿವರಿಸುವುದು.]

ಅಲ್ಲಿ ಲತೆವನೆಯಲ್ಲಿ ಮಲ್ಲಿಕಾವನದಲ್ಲಿ |
ತಳಿರ ಕಾವಣ[1]ದಲ್ಲಿ ಕುಳಿರ್ವ ತಿಳಿಗೊಳದಲ್ಲಿ |
ಸಂಪಗೆಯ ಜೊಂಪ[2]ದೊಳ್ ಕಂಪಿಸುವ ಜಂಪದೊಳ್ |
ನನೆಗೊಂಚಲಂ ಮುಡಿದು ವನದಲರ್ಗಳಂ ಪಿಡಿದು |
ಮಧುವಿಂದೆ ಬೊಟ್ಟಿಟ್ಟು ಮಧುರತೆಗೆ ಮುಂಬಿಟ್ಟು |
ತನಿಗಂಪನಣ್ಪಿಕ್ಕಿ[3] ವನಜದಲರಂ ಪಿಕ್ಕಿ |
ಕುಸುಮರಜಮಂ ತುಳಿದು ಮುಸುರ್ವ ತುಂಬಿಗೆ ಮುಳಿದು |
ಕೆಂದಳಿರ್ಗೆ ಕಣ್ಣಿಟ್ಟು ಕರ್ಣಪೂರಮನಿಟ್ಟು |
ಕುಂದಕುಟ್ಮಳಮೌಕ್ತಿಕಾಭರಣಮಂ ತೊಟ್ಟು |
ಮಾಮಿಡಿಗಳಂ ತೆಗೆದು ಪಚ್ಚೆಸಾರಮನಿಕ್ಕಿ |
ಪೂಮುಡಿಗಳೊಳ್ ತಳಿರಲಂಬಣಮನೆಳಲಿಕ್ಕಿ |
ತೋರಮಲ್ಲಿಗೆ ಮುಗುಳ ಮಾಕುತಿಯನೊಸೆದಿಕ್ಕಿ |

1 ಕಾವಣ=ತ್ಸ. ಕಾಯಮಾನ; ಚಪ್ಪರ. 2 ಜೊಂಪ=ಗೊಂಚಲು.
3 ಅಣ್ಪಿಕ್ಕು=ಪೂಸಿಕೊಳ್ಳು.

ಹಾರಮುಂ ಸುರಯಿಯರಲಿಂ ಸಮೆದು ಮುರಿದಿಕ್ಕಿ |
ಸಿರಿಸದಲರ್ಗೇಸರಮನಲೆವ ಕುರುಳೊಳ್ ಸೂಸಿ |
ಸುರಿವ ಮಕರಂದಮುಂ ಮುದ್ದುಮೊಗದೊಳ್ಸೂಸಿ |
ಕೇದಗೆಯ ಕರ್ಣಪತ್ರಂ ಪೊಳೆಯೆ ಪಾಳೆಯೊಳ್ |
ಪಾದರಿಯ ಪಿಂಡುಗಂಕಣಮುಮರೆ ಲೀಲೆಯೊಳ್ |
ಬಗೆಗೊಳಿಸಿ ಸಂಪಗೆಯ ನೂಪುರಂ ಚರಣಮುಂ |
ನಗುವಂತೆ ನನೆದೊಡವು ಮುತ್ತಿನಾಭರಣಮುಂ |
ಪಸುಬಿರಿದ ಬಾಯ ಕಂಪಿಂ ಬೆರಸಿದೆಲರಿಂದೆ |
ಪಸದನಂ[1]ಗೊಂಡೆಸೆಯ ಮನಮೆಚ್ಚಿದಲರಿಂದೆ |
ಕೈಯ ಕೆಂಪಂ ತಳಿರ್ಗೆ ಮೈಯ ಪಸುರಂ ಬಿದಿರ್ಗೆ |
ಲಪನಗಂಧಮನಳಿಗೆ ಚಪಳತೆಯನರಗಿಳಿಗೆ |
ಸೋಗೆಗಾಟಮನಿತ್ತು ಕೋಗಿಲೆಗೆ ಸರವಿತ್ತು |
ರತಿಯ ಸೊಬಗಂ ಗೆಲ್ದು ಲತೆಯಸಂದದೆ ಪೋಲ್ದು |
ಕಾಣ್ಬ ಜಸಮೆನೆ ಮಿಸುಗೆ ಕಣ್ಬೆಳಗು ದೆಸೆದೆಸೆಗೆ |
ಪೆರೆನೊಸಲ ನೆರೆವಸಲ ನಸುನಗೆಯ ಪೊಸಬಗೆಯ |
ಗುರುಕಟಿಯ ಸವಿದುಟಿಯ ಬಿಡುಮುಡಿಯ ಪೊಳೆವಡಿಯ |
ಸುಳಿಗುರುಳ ನಳಿತೋಳ ಚಳತರವಿಲೋಚನದ |
ಮೃಗಮದದ ಮಗಮಗಿಪ ಕಳಕಳಿಪ ಮೆಲುಮೆಯ್ಯ |
ಛವಿಮುಗುಳ್ವ ಪದಪು[2]ಗುಳ್ವ ನುಣ್ಬೊಗರ[3] ಸೆಳ್ಳುಗುರ |
ಕಳರವದ ಸಲೆ ತವದ ಮುದಮೊಸೆವ ಮದಮೆಸೆವ |
ನಡುನಳಿವ ನಡೆಸೆಳೆವ ಕುರುನಡೆಯ ಕಣ್ಗಡೆಯ |
ನಳಿತೋಳ ಕಡುಮೋಳವಾವಳಿಪ[4] ಸಂಚಳಿಪ |

---

1 ಪಸದನ=ಅಲಂಕಾರ.

2 ಪದಪು=ಸೌರಂಭ.

3 ನುಣ್ಬೊಗರ್=ನುಣ್ಣಗಾದ ಹೊಳಪು.

4 ಅವ್ವಳಿಸು=ವ್ಯಾಪಿಸು.

ಪುರವರದ ಕಾಂತೆಯರ್ ತರಳಾಳಕಾಂತೆಯರ್ |
ಲಲಿತಸುಖಮೂರ್ತಿಯರ್ ಪೊಸದೇಸಿಕಾರ್ತಿಯರ್ |
ಸೊಬಗಿನಿಂ ಮದನಂಗೆ ಪೂಜೆಯಂ ಮಾಡಿದರ್ |
ವಿಬುಧವಿದ್ಯಾಧರನ ಗೀತಮಂ ಪಾಡಿದರ್ |

# ೨. ಸೀತಾಸ್ವಯಂವರ

[ಕ್ರಿ. ಶ. ೧೨ನೆಯ ಶತಮಾನದ ಆದಿಯಲ್ಲಿ ನಾಗಚಂದ್ರನೆಂಬ ಒಬ್ಬ ಕವಿ 'ಆದಿಕವಿ'ಯಾದ ಪಂಪನಷ್ಟೇ ಕೀರ್ತಿಯನ್ನು ಸಂಪಾದಿಸಿ 'ಅಭಿನವಪಂಪ'ನೆಂದು ಪ್ರಸಿದ್ಧನಾದನು. ಆದಿಪಂಪನಂತೆ ಈತನೂ ಎರಡು ಮಹಾಕಾವ್ಯಗಳನ್ನು ರಚಿಸಿ ರಾಮಚಂದ್ರಚರಿತಪುರಾಣ (ಪಂಪರಾಮಾಯಣ)ದಲ್ಲಿ ಲೌಕಿಕವನ್ನೂ ಮಲ್ಲಿನಾಥಪುರಾಣದಲ್ಲಿ ಜಿನಾಗಮವನ್ನೂ ಬೆಳಗಿದನು. ಈತನು ದೋರಸಮುದ್ರದ ಬಳ್ಳಾಳರಾಯನಲ್ಲಿ ಆಸ್ಥಾನಕವಿಯಾಗಿದ್ದಂತೆ 'ಕಂತಿಹಂಪರ ಸಮಸ್ಯೆಗಳು' ಎಂಬುದರಿಂದ ಗೊತ್ತಾಗುತ್ತದೆ.

ರಾಮಚಂದ್ರಚರಿತಪುರಾಣವು ಜೈನಕಾವ್ಯವಾದುದರಿಂದ ಅದಕ್ಕೂ ಹಿಂದೂ ರಾಮಾಯಣಕ್ಕೂ ಹಲವು ವ್ಯತ್ಯಾಸಗಳಿವೆ. ಇದಕ್ಕೊಂದು ದೃಷ್ಟಾಂತವು ಇಲ್ಲಿ ಕೊಡೋಣಾದ ಪಂಚಮಾಶ್ವಾಸದ "ಸೀತಾಸ್ವಯಂವರ"ವು. ಇಲ್ಲಿಯ ಕಥಾಕ್ರಮವು ಹೀಗಿದೆ:—

ಸೀತೆಗೆ ಒಬ್ಬ ಸಹೋದರನಿದ್ದನು. ಅವರು ಅವಳಿ ಮಕ್ಕಳು. ಪೂರ್ವ ವೈರದಿಂದ ಒಬ್ಬ ನಿಶಾಚರನು ಗಂಡುಶಿಶುವನ್ನು ಎತ್ತಿಕೊಂಡುಹೋದನು. ಅದು ಕೊನೆಗೆ ಇಂದುಗತಿಯೆಂಬ ಖೇಚರೇಂದ್ರನ ಕೈಗೆ ಸಿಕ್ಕಿ ಅವನಲ್ಲಿ ಪ್ರಭಾಮಂಡಲನೆಂಬ ಹೆಸರಿನಲ್ಲಿ ಬಳೆಯಿತು. ಇತ್ತ ಸೀತೆಯ ಸೌಂದರ್ಯವನ್ನು ಕೇಳಿ ನಾರದನು ಆಕೆಯನ್ನು ನೋಡುವ ಕುತೂಹಲದಿಂದ ಮೆಲ್ಲಗೆ ಬಂದಾಗ ಸೀತೆ ದಿಗಿಲುಬಿದ್ದು ಗಲಭೆಯನ್ನು ಮಾಡಲು ನಾರದನು ನಾಚಿಕೆಯಿಂದ ಪಲಾಯನ ಮಾಡಿದನು. ಈ ಸೇಡನ್ನು ತೀರಿಸುವುದಕ್ಕೆ ನಾರದನು ಸೀತೆಯ ಒಂದು ಚಿತ್ರವನ್ನು ಪ್ರಭಾಮಂಡಲನ ಕಣ್ಣೆದುರಿಗೆ ಹಾಕಿ ಆಕೆಯನ್ನು ವರಿಸುವಂತೆ ಅವನನ್ನು ಪ್ರೇರಿಸಿದನು. ಆದರೆ ಅದಕ್ಕೆ ಮೊದಲೇ ರಾಮನು ತನ್ನ ಪರಾಕ್ರಮದಿಂದ ಜನಕನ ಮೆಚ್ಚುಕೆಗೆ ಬಂದುದರಿಂದ ಸೀತೆಯನ್ನು ಆತನಿಗೆ ಕೊಡುವುದೆಂದು ನಿಶ್ಚಯವಾಗಿದ್ದಿತು. ಆದುದರಿಂದ ಸ್ವಯಂವರಸಭೆಯಲ್ಲಿ ಯಾರು ವಜ್ರಾವರ್ತವೆಂಬ ಚಾಪಕ್ಕೆ ಹೆದೆಯನ್ನೇರಿಸುವನೋ ಆತನೇ ಸೀತೆಗೆ ವರನಾಗುವನೆಂದು ನಿರ್ಧರಿಸಲಾಯಿತು. ರಾಮನೇ ಜಯಶಾಲಿಯಾದುದರಿಂದ ಸೀತೆ ಆತನನ್ನೇ ವರಿಸಿದಳು. ಪಂಪರಾಮಾಯಣದ ರಾಮನು ಹಿಂದೂ ರಾಮಾಯಣದ ಲಕ್ಷ್ಮಣನ ಹಾಗೆ ವರ್ಣಿತನಾಗಿರುವನು.]

ಹರಿವಂಶನಿಯಮದಿಂ ಹಿತ |
ಪುರೋಹಿತಂ ಶುಭಮುಹೂರ್ತದೊಳ್ ಕನ್ಯಕೆಯಂ ||
ತರವೇಳೆ ವೃದ್ಧಕಂಚುಕಿ- |
ವೆರಸು ಮನೋರಥಮೆನಿಪ್ಪ ರಥಮಂ ತಂದರ್ || ೧ ||

ಬಾಲೆಯ ಕಡೆಗಣ್ಣೋಟಮೆ |
ಸಾಲದೆ ನನೆಗಣೆಗಳೇವುವೆಂದು ಮನೋಜಂ ||
ಶೂಲಿಯ ನೊಸಲುರಿಗಣ್ಣಂ |
ಪೀಲಿಯ[1] ಕಣ್ಣೆಂಬನಾವನೆನಗಿದಿರೆಂಬಂ || ೨ ||

1 ಪೀಲಿ=ನವಿಲ ಗರಿ

ರಮಣಿಯರೆರಡುಂ ಕೆಲದೊಳ್ |
ಚಮರರುಹಮನಿಕ್ಕೆ ಬೀರೆ ಬೆಳ್ಗೊಡೆ ಬೇರೊಂ- ||
ದಮೃತಾಂಶುವನಾ ಕ್ಷಣದೊಳ್ |
ಹಿಮಾಂಶುಮುಖಿ ಮೆರೆದಳೀಕ್ಷಣಾಕರ್ಷಣಮಂ || ೩ ||

ಕನ್ನೆಯರಖಿಲಕಲಾಸಂ- |
ಪನ್ನೆಯರಯ್ನೂರ್ವರಲರ್ದ ತಾವರೆಗಳವೊಲ್ ||
ತನ್ನೊಡವರೆ ಬಂದಳ್ ಸಿರಿ |
ಸನ್ನಿದವಾದಂತೆ ಸೀತೆ ಕನ್ಯಾರತ್ನಂ || ೪ ||

ಕೆಲರಾಗಳ್ ಋಜುವಿಂದಮರ್ಧಋಜುವಿಂದಂ ಸಾಚಿ[1]ಯಿಂದಂ ಕೆಲರ್ |
ಪಲವುಂ ಭಂಗಿಯಿನಿರ್ದು ಜಾನಕಿಯ ರೂಪಾಶ್ಚರ್ಯಮಂ ನೋಡಿ ಕ- ||
ಣ್ಮಲರಂ ಚಿತ್ತಮನಿತ್ತು ಚಿತ್ರಿಸಿದವೊಲ್ ನಿಷ್ಪಂದರಾಗಿರ್ಪುದುಂ |
ಗೆಲೆವಂದತ್ತು ವಿಚಿತ್ರಚಿತ್ರಸಭೆಯಂ ಭೂಭೃತ್ಸಭಾಮಂಡಲಂ || ೫ ||

ಅನಿತಿಂದ್ರಿಯಮುಂ ವಿಷಯಮ- |
ನನಾಕುಲಂ ಬಿಟ್ಟು ದರ್ಶನೇಂದ್ರಿಯವೊಂದ- ||
ರ್ಕನುವಶಮಾದುವೆನಲ್ ನೃಪ- |
ತನಯರ್ ಜಾನಕಿಯ ಮೇಲೆ ಕಣ್ಣಾಗಿರ್ದರ್ || ೬ ||

ಕರಣಂ ನಯನಮೆ ವಿಷಯಂ |
ತರುಣಿಯೆ ಪೆರತೇನುಮಿಲ್ಲೆನಲ್ ರಾಜತನೂ- ||
ಜರ ಕಣ್ಗಳೆಳಸಿ ಬಳಸಿದು- |
ವುರವಣಿಸಿದುವಟ್ಟಿ ಮುಟ್ಟಿದುವು ಜಾನಕಿಯಂ || ೭ ||

ಬಿಸರುಹನೇತ್ರೆಗೆ ಜಾನಕಿ- |
ಗೆ ಸುಟ್ಟಿ[2] ತೋರುತ್ತುಮರಿಪಿದಳ್ ಪರಿವಿಡಿಯಿಂ ||
ಪೆಸರ್ಗೊಂಡು ವೃದ್ಧಕಂಚುಕಿ |
ಪೆಸರ ನೃಪಾತ್ಮಜರ ವಂಶವೀರ್ಯಶ್ರುತಮಂ || ೮ ||

---

1 ಸಾಚಿ=ಓರೆ. 2 ಸುಟ್ಟು=ಬೆರಳಿನಿಂದ ನಿರ್ದೇಶಿಸು.

ನನೆಯ ಸರಳ್ಗಳಂತೆ ನೆರೆದಿಂಗಳ ತಣ್ಗದಿರಂತೆ ಕಂತುರಾ- |
ಜನ ಕರವಾಳ ಮೆಯ್ವೊಳಪಿನಂತೆ ನವೋತ್ಪಲದಾಮದಂತೆ ಪೂ- ||
ಏನ ಮಳೆಯಂತೆ ತುಂಬಿಗಳ ಮಾಲೆ ತೆರಂಬೊಳೆವಂತೆ ಲೋಲಲೋ- |
ಚನರುಚಿ ಸುತ್ತಿ ಮುತ್ತಿದುದಶೇಷನೃಪಾಲಸಭಾಂತರಾಳಮಂ || ೯ ||

ಎರಗದೆ ಪೂತ ಚಂಪಕವನಕ್ಕೆ ನಮೇರುಮಹೀರುಹಕ್ಕೆ ಬಂ- |
ದೆರಗುವ ಚಂಚರೀಕದವೊಲಾಕೆಯ ಕೇಕರಮನ್ಯರಾಜಕ- ||
ಕ್ಕೆರಗದೆ ರಾಘವಂಗೆರಗೆ ಕಂಚುಕಿ ಕಣ್ಣರಿದಾ ಲತಾಂಗಿಗ- |
ಳ್ಕರೊಳಭಿವರ್ಣಿಸಲ್ ಬಗೆದಳಾ ಧರಣೀಶಗುಣೈಕದೇಶಮಂ || ೧೦ ||

ಕರಿಯಂ ಕಾಮಂ ಬಿಸಪಾಂ- |
ಡುರವರ್ಣಂ ರಾಮನಿದುವೆ ಭೇದಮಭೇದಂ ||
ನಿರತಿಶಯಮಪ್ಪ ರೂಪಿಂ |
ವರನಾಗಲ್ ನಿನಗೆ ತಕ್ಕನೀ ರಘುವೀರಂ || ೧೧ ||

ಈ ವಜ್ರಾವರ್ತಕೋದಂಡಮನವಯವದಿಂದೇರಿಸಲ್ ಸಾಲ್ವ ದೋರ್ದಂ- |
ಡಾವಷ್ಟಂಭಪ್ರಚಂಡಂ ಜನಕಜೆಗೆ ವರಂ ಬರ್ಪುದೆಂಬೀ ವ್ಯವಸ್ಥಾ ||
ರಾವಂ ಕರ್ಣಾವತಂಸಂ ಪಸರಿಸೆ ನಿಜಪೀಠಂಗಳಿಂದೆಳ್ದುದಾಗಳ್ |
ತೀವ್ರುತ್ತಿರ್ಪನ್ನೆಗಂ ಭೂಷಣರುಚಿ ಕಕುಭಾ[1]ನೀಕಮಂ ರಾಜಲೋಕಂ || ೧೨ ||

ಮನಸಿಜನುಂ ಚಂದ್ರಮನುಂ |
ದಿನಕರನುಮನೇಕರೇಕೆ ನೆರೆದರೊ ಪೇಳೆಂ- ||
ಬಿನೆಗಂ ನೃಪತನಯರ್ ಬಿ- |
ಲ್ಲನೇರಿಸಲ್ ತಮ್ಮ ಬೆಳಗೆ ಬೆಳಗೆಸ ಬಂದರ್ || ೧೩ ||

ಉರಿಯಂ ಕಾರುವ ಕೆಂಡಮಂ ಕರೆವ ಬಿಲ್ಲಂ ಕಂಡೆವಿಲ್ಲುಕ್ಕೆವಂ |
ತರುಣೀರತ್ನಮನೀಳ್ದುಕೊಳ್ವ[2] ಸಮಕಟ್ಟಿಂದಟ್ಟಿದಂ ಖೇಚರಂ ||
ಮರುಳಾದಂ ಜನಕಂ ವ್ಯವಸ್ಥೆಯನೊಡಂಬಟ್ಟಾರೊ ಕಲ್ಯಾಣತ- |
ತ್ಪರರೀ ಮಂಗಲಲಗ್ನದೊಳ್ ಕುಳಿಕದಂಷ್ಟ್ರಾಲಗ್ನಮಂ ಸೈರಿಪರ್ || ೧೪ ||

---

1 ಕಕುಭ=ದಿಕ್ಕು.  2 ಈಳ್ದುಕೊಳ್ಳು=ಅಪಹರಿಸು.

ಅಹಿದರ್ಶನಮಲ್ತು ಶುಭಾ- |
ವಹಂ ವಿವಾಹಕ್ಕೆ ವಿಷಮಮಿಾ ಮಾರ್ಗಮಹಿ- ||
ಗ್ರಹಣಂ ಮುನ್ನಂ ಪಾಣಿ- |
ಗ್ರಹಣಂ ಬಳಿಯಂ ಗಡಿನ್ನವಘಟಿತಮೊಳವೇ | ೧೫ ||

ಮಧುಪರ್ಕಮಲ್ತು ಮಂಗಳ |
ವಿಧಾನದೊಳಗೊಂದುಮಲ್ತು ಪಾವಂ ಪಿಡಿವೀ ||
ವಿಧಿ ಕನ್ಯಾಪರಿಣಯನ |
ಪ್ರಧಾನಕಾರ್ಯಂ ಗಡಿನ್ನವಘಟಿತಮೊಳವೇ || ೧೬ ||

ಕುಡುವೆಂ ಜಾನಕಿಯಂ ಪಿಡಿ- |
ದೊಡಜಗರ[1]ಮನೆಂದು ಮುನ್ನವೇಳ್ದೊಡೆಯಾ ಗಾ- ||
ರುಡಮಂ ಕಲ್ತು ವಿವಾಹ- |
ಕ್ಕೊಡರಿಸುವಂ ಬರಿದೆ ಪಿಡಿವನಾವನೊ ಪಾವಂ || ೧೭ ||

ದೇಶಾಧೀಶತನೂಭವರ್ ಸೆಡೆವುದುಂ ಸಾಕೇತಸಿಂಹಾಸನಾ- |
ಧೀಶಂ ಕಂಡು ದರಸ್ಮಿತಂ ದಶರಥಂ ಭ್ರೂವಲ್ಲರೀಪಲ್ಲವಾ- ||
ದೇಶಂ ನೋಡೆ ಮುಖಾಬ್ಜಮಂ ಸಭೆಯಿನೆಳ್ದಂ ತುಂಗವಂಶಂ ಸುರೇಂ- |
ದ್ರಾಶಾದಂತಿಬಲಂ ಜಿತಾಹಿತಬಲಂ ದುರ್ವಾರಬಾಹಾಬಲಂ || ೧೮ ||

ಪದುಳಂ ನಿಂದೆಡಗೈಯೊಳೆತ್ತಿ ರಘುಜಂ ಕೊಪ್ಪಂ[2] ಪದಾಂಗುಷ್ಠಮೂ- |
ಲದೊಳಿಟ್ಟೇರಿಸೆ ಕಾಲದಂಡನಿಭಮಂ ಕೋದಂಡಮಂ ಭೂತಳಂ ||
ಪದುಳಂ ನಿಂದುದೆ ಶೇಷಕಂಠಕಠಿನಾಸ್ಥಿಶ್ರೇಣಿ ನುಗ್ಗಾಗದಿ- |
ರ್ದುದೆ ಕೂರ್ಮೋನ್ನತಖರ್ಪರಂ[3] ನಳಿದು[4] ಬೆನ್ನಂ ಪತ್ತದೇಂ ಮಾಣ್ದುದೇ
|| ೧೯ ||

---

1 ಅಜಗರ=ಹೆಬ್ಬಾವು. 2 ಕೊಪು=ಬಿಲ್ಲಿನತುದಿ.
3 ಖರ್ಪರ=ಬೆನ್ನ ಚಿಪ್ಪು. 4 ನಳಿ=ಬಗು

ಪುಲಕಂ ಜಾನಕಿಗುತ್ಸವಂ ಜನಕರಾಜಂಗುಮ್ಮಳಂ ಖೇಚರಾ- |
ವಲಿಗುದ್ವೇಗಭರಂ ನರೇಂದ್ರಸುತಸಂದೋಹಕ್ಕೆ ಸಮ್ಮೋಹನಂ ||
ಲಲನಾಶ್ರೇಣಿಗೆ ವಿಸ್ಮಯಂ ಪುರಜನಕ್ಕಾಕರ್ಷಣಂ ಲೋಚನಾ- |
ವಲಿಗಾಯ್ತೇರಿಸಿ ನೀವಿ ಜೇವೊಡೆಯೆ ವಜ್ರಾವರ್ತಮಂ ರಾಘವಂ || ೨೦ ||

ಸಮದಂ ಲೀಲೆಯಿನೆತ್ತೆ ಖೇಚರಬಲಂ ಕಿಳ್ತೆತ್ತಿ ಪಾರಿತ್ತನು- |
ಕ್ರಮದಿಂದಾನತಮಾಗೆ ಕೊಪ್ಪು ಪಿರಿದುಂ ಲಜ್ಜಾನತಂ ರಾಜಲೋ- ||
ಕಮಣಂ ಬೆಕ್ಕಸಮುತ್ತುದೇರಿಸುವುದುಂ ಕೋದಂಡಮಂ ರಾಮನ- |
ಶ್ರಮದಿಂ ಮನ್ಮಥನಾಗಳೇರಿಸದೆ ಮಾರೆಚ್ಚಂ ಪುರಸ್ತ್ರೀಯರಂ || ೨೧ ||

ಅವತಂಸಮಾದುವಮರ- |
ಸ್ತವನಂಗಳ್ ಸಕಲಜನದ ಜಯಜಯನಿನದಂ ||
ಕಿವಿಸದ್ದಂ ಕಿಡಿಸಿದುದು- |
ತ್ಸವಪಟಹಧ್ವನಿಗಳುಣ್ಮಿ ಪೊಣ್ಮಿದುವಾಗಳ್ || ೨೨ ||

ಎತ್ತಿದುದು ಮಂಗಲಧ್ವಜ- |
ಮೆತ್ತಿದುದು ಸಿತಾತಪತ್ರಮಾಗಸಮಂ ಪೊ- ||
ತ್ತೆತ್ತಿದುದಾಶೀರ್ವಾದಂ |
ಮುತ್ತಿನ ಸೇಸೆಗಳನಿಕ್ಕಿದರ್ ಮಾನಿನಿಯರ್ || ೨೩ ||

ಅಲರ್ಗಣೆಯನಂಗಜಂಗೀ- |
ಯಲೆಂದು ರತಿ ಬರ್ಪ ಮಾಳ್ಕೆಯಿಂ ಮಾಲೆಯನಾ ||
ಲಲಿತಾಂಗಿ ಪಿಡಿದು ಕಣ್ಗಂ |
ಕೆಲಕ್ಕಮಾ ದಾಶರಥಿಯ ಬಗೆಗಂ ಬಂದಳ್ || ೨೪ ||

ಮಾಲೆಯ ಮೇಲೆ ತುಂಬಿಗಳ ಮಾಲೆ ತೆರಂಬೊಳೆದಾಡೆ[1] ಬೇರೆ ಪೂ- |
ಮಾಲೆಯ ಲೀಲೆಯಂ ಕೆದರೆ ಕೇಕರಮಾಲೆ ಶಿರೀಷಮಾಲೆಯಂ ||
ಸೋಲಿಸೆ ನೀಳ್ದ ಬಾಹುಲತೆ ತೋಳ ಮೊದಲ್ ಮದನಾನುರಾಗಮಂ |
ಸಾಲಿಡೆ ಸಾರ್ದು ಸೀತೆ ರಘುವಂಶಸಮೇರುಗೆ ಮಾಲೆಸೂಡಿದಳ್ || ೨೫ ||

---

1 ತೆರಂಬೊಳೆ=ಚೆನ್ನಾಗಿ ಪ್ರಕಾಶಿಸು.

# ೮. ರಾವಣಗರ್ವಭಂಗ

['ರಾವಣಗರ್ವಭಂಗ'ವು ನಾರಾಯಣಕವಿಕೃತ ಉತ್ತರರಾಮಾಯಣದೊಳಗಣದು. ಈ ಕಾವ್ಯವು ಒಂದು ಉದ್ಗ್ರಂಥವಾದರೂ ಪ್ರಕಾಶಕ್ಕೆ ಬಾರದೆ ಮೂಲೆಯ ಪಾಲಾಗಿದ್ದಿತು. ಓಲೆಯಲ್ಲಿದ್ದ ಆ ಗ್ರಂಥದ ಪರಿಚಯವನ್ನು ವಿದ್ವಾಂಸರಿಗೆ ಮಂಗಳೂರಿನಲ್ಲಿ ನೆರೆದ ಸಾಹಿತ್ಯಪರಿಷನ್ಮಹೋತ್ಸವ ಕಾಲದಲ್ಲಿ ಈ ಮಣಿಮಾಲೆಯ ಸಂಪಾದಕನು ಮಾಡಿದುದಲ್ಲದೆ ಅದರ ಒಂದೆರಡು ಭಾಗಗಳನ್ನು ಈ ಮೊದಲೇ ಪ್ರಕಟಿಸಿ ಸಾಹಿತ್ಯಪ್ರೇಮಿಗಳ ಅವಗಾಹನೆಗೊಪ್ಪಿಸಿರುವನು.

ಈ ಕವಿಯ ಕಾಲವು ಕೆಲವು ಅಂತರಾಳಿಕ ಆಧಾರಗಳಿಂದ ೧೬ನೆಯ ಶತಮಾನದ ಆದಿಭಾಗವೆಂದು ಗೊತ್ತಾಗಿದೆ. ಪರಿಷತ್ಸಭೆಯಲ್ಲಿ ಈ ಕವಿಯನ್ನು ಕುರಿತು ಆಡಿದ—'ನಾರಾಯಣಕವಿಯ ಶಕ್ತಿ ಮುಖ್ಯವಾಗಿ ಸುಗಮವಾದ ಪದಗಳನ್ನಿಡುವುದರಲ್ಲಿಯೂ ರೂಪಕೋತ್ಪ್ರೇಕ್ಷಾದ್ಯಲಂಕಾರಪ್ರಯೋಗದಲ್ಲಿಯೂ ಸಮಯೋಚಿತವರ್ಣನೆಗಳಲ್ಲಿಯೂ ವಿವಿಧರಸೋತ್ಪಾದನೆಯಲ್ಲಿಯೂ ಅಧಿಕವಾಗಿ ಕಾಣುವುದರಿಂದ ಆ ಎರಡು ಕವಿಗಳ (ಕುಮಾರವ್ಯಾಸ ಕುಮಾರವಾಲ್ಮೀಕಿಗಳ) ಗುಣಗಳು ಒಂದೇ ಕಾವ್ಯದಲ್ಲಿ ಕೂಡಿದ್ದು ಕವಿ ಅವರಿಬ್ಬರನ್ನೂ ಪರಸ್ಪರ ಮಿಗಿಸಿರುವನು' ಎಂಬ ಮಾತು ನಿಜವೆಂದು ಇಲ್ಲಿ ಕೊಟ್ಟಿರುವ ೧೧ನೆಯ ಸಂಧಿಯೊಳಗಣ 'ರಾವಣಗರ್ವಭಂಗ'ದಿಂದ ತಿಳಿಯಬಹುದಾಗಿದೆ-]

ಇದು ವಿಚಿತ್ರದ ವನವಲಾ ನೋ- |
ಡಿದೆನು ಶಿವಶಿವ ಬಹುವನಂಗಳ- |
ನಿದಕೆ ಸರಿಯೇ ಚೈತ್ರರಥವೆಂದೆನುತ ಪುಷ್ಪಕವ ||
ಕದನಗಲಿ[1]ಯಿಳಿತಂದು ನಿಂದನು |
ಸದಮಲೇಂದುಶಿಲಾಕಲಾಪಾ- |
ಗ್ರದಲಿ ರಂಜಿಪ ಮಾಧವೀಮಂಟಪದ ಸೀಮೆಯಲಿ || ೧ ||

ಈ ಮಹಾನರ್ಮದೆಯ ತೀರದ |
ಸೋಮಕಾಂತೋಪಲದ ಪೆಂಪು ಸು- |
ಧಾಮರೀಚಿಯ ಮಂಡಲದ ಸೊಂಪಾಗಿ ತೋರುತಿದೆ ||
ಶ್ರೀಮಹೇಶ್ವರಗಿಲ್ಲಿ ಲತಿಕಾ- |
ಧಾಮದೊಳು ಮಧ್ಯಾಹ್ನಪೂಜೆಯ |
ನೇಮವನು ವಿರಚಿಸುವೆನೆಂದನು ನೋಡಿ ಮಂತ್ರಿಗಳ || ೨ ||

---

1 ಕದನಗಲಿ=ಶೂರ(ನಾದ ರಾವಣನು).

ಹೈ ಹಸಾದವೆನುತ್ತ ವಂದಿಸ- |
ಮೂಹ ಕೈವಾರಿಸಲು[1] ಲತಿಕಾ- |
ಗೇಹವನು ಸುರಲೋಕದಲ್ಲಣನಂದು ಹೊರವಂಟು ||
ವಾಹಿನಿಯೊಳಗೆ ನೇಮದಿಂದವ- |
ಗಾಹನವ ಮಾಡಿದನು ತೊಲಗಲು |
ದೇಹದಗ್ಗದ ತಾಪ ತೆಗೆದುಟ್ಟನು ದುಕೂಲವನು || ೩ ||

ಚಂದ್ರಕಾಂತೋಪಲದ ಮುಂದೆ ಸು- |
ರೇಂದ್ರರಿಪು ಮಂಡಿಸಿದನಿದಿರಲಿ |
ಸಾಂದ್ರಮಣಿಮಯಹೇಮಪೀಠವನಿರಿಸಿ ಪೀಠದೊಳು ||
ಚಂದ್ರಶೇಖರಲಿಂಗವನು ನಯ- |
ನೇಂದ್ರಿಯಕೆ ಮುದವೊದಗುವಂತೆಯ- |
ತಂದ್ರನಾಗಿರಿಸಿದನು ಪುಷ್ಪಾಂಜಲಿಯನೊಡರಿಸಿದ || ೪ ||

ವಿಮಲಜಲದಿಂದರ್ಘ್ಯಪಾದ್ಯಾ- |
ಚಮನಮಜ್ಜನವನು ಸುಗಂಧೋ- |
ದ್ಗಮನಪಾವನಧೂಪದೀಪಫಲೋಪಹಾರವನು ||
ಕ್ರಮವೆನಿಸಿ ವಿವಿಧೋಪಚಾರವ- |
ನುಮೆಯ ರಮಣಗೆ ಮಾಡಿ ಪಾಡುವ |
ಸಮಯದಲಿ ನದಿಯಲ್ಲಿ ಕಂಡನದೊಂದು ಸೋಜಿಗವಾ || ೫ ||

ಅವನಿಪತಿ ಕೇಳ್ಮೇಲೆ ಪಡುವಲು |
ಹವಣಿಸಿದ ಹರುಷದಲಿ ಕಾಂತಾ- |
ನಿವಹದೊಡನರ್ಜುನನು[2] ಸಲಿಲಕ್ರೀಡೆಯಿಂದಿರುತ ||
ಜವದೊಳೈದುವ ವಾಹಿನಿಯ ಗಮ- |
ನವನು ನಿಲಿಸುವೆನೆನುತ ಬಾಹಾ- |
ನಿವಹದಲಿ ಕಟ್ಟಿದನು ವಿಂಧ್ಯಾಚಲಕೆ ಪಡಿಯೆನಿಸಿ || ೬ ||

---

1 ಕೈವಾರಿಸು=ಸ್ತುತಿಸು. 2 ಅರ್ಜುನನು—ಕಾರ್ತವೀರ್ಯಾರ್ಜುನನು.

ಕದಡಿದುವು ಮಡು ಕಮಲದಲಿ ಚೆ- |
ಲ್ಲಿದುವು ತುಂಬಿಗಳೆಡಬಲದೊಳೋ- |
ಡಿದುವು ಹಂಸಗಳೊದರಿದುವು ಕಾರಂಡಕೊಂಚೆಗಳು ||
ಬೆದರಿ ಸುಳಿದುವು ಮೀನಸಂತತಿ |
ಕದಬದಿಸಿ[1]ದುವು ಚಕ್ರಗಳು ತಿರು- |
ಗಿದುದು ವಾಹಿನಿ ಸೂಸಿ ಹರಿದುದು ಸುರಪತಿಯ[2] ದೆಸೆಗೆ ||೭||

ಅರರೆ ಹೇಳುವುದೇನು ದಶಕಂ- |
ಧರನ ಭುಜದೈಶ್ವರ್ಯ ನೀರಲಿ |
ನೆರೆಯಲಿಕ್ಕಿದು ಕಾರಣವೊ ಪೇಳೆನಿಸಿ ತೀರದಲಿ ||
ತೆರೆಗಳುರೆ ಕವಿದೆದ್ದು ಪೂಜಾ- |
ಪರಿಕರಂಗಳು ಸಹಿತ ಗಂಗಾ- |
ಧರನನೊಯ್ದುವು ಕೊಡಹಿ ಬಿಸುಟುವು ದಾನವೇಶ್ವರನ ||೮||

ತರಹರಿಸಿ[3] ಬಳಿಕಲ್ಲಿ ನಿಂದನು |
ಮುರಿದು ಬಹಳಕ್ರೋಧದಲಿ ಕೆ- |
ಕ್ಕರಿಸಿ[4] ನೋಡಿದನುರಿ ಮಸಗೆ ಕಂಗಳಲಿ ಈ ನದಿಯ ||
ಸುರರು ತಡೆದರೆ ಮೇಲೆ ಮೂಡಣ |
ಧರಣಿ ತಗ್ಗಿತೊ ತಿಳಿದು ಬಹುದೆನೆ |
ವರುಣದೆಸೆಗೈದಿದರು ಶುಕಶಾರಣರು ಬೇಗದಲಿ ||೯||

ಘನಪಥದೊಳೈತಂದರರರೆಯೋ- |
ಜನವನಾಗಳೆ ಕಂಡರಾ ವಾ- |
ಹಿನಿಯ ಗಮನವ ತಡೆದು ನಿಂದ ನೃಪಾಲಕುಂಜರನ ||
ವನಜಮುಖಿಯರ ಕೇಕರಾಲೋ- |
ಕನದ ಕಾಂತಿಗಳೊಡನೆ ಸೂಸುವ |
ವಿನುತ ಜಲಯಂತ್ರಾಭಿಸೇಚನದಿಂದ ಮೆರೆವವನ ||೧೦||

---

1 ಕದಬದಿಸು=ನಡುಗು.

2 ಸುರಪತಿಯ ದೆಸೆ=ಪೂರ್ವದಿಕ್ಕು; ಪಶ್ಚಿಮಕ್ಕೆ ಹರಿಯುವ ನರ್ಮದೆಯು ತಡೆಕಟ್ಟಿದುದರಿಂದ ಪೂರ್ವದಿಕ್ಕಿಗೆ ಹರಿಯತೊಡಗಿತು.

3 ತರಹರಿಸು=ಸಹಿಸು. 4 ಕೆಕ್ಕರಿಸು=ಕೆಂಪಾಗಿಸು.

ತೋಳುಸಾಸಿರದಿಂದ ಮೆರೆದನು |
ಲೋಲಫಣಗಳ ಶೇಷನಂತೆ ವಿ- |
ಶಾಲಶಾಖಾಳಿಗಳ ಕಲ್ಪಮಹೀಜದಂದದಲಿ ||
ಶ್ರೀಲಲಿತಭುಜಶಿಖರಿಗಳಲೇ- |
ವೇಳುವೆನು ಶತಶೃಂಗಪರ್ವತ- |
ದೇಳಿಗೆಗೆ ಮಿಗಿಲಾದನಾತನು ಚರಾಚರಂಗಳಿಗೆ || ೧೧ ||

ಬಂದರಾಳ್ದನ ಕಡೆಗೆ ಕೈಮುಗಿ- |
ದೆಂದರೆಲೆ ದನುಜೇಶ ನದಿಯನು |
ಮುಂದೆ ನಿಲಿಸಿದ ಭಟನನೊಬ್ಬನ ಕಂಡೆವಿಡೆ ಹೋಗಿ ||
ಇಂದುಶೇಖರನಮರಗಂಗೆಯ |
ನಂದು ಜಡೆಯಲಿ ತಡೆದವೊಲ್ ತಾ- |
ನಿಂದು ನೀರಿದಿರಿಂಗೆ ತಡೆದನು ತೋಳ ಬಲುಹಿನಲಿ || ೧೨ ||

ಆತನೇ ಹೈಹಯನು ಭುವನ |
ಖ್ಯಾತಭಟನಹುದೆನ್ನ ಕರಕಂ- |
ಡೂತಿಯನು ಕಳಚುವೆನು ಬಂದುದು ಸಮಯವಿಂದಿನಲಿ ||
ಭೂತಳೇಶನ ವೀರತನುಸಂ- |
ಭೂತರಕ್ತರಸಾಯನಗಳಲಿ |
ಭೂತಜಾತಿಯ ತಣಿಸುವೆನು ಮಾಯೆನುತ ಬೊಬ್ಬಿರಿದ || ೧೩ ||

ಮೂಲಮಂತ್ರವಿಧಾನಸಮರವಿ- |
ಶಾಲವಿದ್ಯಾಚತುರಸುಭಟರು |
ಘೀಳಿಡಲು ದೆಸೆ ಸಿಂಹನಾದಂಗಳನು ಮಾಡಿದರು ||
ಮೇಲೆ ಮೇಲುಬ್ಬೇಳ್ವ ಘನನಿ- |
ಸ್ಸಾಳ ಕಹಳಾರವದೊಡನೆ ಭೂ- |
ಪಾಲನಿದ್ದೆಡೆಗಾಗಿ ನಡೆದನು ಪಙ್ಕ್ತಿಕಂಧರನು || ೧೪ ||

ಗಜಬಜಿಸೆ ರೋಷಾಗ್ನಿ ಮಂತ್ರಿ- |
ವ್ರಜವ ಕಾಣುತ ನಿಮ್ಮ ಸಾವಿರ |
ಭುಜದವನ ಬರಹೇಳಿ ಹಳಚುವೆ ಗೆಲುವೆ ಸಮರದಲಿ ||
ತ್ರಿಜಗದುನ್ನತ ನೃಪರ ಕೀರ್ತಿ- |
ಧ್ವಜವನೀಡಾಡಿದೆನು ಬಂದೆನು |
ರಜನಿಚರಪತಿ ತಾನೆ ರಾವಣನೆನುತ ಗರ್ಜಿಸಿದ || ೧೫ ||

ಉಕ್ಕಿ ಸೂಸುವ ರೌದ್ರರಸವನು |
ಮುಕ್ಕುಳಿಸಿದನು ಕಂಗಳಲಿ ಗಂ- |
ಟಿಕ್ಕಿದುವು ನಿಡುಹುಬ್ಬುಗಳು ಕಾರ್ಬೊಗೆಯ ಹೊಗರಿನಲಿ ||
ಜಕ್ಕುಲಿಸಿ[1]ತೆವೆತವಕ ನೆಗಹಿ ನ- |
ಭಕ್ಕೆ ಗದೆಯನು ಜಡಿದು ಬೀಸುತ |
ರಕ್ಕಸರನರೆಯಟ್ಟಿ[2] ಕಂಡನು ನೃಪತಿ ಖಳಪತಿಯ || ೧೬ ||

ಬೇಹ[3] ಮಂತ್ರಿಗಳೆಲ್ಲ ಹರಣದ |
ಮೋಹದಲಿ ತೊಲಗಿದುದನಾ ನಿಜ |
ವಾಹಿನಿಯ ಕಳಕಳವ ಕಾಣುತ ಕನಲಿ ಬೇಗದಲಿ ||
ಆಹವಕೆ ಕೈನಿಲುಕಿ ವಿಂಶತಿ- |
ಬಾಹು ಬರೆ ಪಡಿತಳಕೆ ದಶಶತ- |
ಬಾಹು ನಡೆದನು ಕಾಳಕೂಟಕೆ ನಡೆವ ಶಿವನಂತೆ || ೧೭ ||

ಮಿಂಚಿನಂತಿರೆ ಹೊಳೆವ ಗಾಯವ |
ವಂಚಿಸುವ ಹೊಯ್ದಣೆವ[4] ಬೀಸುವ |
ಹೊಂಚಿ ಮರ್ಮಸ್ಥಾನದಲಿ ಮೊನೆದೋರಿ ಬಗೆಯರಿವ ||
ಸಂಚದಲಿ ಮೋಹರಿಪ[5] ಗೆಲವಿಗೆ |
ಮುಂಚಿ ಹೊಗಲನುಗೈವ ಸಮರಸ |
ಮಂಚಿತಪ್ರೌಢಿಗಳ ಮೆರೆದರು ಗದೆಯ ಕದನದಲಿ || ೧೮ ||

---

1 ಜಕ್ಕುಲಿಸು=ವ್ಯಾಪಿಸು. 2 ಅರೆಯಟ್ಟು=ಓಡಿಸು.
3 ಬೇಹ=ಬೇಕಾದ. 4 ಅಣೆ=ಹೊಡೆ.
5 ಮೋಹರಿಸು=ಒಡ್ಡು.

ಸುದತಿಯರ ಮೇಳದಲಿ ಸರಿಗಮ |
ಪದನಿಗಳ ಮೃದುಗಾನಸುಧೆಯನು |
ಮುದದಿ ಸವಿವಂತಲ್ಲ ಸರನಾಯಕ ನಿದಾನಿಸಲು ||
ಇದು ಮಹಾರಣಭೂಮಿ ಬೀಸುವ |
ಗದೆಯ ಬಿರುಹೊಯ್ಲುಗಳು ಸವಿನೋ- |
ಡಿದಕೆ ನೀವಂಗೈಸಿದಿರೆ ಲೇಸೆಂದನಮರಾರಿ || ೧೯ ||

ಕೆಟ್ಟು ನುಡಿದರೆ ಮೂರ್ಖರನು ಸರಿ |
ಗಟ್ಟಿಕೊಂಬರೆ ಗುರುವರೆಲವೋ |
ದಿಟ್ಟನಹೆ ಶೃಂಗಾರರಸಪತಿಯೆನಿಸಿ ಮಾಧವನು |
ಮೆಟ್ಟಿ ವೀರಾವೇಶವಲಿ ತರಿ- |
ದೊಟ್ಟುವನು ದಾನವರನಂತರೆ- |
ಯಟ್ಟಿ ಸದೆಯದೆ ಬಿಡೆನು ನೋಡೆನುತೆರಗಿದನು ಖಳನ || ೨೦ ||

ತರಹರಿಸಿ ಗಾಯವನು ಧೈರ್ಯದ |
ಹುರಿಯೊಡನೆ ವಾಸಿ[1]ಯನು ಬಲಿದು- |
ಪ್ಪರಿಸಿ ಗದೆಯನು ಜಡಿದು ನುಡಿದನು ತೋಳುಸಾಸಿರದ ||
ಧರಣಿಪತಿ ನೀನೆಂಬ ಗರ್ವದ |
ಗಿರಿಗೆ ತಾನಿದು ವಜ್ರದಂಡದ |
ಪರಿ ಕಣಾ ನೋಡೆನುತಲಪ್ಪಳಿಸಿದನು ಕೈಯೊಡನೆ[2] || ೨೧ ||

ಸದೆದನಾತನ ಹೊಯ್ಲು ಗದೆಯಿಂ- |
ದಧಟರಿಬ್ಬರು ಮತ್ತೆ ಸಮರ- |
ತ್ವದಲಿ ದೆಕ್ಕಾದೆಕ್ಕಿ[3]ಯಲಿ ಹೋರಿದರು ಸೆಲ ಬಿರಿಯೆ ||
ಉದಧಿಗಳು ತುಳುಕಾಡೆ ಗಿರಿಗಳು |
ಕದಬದಿಸೆ ರಣಭೂತಸಂತತಿ |
ಕೆದರೆ ಮೃತ್ಯುಂಜಯ ಮಹಾದೇವನೆ ಸುರಸ್ತೋಮ || ೨೨ ||

1 ವಾಸಿ=ಪಂತ. 2 ಕೈಯೊಡನೆ=ಕೂಡಲೆ. 3 ದೆಕ್ಕಾದೆಕ್ಕಿ=ಸ್ಪರ್ಧೆ.

ಗಿರಿಗೆ ಗಿರಿ ವನಕರಿಗೆ ಕರಿ ಸಾ- |
ಗರಕೆ ಸಾಗರ ಕೇಸರಿಗೆ ಕೇ- |
ಸರಿ ಮಸಗಿದಂದವನು ತೋರಿದರುಭಯಬಲ ಬೆದರೆ ||
ಅರಸ ಮುಳಿದಾ ಸಮಯದಲಿ ಮದ |
ಮುರಿಯದಿಹ ದಶಕಂಧರನ ಹೇ- |
ರುರವನಿಟ್ಟಲೆ ಮೂಢ ಕೆಡೆ ಕೆಡೆಯೆನುತ ಬೊಬ್ಬಿರಿದ || ೨೩ ||

ನಟ್ಟುದಾ ಗದೆ ನಡುಸಡುಗಿ ಹಿ- |
ಮ್ಮೆಟ್ಟಿ ಬಿಲ್ಲಂತರಕೆ ದಿವಿಜಘ- |
ರಟ್ಟ ಬಿದ್ದನು ಚಂಡಮಾರುತಹತಿಯ ಕುಜದಂತೆ ||
ಕೆಟ್ಟುದರಿವಿನ ಮಾರ್ಗ ಬಂದೆಡೆ- |
ಗೆಟ್ಟುಕೊಂಡುದು ಮೂರ್ಛೆ ಹರಣದ |
ಕಟ್ಟು ಸಡಲಿತು ನಿಟ್ಟುಸುರು ಹಳುವಾಯ್ತು ಮೂಗಿನಲಿ || ೨೪ ||

ರಾಜಕುಲನೀರೇಜವನದಿನ |
ರಾಜನೊಯ್ಯನೆ ಸಾರಿ ಮೂರ್ಛೆರ |
ರಾಜನನು ಹೆಡಗೈಯ ಬಿಗಿದನು ಘೋರಪಾಶದಲಿ ||
ಆ ಜಯವನೊಲಿದೀಕ್ಷಿಸುತ ಸುರ- |
ಭೂಜದರಲನು ಸುರಿದು ಸುರರು ಪ- |
ರಾಜಿಸಿದರಾ ಸಮಯದಲಿ ಭೇರಿಗಳು ಮೊಳಗಿದುವು || ೨೫ ||

# ೮. ರಾವಣವಧೆ

[ತೊರವೆಯ ರಾಮಾಯಣವು ಭಾಮಿನೀಷಟ್ಪದಿಯ ಕಾವ್ಯಗಳಲ್ಲಿ ಪ್ರಸಿದ್ಧವಾದ ಒಂದು ಗ್ರಂಥವು. ಇದನ್ನು ಬರೆದ ನರಹರಿಕವಿಯು ೧೫ನೆಯ ಶತಮಾನದವನು. ಬಿಜಾಪುರಜಿಲ್ಲೆಯ ತೊರವೆ ಗ್ರಾಮವು ಆತನ ವಾಸಸ್ಥಳವಾಗಿದ್ದುದರಿಂದ ಆತನು ಬರೆದ ರಾಮಾಯಣಕ್ಕೆ ತೊರವೆಯ ರಾಮಾಯಣವೆಂಬ ಹೆಸರಾಯಿತು. ಮೃದುಮಧುರವಾದ ಪದಗಳೂ ತಡೆಯಿಲ್ಲದ ವಾಕ್ಪ್ರವಾಹವೂ ಈ ಕಾವ್ಯದ ಮುಖ್ಯ ಲಕ್ಷಣಗಳೆಂದು ಇಲ್ಲಿ ಕೊಟ್ಟಿರುವ 'ರಾವಣವಧೆ'ಯಿಂದ ತಿಳಿಯಬಹುದು. ಇದು ಆ ಕಾವ್ಯದ ಯುದ್ಧಕಾಂಡದ ಐವತ್ತೊಂದನೆಯ ಸಂಧಿಯೊಳಗಿದೆ.]

ರಾಮ ಕೇಳಿನ್ನೇಕೆ ಸೀತೆಯ |
ಕಾಮಿತವು ಕಡು ಮರುಳಲಾ ಸು- |
ತ್ರಾಮ ಕಳುಹಿದ ತೇರ ಬಲುಹುಂಟೆಂದು ಬೆರತೆಯಲಾ ||
ವ್ಯೋಮಕೇಶವಿರಿಂಚಿಮುಖ್ಯಮ- |
ಹಾಮಹಿಮಸುರಕೋಟಿಗಳು ಸಂ- |
ಗ್ರಾಮಕಭಿಮುಖವಾದೊಡಣುವಿಗೆ ಬಗೆವನಲ್ಲೆಂದ || ೧ ||

ಎಲವೊ ರಾವಣ ಕೇಳು ಶಂಕರ- |
ಜಲರುಹೋದ್ಭವಮುಖ್ಯದಿವಿಜರ |
ಬಲಿದ ಭಟನೇ ತಾನದಾರೆಂದರಿದುದಿಲ್ಲವಲಾ |
ಹಲವು ತಲೆಗಳ ಹೊತ್ತ ಕೊರಳಿನ- |
ಲಲಗು ಚಾಚಿದು ನಾಸಿಕಂಗಳ- |
ನಿಳುಹಿ ಸೀತೆಯ ತೆಗೆವ ಪರಿಯನು ನೋಡು ನೀನೆಂದ || ೨ ||

ಬಲ್ಲೆನೊಪ್ಪಚಿ ಕೇಳಿ ಹೆಂಗುಸಿ- |
ನಲ್ಲಿ ಮಾಡಿದ ಬಲುಹ ಹಳಿಹುಲು |
ಬಿಲ್ಲ ಮುರಿದುದನಟ್ಟಿ ಬಡಹಾರುವನ ಬಟ್ಟೆಯಲಿ ||
ಬಿಲ್ಲ ಸೆಳೆದುದನನುಜ ನೂಕಲು |
ಖುಲ್ಲರೊಳಗಾಡಿದುದ ಕಾಗೆಯ |
ಹುಲ್ಲಲಿಟ್ಟಂಜಿಸಿದ ಬಿರುದಿನ ಬಲುಹ ತಾನೆಂದ || ೩ ||

ಆರು ನಿನ್ನವೊಲೆಳೆಯ ಹರಿಣನ |
ನಾರಚದಲೆಚ್ಚವರು ನಚ್ಚಿನ |
ನಾರಿಯನು ನೀಗಾಡಿ ಹಕ್ಕಿಯ[1] ನುಡಿಗೆ ನಡೆದಿವರ ||
ಸೇರಿ ಬಡಕೋಡಗನ[2] ಕೊಂದೀ |
ವೀರತನವಾರ್ಗುಂಟು ನಗರದ |
ಖಾರಿಗೆಯ ಬಂಧಿಸಿದ ಬಲುಮೆಯದಾರಿಗುಂಟೆಂದ || ೪ ||

ಅಳುಕಿದನಲಾ[3] ಕಾರ್ತವೀರ್ಯನು |
ಕಲಹದಲಿ ನಿನಗಂಜಿ ಬಾಲವ |
ಬೆಳಸಲಮ್ಮದೆ ವಾಲಿ ಬದುಕಿದನವುಮ ಪುರಹರನ ||
ಉಳುಹಿದೆಯಲಾ ರಜತಶೈಲವ |
ತಲೆಕೆಳಗಮಾಡದೆ ವಿದೇಶನ |
ಕುಲವ ಸಲಹಿದೆ ಬಿಲುದೆಗೆಯದತಿಸುಭಟನಹುದೆಂದ || ೫ ||

ಆದೊಡೆಯು ತೊಡಗುವುದು ತೋಟಿ[4]ಯ- |
ನ್ನೈದೆ ನಗೆಗೆಡೆ ನಮಗೆ ನಿಮ್ಮೋ- |
ಪಾದಿಯವರಾವಲ್ಲವಾಗಿ ದಶಾಸ್ಯ ಕೇಳೆಲವೊ ||
ಆದಿಯಲಿ ನೀ ನಮ್ಮ ರಘುವಂ- |
ಶೋದಯದ ಪಾರ್ಥಿವಕುಲೇಂದ್ರನ |
ಕಾದಿ ಕೊಂದುದರಿಂದ ಕೆಣಕಿದೆವೈಸೆ ನಾವೆಂದ || ೬ ||

ಆದರಿನೀಗೆನಗುರುವಿರೋಧಾ- |
ಸ್ಪದನು ನಾವಾ ಬಳಿಯ ಬವರದ- |
ಲೊದಗಿದೆವು ನಿನ್ನೊಡನೆ ಸಮರೋದ್ಯೋಗಕೇಳಿಯಲಿ ||
ಇದನು ನೀ ಕೈಕೊಂಬುದೆಂದ- |
ಗ್ಗದ ಮಹಾಮೋಘಾಸ್ತ್ರದಲಿ ತಲೆ- |
ಯುದಿರಲೆಚ್ಚನು ಬೊಬ್ಬಿರಿದು ರಘುಪತಿ ದಶಾನನನ || ೭ ||

---

1 ಹಕ್ಕಿ=ಜಟಾಯು. 2 ಬಡಕೋಡಗ=ವಾಲಿ.
3 ರಾವಣನು ಇವರುಗಳೊಡನೆ ಸೋತರೂ ಗೆದ್ದನೆಂಬುದು ಕಟಕಿಯ ಮಾತು.
4 ತೋಟಿ=ಯುದ್ಧ.

ದಿವಿಜರಾಯೆಂದುಬ್ಬಿದರು ರಾ- |
ಘವನ ಮಹಿಮೆಗೆ ಕಮಲಭವಭವ- |
ರವಿರಳಾನಂದೈಕಸುಖಮಯರಾದರಭ್ರದಲಿ ||
ಅವತರಿಸಿದುವು ಮತ್ತೆ ತಲೆಗಳು |
ಕವಕವಿಸುತಟ್ಟೆ[1]ಯಲಿ ಕಲಿರಾ- |
ಘವಮಹೀಪತಿ ಕಂಡು ಕೈಗಲ್ಲದಲಿ ಬೆರಗಾದ || ೮ ||

ಮುರಿದು ನೋಡಿದನಿಂದ್ರಸಾರಥಿ |
ಸರಳಗಮನವ ಕಾಣದೆಲೆ ರಘು- |
ವರನೆ ಚಿತ್ತೈಸಹಿತವಧೆಗೇಕಕಟ ಕೃಪೆ ನಿನಗೆ ||
ಉರವಣಿಸುತವೆ ತೇಜಿಗಳು ಮುಂ- |
ಬರಿದು ಬರುತಿದೆ ಬಾಣತತಿ ಕೊ- |
ಕ್ಕರಿಸುವವನಲ್ಲವಸು ಕೊಲೆಗೆಲೆ ದೇವ ಕೇಳೆಂದ || ೯ ||

ಸಾಕು ಮಾತಳಿ ಸಮರ ನಾವು ಸ- |
ಮಾಕಬಾಹಿರರರಿ[2]ಶಿರಂಗಳ |
ನೂಕಿ ಬೇಸತ್ತೆವು ಶರಂಗಳ ಸೋಲವೆಮಗಾಯ್ತು ||
ಓಕರಿಸಿದಳು ಮೃತ್ಯುವೀ ಲೋ- |
ಕೈಕವೀರನ ನಮಗೆ ತಾನಿ- |
ನ್ನೇಕೆ ಜಯದಭಿಲಾಷೆ ತಿರುಗಿಸು ತೇರ ಕೆಲಕೆಂದ || ೧೦ ||

ತೆರಳು ನೀನಿನ್ನೇನ ಮಾಡುವೆ |
ಹಿರಿದು ಬಳಲಿದೆ ಸಾರಥಿತ್ವದ |
ಹರಹಿನಲಿ ರಿಪುವಿಜಯವಿಶ್ರುತಿಗಾವಭಾಗ್ಯರಲೆ ||
ವರವಿಭೀಷಣದೇವ ಬಾ ನಮ- |
ಗೆರಡುನಾಲಗೆಯಾದುದೆವ್ಮಸು |
ಶರಣುಹೊಕ್ಕರಿಗಾದುದಪಯಶವೆಂದನಾ ರಾಮಾ || ೧೧ ||

---

1 ಅಟ್ಟೆ=ಮುಂಡ.   2 ಸಮಾಕದಾಹಿರರು=ಯುದ್ಧಕ್ಕೆ ಅಯೋಗ್ಯರು

ಶರಣುಹೊಗು ನಿಮ್ಮಣ್ಣದೇವನ |
ಮರಳಿ ನಮ್ಮೊಡನಾಡಿ ಕೆಡಬೇ- |
ಸೆರಡುಕಡೆಯಲಿ ಕಷ್ಟತರವೆಮಗಾಯ್ತು ಲೋಕದಲಿ ||
ಪಿರಿದು ಬಳಲಿದೆ ಹೋಗೆನುತ ನಿಜ |
ಕರವ ಮುಗಿದು ದಿನೇಂದ್ರತನುಜನ |
ಕರೆದು ನುಡಿದನು ಮನದ ದುಗುಡದ ಮಧುರವಚನದಲಿ || ೧೨ ||

ಬನದೊಳಾಡಿದ ಭಾಷೆ ನಮಗಿಂ- |
ದಿನಲಿ ಹುಲುಕಸವಾಯ್ತು ಕೊಲಿಸಿದೆ- |
ನನುವರದೊಳಳಿಯಾಸೆಯಲಿ ನನ್ನಯ ಪರಿಗ್ರಹದ ||
ಮನದೊಳೆಮ್ಮನು ಬೈಯದಗ್ರಜ |
ತನುಜಸಹಿತ ಸಮಸ್ತಕಪಿವಾ- |
ಹಿನಿಸಹಿತ ಕಿಷ್ಕಿಂಧೆಗಭಿಮುಖನಾಗು ಹೋಗೆಂದ || ೧೩ ||

ಸೇವೆಯಲಿ ನಿನ್ನಿಂದ ಬಿಟ್ಟಿ- |
ನ್ನಾವನೈ ಹನುಮಂತ ಮಂತ್ರಕ- |
ಲಾವಿಶೇಷಜ್ಞರಲಿ ಜಗದೊಳಗಾರು ಸರಿ ನಿನಗೆ ||
ಭಾವಿಸಿದಿರೇ ಜಾಂಬವರೆ ಸ- |
ದ್ಭಾವದಲಿ ನೀವುತ್ತಮರಲಾ |
ನಾವು ದೈವವಿಹೀನರಾದೆವು ತೆರಳಿ ನೀವೆಂದ || ೧೪ ||

ತಮ್ಮ ಬಾ ಜಗವರಿಯಲೂಣೆಯ |
ನೆಮ್ಮಿತೆ[1]ಮ್ಮನದಾವ ಮೋರೆಯ- |
ಲೆಮ್ಮ ಮಾತೃತ್ರಯದ ಮುಸುಡನು ಗುರುಗಳಾನನವ ||
ತಮ್ಮದಿರ ವದನವನು ಕಾಂಬೆವು |
ತಮ್ಮ ಕೇಳೈ ತೆರಳು ನೀನಿ- |
ನ್ನೆಮ್ಮೊಡನೆ ಬಳಲಿಕೆಯ ಬಳಸದೆ ಪುರಕೆ ಮರಳೆಂದ || ೧೫ ||

---

1 ನೆಮ್ಮು—ಹೊದ್ದು.

ಸೀತೆಯಸು ಹೋಗಾಡಿ ನೃಪನ- |
ಜ್ಞಾತನಾದನು ಕಾಣೆನೆಂಬೀ |
ಮಾತ ಹೇಳಿದ್ದು ಕೂಡಿಕೊಂಡಿಹುದಗ್ರಜಾನುಜರ ||
ತಾತ ಹೋಗೆನ್ನಯ್ಯ ತನ್ನೊಳು |
ಮಾತನಾಡದೆ ತೆರಳೆನಲು ಸುರ |
ಸೂತ ನಗುತಿಂತೆಂದನಸುರಾರಾತಿಗುಚಿತದಲಿ || ೧೬ ||

ದೇವ ನೀನೀತಗಳೊಡನೆ ಮಾ- |
ಯಾವಿಲಾಸೋಕ್ತಿಗಳ ನುಡಿವೀ- |
ಭಾವಕವು ತನ್ನೊಡನೆ ಕೊಳ್ಳದು ಕಪಟವೇಕಿನಿತು ||
ಆ ವಿರಿಂಚಿಪ್ರಮುಖಸಕಲಸು- |
ರಾವಳಿಗಳೊಡಗೂಡಿ ಪೌಲೋ- |
ಮೀವರನು ಬಿನ್ನೈಸಿದುದನಾನರಿಯೆನೇಯೆಂದ || ೧೭ ||

ಹೊಸಬ ನೀನಿವರ್ಗಳಿಗೆ ದಿಟ ನೀ |
ಹೊಸಬನೇ ತನಗೀ ತನಕಮಾ- |
ನುಷಚರಿತ್ರ ವಿಧಾತ್ರಪಿತನೆಂದರಿಯೆನೇ ತಾನು ||
ಬಿಸುಟ ಚಾಪವ ತೆಗೆದುಕೋ ಸಂ- |
ಧಿಸು ಶರಾಳಿಯನನಿತರೊಳಗೀ |
ಯಸುರನುಳಿದರೆ ಪೊಗುವೆನಗ್ನಿಯನೆಂದು ಗರ್ಜಿಸಿದಾ || ೧೮ ||

ಮರುಳಲಾ ಸುರಸೂತ ವಾಣೀ- |
ಶ್ವರಪಿತನು ನಾನಾದೊಡಿವನೀ |
ಪರಿಯೆ ಜೀವಿಸುವನೆ ವಿವೇಕವಿಚಾರವಿನಿತಿಲ್ಲ ||
ನರರು ನಾವ್ಸಾಕಿನ್ನು ತನ್ನನು |
ಹಿರಿದು ಹೊಗಳಲಿಬೇಡವೆನುತು- |
ರ್ವರೆಗೆ ಧುಮ್ಮಿಕ್ಕಿದನು ಧುಗುಡವ ಹಿಡಿಯಲವ ಬಳಿಕ || ೧೯ ||

ಮನದೊಳಂಜದಿರೆಲೆ ರಘುಕ್ಷಿತಿ- |
ಜನಪ ತೊಡೆಸಸ್ತ್ರವನು ಬಾಣಾ- |
ಸನ ಮಹಾಸ್ತ್ರವಿಮುಕ್ತಹಸ್ತರ ಕೂಡೆ ನಿನ್ನವರ ||
ಅನುವರವನನುಸರಿಸು ಬಳಿಕೆ- |
ಮ್ಮನುವರಕೆ ಕಲಿಯಾಗಿ ನಿಲು ನಿಲು- |
ವೆನು ಸುರಾವಳಿ ಮೆಚ್ಚೆ ನಿನ್ನೊಡನೆಂದನಸುರೇಂದ್ರ || ೨೦ ||

ಇಳೆಗೆ ರಥದಿಂದಿಳಿದ ರಘುಕುಲ- |
ತಿಲಕನನು ಕಾಣುತ್ತ ದಿವದಿಂ- |
ದಿಳಿದನಾ ಸಮಯದಲಿ ಸರಸಿಜಭವನನುಜ್ಞೆಯಲಿ ||
ಕಲಶಭವನಾ ಮನುಕುಲೇಂದ್ರನ |
ಬಳಿಗೆ ನರನಾಟಕದ ನಟನೆಯ |
ಕೆಲಸ ಕರ ಲೇಸಾಯಿತೆಂದನು ಮಂದಹಾಸದಲಿ || ೨೧ ||

ಲವನೆ ಕೇಳ್ಬೈ ಬಲದ ಭುಜದಲಿ |
ಭವನು ವಾಮದ ಕರದಲಂಬುಜ |
ಭವನು ಮುಖದಲಿ ಶಿಖಿ ಕೃತಾಂತನು ಕೋಪದುರುಬೆಯಲಿ ||
ಪವನನುಶ್ವಾಸದಲಿ ಶೌರ್ಯೋ- |
ತ್ಸವದಲಾದ್ಯಾಶಕ್ತಿ ಮಿಕ್ಕಿನ |
ದಿವಿಜರಂಗೋಪಾಂಗದಲಿ ನೆಲಸಿದರು ರಾಘವನ || ೨೨ ||

ಬಳಿಕ ಶಾರ್ಙಮಹಾಧನುವನು- |
ಜ್ವಲಿತ ಮೌರ್ವಿಯ ನೀವಿ ಬೆರಳಲಿ |
ಲುಳಿವಡೆದು ಬರಸೆಳೆದು ಹೂಡಿದನಾ ಮಹಾಶರವ ||
ಅಲಗಿನಲಿ ಲಯರುದ್ರನಂಬಿನ |
ವಳೆಯದಲಿ ಪರಮೇಷ್ಠಿ ಬಾಣದ |
ಹಿಳುಕಿನಲಿ ಹರಿ ಗರಿಯೊಳಿಸೆದರು ಯಮುಸಮೀರಣರು || ೨೩ ||

ಈತನೀಗಲೆ ಜನನಮರಣಾ- |
ತೀತ ಮಾಯಾಮಹಿಮ ಸಗುಣ ಸ- |
ನಾತನನು ಸಂದೇಹ ತಾನಿನ್ನೇಕೆ ಪೂರ್ವದಲಿ ||
ಈತನೊಡನೆ ವಿರೋಧವೆಮಗಭಿ- |
ಜಾತವಾದುದು ಜನ್ಮಮೂರರೊ- |
ಳೀತಕಂಜಿಕೆ ನಮಗೆ ಮುಕ್ತಿಯ ಸೂರೆ ತನಗೆಂದ || ೨೪ ||

ತಾನದೆತ್ತಲು ಜನಕತನುಜಾ- |
ಮಾನಿನಿಯದೆತ್ತಲು ಚತುರ್ಮುಖ |
ಸೂನುಸನಕಾದಿಗಳನುಜ್ಞೆಯ ಫಲವದೀಗ ಕಣಾ ||
ಶ್ರೀನೃಸಿಂಹ ನೃಸಿಂಹಮಾಯಾ- |
ಮಾನುಷವ್ಯಾಪಾರ ಸಾರಕೃ- |
ಪಾನಿಧಿಯೆ ಶರಣೆನುತ ಬಿಲುದನಿದೋರಿ ಬೊಬ್ಬಿರಿದ

ನೋಡಿದನು ರಾವಣನನುಚಿತವ |
ಕೂಡಿಕೊಂಡ ನಯೋಕ್ತಿಯಲಿ ಮಾ- |
ತಾಡಿದನು ಕೇಳ್ವೈ ದಶಾನನ ಮೂರುಲೋಕದಲಿ ||
ರೂಢಿಸಿದ ಭಟ ನೀನು ಕಾಮುಕ- |
ರಾಡಿಕೆಯ ಬಿಡು ಕರೆನು ತಮ್ಮನ |
ಕೂಡಿ ಬದುಕಭಯಪ್ರದಾನವದೀಗ ನಿನಗೆಂದ || ೨೬ ||

ಶರಣು ಹೊಗುವವನಲ್ಲ ಮುಂದಣ |
ಸಿರಿಯ ಬಯಸುವನಲ್ಲ ಸೀತೆಯ |
ತಿರುಗಿ ಬಿಡುವವನಲ್ಲ ಮತಿ ಬೇರೆನ್ನ ಮಾನಸದ ||
ಕರುಣ ನಿನಗಿನ್ನೇಕೆ ನಿನ್ನಯ |
ಪರಿಯ ಬಲ್ಲೆನು ಬಿಡು ಮಹಾಸ್ತ್ರವ |
ಮರಣಕೊರಲಿದೆ[1]ನಾದೊಡೀಶ್ವರಭಜಕನಲ್ಲೆಂದ || ೨೭ ||

1 ಒರಲು=ಅಳು; ದುಃಖಿಸು.

ತಪ್ಪದೆಸೆ ಮಾತೇಕೆ ನಿನಗಿ- |
ನ್ನೊಪ್ಪಿಸಿದೆ ಫಲಪದವ ನೀ ದಿಟ |
ತಪ್ಪುವಾತನೆ ಕಳುಹು ನಮ್ಮೆಡೆಗಮ್ಮುಮವಡ ಶರವ ||
ಒಪ್ಪವನು ಬಳಿಕಿಟ್ಟುಕೋಯೆನೆ |
ನಿಪ್ಪಸರದಲಿ ಬೊಬ್ಬಿರದು ನಿ-|
ಮ್ಮಪ್ಪನೆಚ್ಚನು ವೀರಧೀರೋದಾತ್ತದಶಮುಖನ || ೨೮ ||

ಉರವಣಿಸುವ ಮಹಾಸ್ತ್ರಕಂಪನ |
ಸರಿಯ ಸುರಿದನು ಮುಟ್ಟವಿಸಿ ಬರೆ |
ಬೆರಸಿ ಹೊಯ್ದನು ಖಡುಗಖರ್ಪಣಪರಶುಪರಿಘದಲಿ ||
ಉರಕೆ ಮೋಹಲು[1] ಮುಷ್ಟಿಯಿಂದ-|
ಬ್ಬರಿಸಿ ತಿವಿದನು ಸುರನರೋರಗ |
ಸರಣಿಯಲಿ ದಶಶಿರನವೊಲು ರಣಧೀರನಾರೆಂದ || ೨೯ ||

ತಡೆವುವೇ ತಾರೆಗಳು ತರಣಿಯ |
ನಡಿಸಿ ನುಂಗುವ ರಾಹುವನು ಕಡಿ-|
ದುಡಿದುಹಾಯ್ಕಿತು ಸರಳುರಸ್ಥಳವನು ದಶಾನನನ ||
ಹೊಡೆದುವಮರರ ಭೇರಿ ರಾಮನ |
ಮುಡಿಯೊಳೊಕ್ಕುವು ಕುಸುಮವಮರರ |
ಮಡದಿಯರು ಸುಳಿದೆತ್ತಿದರು ಜಯಮಂಗಳಾರತಿಯ || ೩೦ ||

1 ಮೋಹು=ಹೊಡೆ.

# ೧೦. ಶ್ರೀರಾಮಪಟ್ಟಾಭಿಷೇಕ

[ಆಧುನಿಕನಾದರೂ ಪ್ರಾಚೀನರ ಕೀರ್ತಿಯನ್ನು ಪಡೆದು ಕರ್ಣಾಟಕಸಾಹಿತ್ಯದಲ್ಲಿ ಗಣ್ಯನೆನ್ನಿಸಿಕೊಂಡ ನಂದಳಿಕೆ ಲಕ್ಷ್ಮೀನಾರಣಪ್ಪನು ೧೯ನೆಯ ಶತಮಾನದ ಅಂತ್ಯಭಾಗದಲ್ಲಿದ್ದನು. ಈತನು ದಕ್ಷಿಣ ಕನ್ನಡದ ಶ್ರೇಷ್ಠ ಕವಿಗಳಲ್ಲಿ ಒಬ್ಬನು. ತನ್ನ ಸ್ವಂತ ಹೆಸರಿನಲ್ಲಿ ಪ್ರಕಟಮಾಡಿದರೆ ತನ್ನ ಕಾವ್ಯಗಳು ಪ್ರಸಿದ್ಧಿಗೆ ಬಾರವೆಂದು ಗ್ರಹಿಸಿ ಈತನು ಅವನ್ನು ಮೈಸೂರಿನ 'ಕಾವ್ಯಕಲಾನಿಧಿ'ಯಲ್ಲಿ ಇತರ ನಾಮಗಳಿಂದ ಪ್ರಕಟಿಸಿದನು. ಆದುದರಿಂದ ಈತನ ಕಾವ್ಯಗಳಾದ ಶ್ರೀರಾಮಾಶ್ವಮೇಧ ಶ್ರೀರಾಮಪಟ್ಟಾಭಿಷೇಕ ಅದ್ಭುತರಾಮಾಯಣಗಳನ್ನು ಈತನು ತಿಳಿಸಿದಂತೆ ಮುದ್ದಣ ಲಕ್ಷ್ಮೀ ಮುಂತಾದವರೇ ಬರೆದರೆಂಬ ಭ್ರಾಂತಿ ಕೆಲಗಾಲವಿದ್ದಿತು. ಈಚೆಗೆ ಬೆಂಗಳೂರಿನ ಕರ್ಣಾಟಕ ಸಂಘವು ಈತನ ಜೀವನಚರಿತೆಯನ್ನೂ ಕಾವ್ಯಪ್ರಶಂಸೆಯನ್ನೂ ಒಳಕೊಂಡ ಒಂದು ಗ್ರಂಥವನ್ನು ಪ್ರಕಟಿಸಿದುದರಿಂದ ಆ ಕಾವ್ಯಗಳ ಕರ್ತೃವು ಈತನೆಂಬುದು ನಿರ್ವಿವಾದವಾಗಿದೆಯೆಂದು ಹೇಳಬಹುದು.

'ಶ್ರೀರಾಮಪಟ್ಟಾಭಿಷೇಕ'ವು ಶ್ರೀರಾಮಪಟ್ಟಾಭಿಷೇಕದ ೫ನೆಯ ಸಂಧಿಯಲ್ಲಿದೆ. ಈ ಕಥೆಯನ್ನು ಶೇಷನು ವಾತ್ಸ್ಯಾಯನನಿಗೆ ಹೇಳಿದಂತೆ ಕವಿ ರಚಿಸಿರುವನು.]

ಮುನಿಪ ಕೇಳ್ ಬಳಿಕ ವೈಶಾಖಸಿತಸಪ್ತಮಿಯ |
ದಿನದುದಯಕಾ ಪುರದೊಳೆತ್ತಲುಂ ಬದ್ದಣದ[1] |
ದನಿ ತಡೆಯದೈತರ್ಪುದೆಂದು ದಿಕ್ಪಾಲರಂ ಕರೆವಂತೆ ಪುದಿದುದೊಡನೆ ||
ಅನಿತರೊಳ್ ಬಳಿವಿಡಿದು ನಡೆತರ್ಪ ನಾಲ್ದೆಸೆಯ |
ಜನಪಾಲಕರ ವಿಭವಕೆಂಬುದೇನೆಣಿಕೆಗೊಳ- |
ಗೆನಿಸದಂದಣತುರಗಕರಿರಥೋತ್ಪ್ರಂಗಳ್ಗೆ ಬೀದಿಗಳ್ ಕಿರಿದಾದುವು || ೧ ||

ಬಂದ ರಾಯರನುಚಿತವಚನದಿಂ ನುಡಿಸಿ ಕರೆ- |
ತಂದು ಬೀಡಾರಮಂ ತೋರ್ದು ಪಡಿಯಿತ್ತು ನಲ- |
ವಿಂದೆ ಮನ್ನಿಸುತಿರ್ದರಲ್ಲಲ್ಲಿ ಗುರುವಸಿಷ್ಠನ ನೇಮದಿಂ ಸಚಿವರು ||
ಮುಂದೆ ಸುಮುಹೂರ್ತಮಂ ಕಾಯುತಿರ್ದರ್ ಶುಕ್ರ- |
ಮಂದಗುರುಗಳ್ ಕಮಲಜನ ನೇಮದಿಂ ಸಭಾ- |
ಮಂದಿರವನಮರವರ್ಧಕಿಗ[2]ಳಿಂದ್ರನ ನೇಮದಿಂದ ಪವಣಿಸುತಿರ್ದರು || ೨ ||

---

1 ಬದ್ದಣ = ಮಂಗಳವಾದ್ಯ.    2 ವರ್ಧಕಿ = ಬಡಗಿ.

ಬಾಡಬರ[1]ಗಡಣಂ ಪ್ರವಾಸಿಕರ ಕೂಟಮಾ |
ನಾಡಿಗರ ಗೊಂದಣಂ ಜೋಸಿಯರ ನೆರವಿ ಮೇಣ್ |
ಕೋಡಗರ ಬಳಗಮಲ್ಲಲ್ಲಿ ನೆಲೆಗೊಂಡಿರ್ದುವೀ ಮಹೋತ್ಸವವನಿರದೆ ||
ನೋಡಿ ಪಾವನರಪ್ಪೆವೆನುತೆ ಮೂಲೋಕದಿಂ |
ನಾಡೆ ಸುರನರನಾಗದನುಜಗಂಧರ್ವಾದ್ಯ- |
ರಾಡಲೇಂ ಸಕಲರ್ಬೈತಂದು ನೆರೆದಿರೆ ಕಣ್ಗೆ ಸೊಗಸಾದುದಾ ಶಾಲೆಯು || ೩ ||

ತುಂಬಿಹುದು ಚಾವಡಿಯೊಳಖಿಲಜನಜಾಲಮಿ- |
ನ್ನಿಂಬಿಲ್ಲ ಕೇರಿಯೊಳ್ ನಡೆತರ್ಪ ಪಯಣಿಗ- |
ರ್ಗೆಂಬ ಬಗೆಯಿಂ ಪೊರಡಲನುಮಾನಮಾಗೆ ತಾಮೆಲ್ಲರೊಡಗೂಡಿ ಬಳಿಕ ||
ಅಂಬರದೊಳೊಂದೆಡೆಯೊಳೊಗ್ಗಿ ನೋಡುವರೆನ- |
ಲ್ಕೊಂಭತ್ತರೆಣಿಕೆಯಿಂ ಗ್ರಹರೇಕರಾಶಿಯೊಳ- |
ಗಂಬುಜಾಸನನ ಕಟ್ಟಳೆಯೊಳೆಸೆದರ್ ಶುಭೋದಯರಾಗಿ ಶುಭಕಾರ್ಯಕೆ || ೪ ||

ಆ ಸಮಯದೊಳ್ ಸಕಲಮುನಿಗಳಭಿಮತದಿಂದಿ- |
ದೇ ಸುಲಗ್ನಂ ಮಹೋತ್ಸವಕೆಂದು ಪೇಳೆ ಕಮ- |
ಲಾಸನಂ ವರಪುರೋಹಿತನಾಜ್ಞೆಯಿಂ ಪೊರಟು ಸಾಮಂತರಾಯರೆಲ್ಲ ||
ಸೌಸವದ ಪನಿನೀರ ಜಳಕಮಂ ಗೆಯ್ಸಿ ಪೊಸ |
ದೇಸಿಯಿಂ ಪಟ್ಟುಡೆಯನುಡಿಸಿ ಭಂಡಾರದಿಂ |
ಮೀಸಲೊಂದದ[2] ರನ್ನದಾರಮಂ ತುಡಿಸಿ ರಘುರಾಮನಂ ಕರೆತಂದರು || ೫ ||

ವಸುಧೆಯಂ ಪೊರೆದು ದುಷ್ಟರನಿಕ್ಕಿ ಪೊತ್ತ ಬಿ- |
ಳ್ಜಸದೆಸಕಮಲ್ಲದೆ ಕಿರೀಟದೀಧಿತಿಯಲ್ಲ- |
ಮೊಸೆದ ಜಯರಮೆಯ ಮೇಖಲೆಯ ಪೊಳೆಪಲ್ಲದಿದು ಕೇಯೂರಕಾಂತಿಯಲ್ಲ ||
ನಿಸದಂ ಪ್ರತಾಪದತಿಶಯಮಲ್ಲದಿದು ಮೇಲೆ |
ಮಿಸುಪ ಮಾಣಿಕದ ಪದಕದ ಶೋಭೆಯಲ್ಲಮೆನೆ |
ಪಸದನಂ ಪೊಸತೊಂದು ಮಾಳ್ಕೆಯಿಂದೆಸೆಯೆ ಪಟ್ಟಾಭಿರಾಮಂ ಬಂದನು || ೬ ||

1 ಬಾಡಬ=ದ್ರಾಹ್ಮಣ.
2 ಮೀಸಲೊಂದದ=ಆ ಮೊದಲು ಉಪಯೋಗವಾಗದ, ಹೊಸ.

ಆಲಿಸೆಲೆ ಮುನಿಪ ಮನ್ನಣೆಯ ಸಾವಂತರೊಡ- |
ನೋಲಗಕೆ ನಡೆತರ್ಪ ರಾಮನಂ ಕಂಡು ದಿ- |
ಕ್ಪಾಲಕರ್ ವಣಿಯೆ ಮುನಿಗಳ್ ಪರಸೆ ಕೈಗಟ್ಟಿ ನಿಲೆ ಮಿಕ್ಕ ಸರ್ವಜನರು ||
ಮೂಲದರಸುಗಳ ಪರಿವಿಡಿಯೊಳೊಪ್ಪಿದ ಕಿರಣ- |
ಮಾಲಿಯನ್ವಯದ ಸಿಂಹಾಸನದಿ ಸಕಲಸುರ- |
ಜಾಲದನುಮತಿಯಿಂದೆ ಕೈವಿಡಿದು ಕುಳ್ಳಿರಿಸಿದಂ ಸುಮಂತ್ರಂ ಸಭೆಯೊಳು || ೭ ||

ಮಣಿದು ಗುರುಪದಕೆ ಪಿರಿಯರ್ಗೆರಗಿ ಮನದಿ ದಿನ- |
ಮಣಿಗೆ ಕೈಮುಗಿದು ಸಭೆಗಿಂಬಾಗಿ ಬಾಗಿ ಬೆಲೆ- |
ಮಣಿಯ ಗದ್ದುಗೆಯನೆಲ್ಲರ್ ಪೊಗಳೆ ಗುರುವಾಜ್ಞೆಯಿಂದೇರೆ ಕಾಕುತ್ಸ್ಥನು ||
ರಣದ ಮೈಸಿರಿಯೆನಿಪ ಕೈದುವಂ ಭಾಸ್ಕರಕಿ- |
ರಣದ ಪಡಿಯೆನೆ ಪೊಳೆವ ಮಗುಟವುಂ ಕುಲದನುಸ- |
ರಣದ ಪದ್ಧತಿಯಂತೆ ರಾಜಮುದ್ರೆಯನೊಪ್ಪಿಸಿದರಾಗ ಮಂತ್ರಿವರರು || ೮ ||

ಪೊಂಗಳಸದೊಳ್ ತುಂಬಿ ಬಳಿಕ ವೇದೋಕ್ತದಿಂ |
ಗಂಗೆಯಂ ಗಂಧಕುಸುಮಾಕ್ಷತೆಗಳಿಂದೆ ಮುನಿ- |
ಪುಂಗವವಸಿಷ್ಠನರ್ಚಿಸಿ ಸಕಲರಭಿಮತದೊಳಾ ಕ್ಷಣಂ ಶ್ರೀರಾಮಗೆ ||
ಮಂಗಲಾನಕದ ರವದೊಡನೆ ಸುರಗಾಯಕರ |
ಸಂಗೀತಮಧುರಸ್ವರಂ ಬೆರೆಯೆ ಸಾಮಗಾ- |
ನಂಗಳೊಡನಾಶಿಷದ ನಿರ್ಘೋಷಮೆಸೆಯೆ ತಾನಭಿಷೇಕವುಂ ಗೈದನು || ೯ ||

ನೂತನಾಲಂಕಾರದಿಂದೆಸೆಯೆ ಮತ್ತೆ ರಘು- |
ಜಾತನಾ ಗದ್ದುಗೆಯೊಳಿತ್ತಲಬ್ಜಾಕ್ಷಿಯರ್ |
ಸೀತೆಯಂ ಕಮ್ಮೆಣ್ಣೆಯಂ ಪೂಸಿ ಮಿಸಿಸಿ ತುರುಬಿಕ್ಕಿ ಕುಸುಮಗಳ ಮುಡಿಸಿ ||
ಪೀತಾಂಬರವನುಡಿಸಿ ಮಣಿವಜ್ಜ ಮಂ ತುಡಿಸಿ |
ಶೀತಾಂಶುಮಂಡಲಕೆ ಕರೆಯೆನಲ್ ಕತ್ತುರಿಯ- |
ನೋತು ಪಣೆಯೊಳ್ ತಿಲಕವಿಟ್ಟು ಕೈಗೊಟ್ಟು ಕರೆತಂದರೋಲಗದ ಸಭೆಗೆ || ೧೦ ||

ಕುಂತಲಭ್ರಮರಮುಡಿದಾವರೆಯ ಮಧುವಂ ನಿ- |
ತಾಂತಮಸಿದುಂಬುದೆನೆ ಭೂಜಾತೆ ಬಂದು ನಿಜ |
ಕಾಂತನಡಿಗೆರಗಿ ಪಿಡಿದೆತ್ತಿ ವಾಮಾಂಕದೊಳ್ ಕುಳ್ಳಿರಿಸಿದಂ ರಾಮನು ||
ಸಂತಸದ ಸುಗ್ಗಿಗೆ ಕುಕಿಲ್ವ ಕೋಗಿಲೆಯಂತೆ |
ದಂತಿಗಮನೆಯರೊಲ್ದು ಪಾಡಿ ಪೊಂದಟ್ಟೆಯೊಳ್ |
ಕಾಂತರತ್ನಪ್ರದೀಪಂ ಬೆಳಗೆ ಬೆಳಗಿದರ್ ಮಂಗಳಾರತಿಯನಾಗ || ೧೧ ||

ನಾರದಂ ಪಾಡುತಿರೆ ತುಂಬುರಂ ಕಲಮಂದ್ರ- |
ತಾರವ್ಯವಸ್ಥೆಯಿಂ ವೀಣೆಯಂ ನುಡಿಸುತಿರೆ |
ವಾರಿಜೋದ್ಭವನಲ್ಲಿ ಸೂಳ್[1]ರಿತು ಪೊಗಳುತಿರೆ ವೇದಸೂಕ್ತಂಗಳಿಂದ ||
ವಾರನಾರಿಯರೆಲ್ಲ ನೃತ್ಯವಾಡುತಿರೆ ಗಂ- |
ಭೀರ ಭೇರೀರವಂ ಪೊಣ್ಮುತಿರೆ ದೇವಮಂ- |
ದಾರಪುಷ್ಪಸ್ರಜದ ತೋರಮಳೆಗರೆದುದೋಲಗದಿ ರಾಮನ ಶಿರದೊಳು || ೧೨ ||

ಆದಮೆ[2]ಡಬಲಮಿರ್ದು ಚಮರೀರುಹಂಗಳಂ |
ಸೋದರರ್ ಬೀಸೆ ಸರಿಲೆಕ್ಕಮಂ ಕರಣೀಕ- |
ರೋದೆ ಜಸದೊಸಗೆಯಂ ವಂದಿಗಳ್ ಕೊಂಡಾಡೆ ಕುಲದೇಳ್ಗೆಯಂ ಮಗಧರು ||
ಸಾದರಮಮಾತ್ಯರ್ ನಿಯುಕ್ತವಾರ್ತೆಗಳಂ ನಿ- |
ವೇದಿಸೆ ಸಮಸ್ತಸಾಮಂತರೋಲೈಸೆ ಸಂ- |
ಮೋದದಿಂ ಪಟ್ಟಾಭಿರಾಮನೊಡ್ಡೋಲಗಂಗೊಟ್ಟಿರ್ದನಾ ಸಭೆಯೊಳು || ೧೩ ||

ಭೂರಿದಕ್ಷಿಣೆಯನವನೀಸುರರ್ಗೀವಂ ಕು- |
ಬೇರನಬ್ಜೋದ್ಭವಂ ಮುನಿಗಳ್ಗೆ ತಾನೆ ಸ- |
ತ್ಕಾರಮಂ ಮಾಳ್ಪನಮರೇಂದ್ರ ಸಭ್ಯಾಗತರ್ಗೆಡೆಗೆಯ್ವನೋಲಗದೊಳು ||
ಮಾರುತಂ ಬೀಸುವಂ ಧರ್ಮರಾಜಂ ಕುಸುಮ |
ಹಾರಾನುಲೇಪನಂಗಳಿನರ್ಚಿಸುವನೀಶ- |
ನಾರೈವನಗ್ನಿ ವೀಳ್ಯವನಿಡುವನರ್ಘ್ಯಪಾದ್ಯವನೀವನಾ ವರುಣನು || ೧೪ ||

---

1 ಸೂಳ್=ಸರದಿ. 2 ಆದಂ=ಅಧಿಕವಾಗಿ.

ಯವನ ಕುಳ್ಳಿರ್ ಚೈದ್ಯ ಬಂದೆರಗು ಮುಂದೆ ಸೈಂ- |
ಧವ ಸುರ್ಗದಿರ್ ಪೊರಡು ಸೌರಾಷ್ಟ್ರ ಕಾಣಿಕೆಯ- |
ನವನೀಶಗಿಡು ನಿಷಧ ಹೂಣನಾರ್ ಸೌವೀರನೆಲ್ಲಿ ಕರೆ ಹೈಹಯನನು ||
ಪವಣರತು ನಡೆ ಲಾಳ ಕೈಗಟ್ಟು ಚೋಳ ಸಿಂ- |
ತವನೊಡನೆ ಪೋಗು ಕರ್ಣಾಟ ನೀನೆಂದಲ್ಲಿ |
ಪವನಜಂ ಮುಂತಪ್ಪ ಮರ್ಕಟಪ್ರವರರೋಲೈಸುತಿರ್ದರ್ ಸಭೆಯೊಳು || ೧೫ ||

ಇದು ಸುರಪನಿತ್ತ ಪೊಸಬಾಸಿಗಂ ಕೈಕೊಳ್ಳು- |
ದಿದು ಶೇಷನಿತ್ತ ಮಾಣಿಕದ ಕುಂಡಲಮಿತ್ತ- |
ಲಿದು ವರುಣನಿತ್ತ ಮುತ್ತಿನ ಹಾರಮಿದು ಹುತಾಶನನಿತ್ತ ರತ್ನಂಗಳು ||
ಇದು ಕುಬೇರಂ ತಂದ ಪೊನ್ನಭಂಡಾರಮಿಂ- |
ತಿದು ಸಮೀರಂ ತಂದ ಕತ್ತುರಿಯ ಭಾರಮಿ- |
ನ್ನಿದು ಗಿರೀಶಂ ತಂದ ದಿವ್ಯಗೈರಿಕ[1]ಮೆಂದು ಕಾಣಿಕೆಯನೊಪ್ಪಿಸಿದರು || ೧೬ ||

ಭೂರಮೆ ಭುಜಾಗ್ರದೊಳ್ ಭುಜಮಧ್ಯದೊಳ್ ಜಯ |
ಶ್ರೀರಮೆ ನಿಜಾಂಕಬಂಧುರಪೀಠತಟದೊಳ್ ಮ- |
ನೋರಮೆ ವಿಲಾಸದಿಂ ಮೆರೆದಿರಲ್ ದಿಕ್ಕಾಂತೆಯರ್ಗೆ ದಿಗ್ಗಜನಿಕರಕೆ ||
ಸಾರಘನಸಾರದಣ್ಪಿಂ ಕೀರ್ತಿಮುಖಮುಂ ಯ- |
ಶೋರಶ್ಮಿಯಿಂ ಪುದುಂಗೊಳಿಸಿ ಮರೆವೊಕ್ಕ ಸುರ- |
ವಾರಮುಂ ಕಾಯ್ದೊಂದು ತೇಜದಿಂ ರಾಘವಂ ಸಿಂಹಾಸನದೊಳೆಸೆದನು || ೧೭ ||

ಪಾಡಿದರ್ ಕಿನ್ನರರ್ ನಲಿದರ್ ಭವಾದಿಗಳ್ |
ನೋಡಿದರ್ ಕಣ್ಗಳ ಮಲಂ ಮಾಂಜಲೊಡನೆ ಕೊಂ- |
ಡಾಡಿದರ್ ದ್ವಿಜವರರ್ ದಿಗಧಿಪರ್ ದನುಜರ್ ನಿಜಾಂಗಮುಂ ದಂಡದಂತೆ ||
ನೀಡಿದರ್ ಕಾಣ್ಕೆಯಂ ನಮಿಸಿ ಸಂತಸದೊಳ್- |
ಕೂಡಿದರ್ ನೆರೆಪೊರೆಯ ಜನಪದದ ಮನ್ನೆಯರ್ |
ಕೂಡೆ ಕುಣಿಕುಣಿದು ದಣಿದಣಿದು ಮಣಿಮಣಿದು ತಣಿತಣಿದರ್ ಸಮಸ್ತ
ಜನರು || ೧೮ ||

---

1 ಗೈರಿಕ=ಗಿರಿಯಲ್ಲಿ ದೊರೆಯುವ ಒಂದು ಧಾತು.

# ೧೧. ಸೀತಾಪರಿತ್ಯಾಗ

['ಸೀತಾಪರಿತ್ಯಾಗವು' ಸುಪ್ರಸಿದ್ಧವಾದ ಜೈಮಿನಿಭಾರತದ ೧೮ನೆಯ ಸಂಧಿಯೊಳಗಣದು. ಜೈಮಿನಿಭಾರತದ ಕವಿಯಾದ ಲಕ್ಷ್ಮೀಶನ ದೇಶ, ಕಾಲ, ಮತಗಳ ವಿಷಯದಲ್ಲಿ ಚರ್ಚೆಗಳು ವಿದ್ವಜ್ಜನರಲ್ಲಿ ಇನ್ನೂ ಆಗುತ್ತಲಿವೆ. ಈತನು ಕಡೂರು ತಾಲೂಕಿನ ದೇವನೂರು ಗ್ರಾಮದವನೆಂಬ ಮತವು ಪ್ರಬಲವಾಗುತ್ತಿದೆ. ಈತನ ಕಾಲವು ೧೬ನೆಯ ಶತಮಾನವೆಂದು ಕವಿಚರಿತೆ ತಿಳಿಸುವುದು. ಆದರೆ ಕೆಲವು ವಿದ್ವಾಂಸರು ಈತನು ಅದಕ್ಕೆ ಎಷ್ಟೋ ಮೊದಲಿದ್ದನೆಂದು ಅಭಿಪ್ರಾಯಪಡುವರು. ಈ ಕಾವ್ಯವು ಶಬ್ದಾಲಂಕಾರ ಅರ್ಥಾಲಂಕಾರಗಳಿಗೂ ಭಾವಗಾಂಭೀರ್ಯಕ್ಕೂ ಪ್ರಸಿದ್ಧಿಯನ್ನು ಪಡೆದು ವಿದ್ವಜ್ಜನರಿಗೆ ಅತಿ ಪ್ರೇಮಾಸ್ಪದವಾಗಿದೆ]

ಉತ್ಸವಕೆ[1] ಬಂದನಿಬರೆಲ್ಲರಂ ಶರಣಜನ- |
ವತ್ಸಲಂ ಸತ್ಕರಿಸಿ ಬೀಳ್ಕೊಟ್ಟು ರಾಜಸಂ- |
ಪತ್ಸುಖದೊಳಿರ್ಪನಿತರೊಳ್ ಬಳಿಕ ಸೀತೆ ನಿಜಕಾಂತನೇಕಾಂತಕೈದಿ ||
ಕುತ್ಸಿತಂ ಪೊರ್ದದಾಶ್ರಮದ ಋಷಿಪತ್ನಿಯರ |
ಸತ್ಸಂಗದೊಳ್ ತನ್ನ ಬೇಸರಂ ತವಿಸುವೆನಿ-[2] |
ದುತ್ಸವಂ ತನಗದರಿನಿನ್ನೊಮ್ಮೆ ಬನಕೆ ತನ್ನಂ ಕಳುಹಬೇಕೆಂದಳು || ೧ ||

ಆ ಕ್ಷಿತಿಜೆ ಬಯಕೆಯಂ ಬಿನ್ನೈಸೆ ಕೇಳ್ದು ನಗು- |
ತಾಕ್ಷೇಪದಿಂದೆ ಕಳುಹುವನಾಗಿ ಸಂತೈಸಿ |
ರಾಕ್ಷಸಾಂತಕನಿರಲ್ಕೊಂದಿರುಳ್ ಕನಸುಗಂಡೇಳುತೆ ವಸಿಷ್ಠನೊಡನೆ ||
ಆ ಕ್ಷೋಣಿಸುತೆ ಗಂಗೆಯಂ ಕಳೆದು ಕಾಡೊಳ್ ಮು- |
ಹಾಕ್ಷೀಣೆಯಾಗಿ ದೇಸಿಗರಂತೆ[3] ದೆಸೆದೆಸೆಯ- |
ನೀಕ್ಷಿಸುತೆ ಮರುಗುತಳುತಿರ್ದುದಂ ಕಂಡೆನಿದು ಲೇಸಹುದೆ ಪೇಳೆಂದನು || ೨ ||

ಎನೆ ಕನಸಿದೊಳ್ಳಿತಲ್ಲೆಂದದಕೆ ಶಾಂತಿಯಂ |
ಮುನಿವರವಸಿಷ್ಠಂ ನೆಗಳ್ಚಿದಂ ಬಳಿಕ ಮನ- |
ದನುತಾಪದಿಂ ಪ್ರಜೆಯನಾರೈವುದಂ ಮರೆದೆರಡು ಮೂರು ದಿವಸಮಿರ್ದು ||
ಜನಮುಲಸಿದಪುದೆಂದು ರಾತ್ರಿಯೊಳ್ ಪೊರಮಟ್ಟು |
ದಿನಪಕುಲತಿಲಕನೇಕಾಂತದೊಳ್ ನಗರಶೋ- |
ಧನೆಯ ಚಾರರೊಳೊರ್ವನಂ ಕರೆಸಿ ಕೇಳ್ದನಿಂತೆಂದು ವಿನಯೋಕ್ತಿಯಿಂದೆ || ೩ ||

---

1 ಉತ್ಸವ – ಸೀಮಂತಪ್ರಸ್ತ. 2 ತವಿಸು = ಕಳೆ 3 ದೇಸಿಗ = ಪರದೇಶಿ.

ಸಿಂದಿಸರಲೇ ಪ್ರಜೆಗಳಿನ್ನೆಗಂ ತನ್ನ ಗುಣ- |
ಕೊಂದಿಸರಲೇ ಪಳಿವನಪುಲತರಕೀರ್ತಿಯಂ |
ಕಂದಿಸರಲೇ ದೂಸರಿಂದೆ[1] ಭುಜವಿಜಯಪ್ರತಾಪತೇಜವಸಿಳೆಯೊಳು ||
ನಂದಿಸರಲೇ ಜರೆದು ನಿಜವಂಶದೇಳ್ಗೆಯಂ |
ಕುಂದಿಸರಲೇ ಖೋಡಿಗಳೆದು ಬಹ ಮಾನದೊಳ್ |
ಸಂಧಿಸರಲೇ ಕೊಂಕುಕೊರತೆಗಳನೆಂದವನನಸುರಾರಿ ಬೆಸಗೊಂಡನು || ೪ ||

ದೇವ ನಿನ್ನಂ ಪೆಸರಿಸಿದನೀಶನಾದಪಂ |
ಸೇವಿಸಿದವಂ ಚತುರ್ಮುಖನಾಗಲುಳ್ಳವಂ[2] |
ಕಾವುದೆಂದ್ಯೆದೆ ಮರೆವೊಕ್ಕವಂ ಜಗದೊಳಾಚಂದ್ರಾರ್ಕವಾಗಿ ಬಾಳ್ವ[3] ||
ಶ್ರೀವಿಭವದಿಂ ಶಕ್ರಪದವಿಯಂ ಜರೆದಪಂ |
ಭೂವಲಯದೊಳ್ ನಿಂದಿಸುವರುಂಟೆ ತರಣಿಯಂ |
ಕಾವಳಂ[4] ಮುಸುಕಿರ್ದೊಡೇನಪ್ಪುದೆಂದವಂ ಬಿನ್ನೈಸಿ ಕೈಮುಗಿದನು || ೫ ||

ಏನಾದೊಡಂ ಕಟಕಿಯಾಗಿರ್ಪುದೀ ಮಾತು |
ಭಾನುವಂ ಕಾವಳಂ ಮುಸುಕಲೇನೆನಲೆನ್ನ- |
ಧೀನವಾದರಸುತನಕಾವುದೂಣೆಯಮೆಂಬರೆಂದು ರಘುಪತಿ ಕೇಳಲು ||
ನೀನೆ ಪಾವನರೂಪನೆಂಬುದಂ ಮುನಿಯ ವಧು |
ತಾನೆ ತೋರಿಸಳೆ ಲೋಕದ ಜನಕೆ ಜಗದೊಳ- |
ಜ್ಞಾನಿಗಳ್ ನುಡಿದ ಸಿಂದೆಯನುಸಿರಲಮ್ಮೆನೆಂದವನೆರಗಿದಂ ಪದದೊಳು || ೬ ||

ಏಳಂಜಬೇಡಿನ್ನು ಮಾಜದಿರ್ ತನ್ನಾಣೆ |
ಹೇಳೆಂದು ರಘುಕುಲಲಲಾಮನೊತ್ತಾಯದಿಂ |
ಕೇಳಲವನೆಂದನವಧರಿಸೊರ್ವ ರಜಕಂ ಮಲೀನಮುಂ ತೊಳೆವನಾಗಿ ||
ಕಾಳುಗಡೆದಂ ಜೀಯ ಸದ್ಗುಣಚರಿತ್ರನಾ- |
ಮಾಳಿಯಂ ಜಗಮುಂ ಪುನೀತಮುಂ ಮಾಳ್ಪ ನಿ- |
ನ್ನೇಳಿಗೆಯನವನೆತ್ತ ಬಲ್ಲನೆನಲೇನೆಂದನೆನಲಾತನಿಂತೆಂದನು || ೭ ||

---

1 ದೂಸರು=ಸಿಂದೆ.

2 ಚತುರ್ಮುಖನಾಗಲುಳ್ಳವಂ—ಹನುಮಂತನಿಗೆ ಬ್ರಹ್ಮಪಟ್ಟ ದೊರೆಯಿತು.

3 ಆಚಂದ್ರಾರ್ಕವಾಗಿ ಬಾಳ್ವ—ಶರಣಾಗತನಾದ ವಿಭೀಷಣನು ಚಿರಂಜೀವಿಯಾದನು.

4 ಕಾವಳಂ=ಕತ್ತಲೆ.

ಪೆಂಡತಿ ತವರ್ಮನೆಗೆ ಮುಳಿದು ಪೇಳದೆ ಪೋದ |
ಚಂಡಿತನಕವಳ ತಾಯ್ತಂದೆಗಳ್ ಕಳುಹ ಬಂ- |
ದಂಡಲೆದೊಡಿನ್ನೊಲ್ಲೆನಗಲಿರ್ದ ಮಡದಿಯಂ ಮತ್ತೆ ರಘುನಾಥನಂತೆ ||
ಕೊಂಡಾಳುವವನಲ್ಲ ತಾನೆಂದು ರಜಕನು- |
ದ್ದಂಡದೊಳ್ ನುಡಿಯೆ ಕಿವಿಮುಚ್ಚಿಕೊಳುತೆಯ್ದಿದೆನ- |
ಖಂಡಿತದ ಮಂತ್ರಪೂತದ ಹವಿಯನರಿದೆಂಜಲಿಪುದೆ ವಾಯಸಮೆಂದನು || ೮ ||

ಎಂದು ಬಿನ್ನೈಸೆ ಕೇಳ್ದಾತನಂ ಕಳುಹಿ ರಘು- |
ನಂದನಂ ಬಂಧನಕ್ಕೊಳಗಾದ ಮತ್ತಗಜ- |
ದಂದದಿಂ ನಿಜಶಿರವನೊಲೆದು ಮೂಗಿನ ಮೇಲೆ ಬೆರಳಿಟ್ಟು ಮೌನದಿಂದೆ ||
ನಿಂದು ಸ್ವೈರಗಾಗಿ ನೆನೆನೆನೆದು ಚಿತ್ತದೊಳ್ |
ನೊಂದು ಬಿಸುಸುಯ್ದು ಕಡುಪಳಿದು ಕಾತರಿಸಿ ಕಳೆ- |
ಗುಂದಿ ದುಮ್ಮಾನದಿಂ ಪೊಕ್ಕನಂತಃಪುರಕೆ ಪುತ್ತವುಗುವಹಿಪನಂತೆ || ೯ ||

ಓಲಗಂಗುಡದೆ ಬಾಗಿಲ್ಗೆ ಬಂದಖಿಳಭೂ- |
ಪಾಲರಂ ಕರೆಸಿ ಕಾಣಿಸಿಕೊಳ್ಳದೊಳಗೆ ಚಿಂ- |
ತಾಲತಾಂಗಿಯ ಕೇಳಿಗೆಡೆಗೊಟ್ಟು ರಾಜೇಂದ್ರನಿರೆ ಕೇಳ್ದು ಭೀತಿಯಿಂದೆ ||
ಆ ಲಕ್ಷ್ಮಣಾದಿಗಳ್ ಪೊಕ್ಕರಂತಃಪುರವ- |
ನಾಲಿಂಗಿಸಿದ ಜಾಡ್ಯದಿಂದೆ ಜಡಿವವಯವದ |
ನೀಲಾಂಗನಂ ಕಂಡು ಕಾಲ್ಗೆರಗಿ ನುಡಿಸಲಮ್ಮದೆ ಸುಮ್ಮನಿರುತಿರ್ದರು || ೧೦ ||

ಎದ್ದು ಕುಳ್ಳಿರ್ದು ಕರುಣಾಳುಗಳ ಬಲ್ಲಹಂ |
ಮುದ್ದುಗೈದನುಜನಂ ಕರೆದಿಳೆಯೊಳಿಂದೆನಗೆ |
ಪೊದ್ದಿದಪವಾದಮಂ ನೀವರಿದುದಿಲ್ಲಕಟ ಸಾಕಿನ್ನು ನೆರವಿಗಳೊಳು ||
ಕದ್ದ ಕಳ್ಳನವೊಲಾಡಿಸಿಕೊಳಲ್ಕಾರೆನೊಡ- |
ಲಿದ್ದಲ್ಲಿ ನಿಂದೆಗೊಳಗಾಗಿ ಬದುಕುವನಲ್ಲ |
ತಿದ್ದಿ ತೀರದ ವಿಲಗ[1]ಕಂಜುವೆಂ ಸೀತೆಯಂ ಬಿಟ್ಟಲ್ಲದಿರೆನೆಂದನು || ೧೧ ||

---

1 ವಿಲಗ=ನಿಂದೆ.

ಇವಳಯೋನಿಜೆ ರೂಪಗುಣಶೀಲಸಂಪನ್ನೆ |
ಭುವನಪಾವನೆ ಪುಣ್ಯಚರಿತೆ ಮಂಗಳಮಹೋ- |
ತ್ಸವೆ ಪತಿವ್ರತೆಯೆಂಬುದಂ ಬಲ್ಲೆನಾದೊಡಂ ನಿಂದೆಗೊಳಗಾದ ಬಳಿಕ ||
ಅವನಿಸುತೆಯಂ ತನಗೆ ಬಿಡುವುದೇ ನಿಶ್ಚಯಂ |
ರವಿಕುಲದ ರಾಯರಪಕೀರ್ತಿಯಂ ತಾಳ್ದಪರೆ |
ಕುವರನಾಗಿರ್ದ ತನ್ನಂ ತಾತನುಳಿದುದಿಲ್ಲವೆ ಸತ್ಯಭಾಷೆಗಾಗಿ || ೧೨ ||

ಕಲಿಯುಗದ ವಿಪ್ರಕಾಚಾರಮಂ ಬಿಡುವಂತೆ |
ಪಲವು ಮಾತೇನಿನ್ನು ಸೀತೆಯಂ ಬಿಟ್ಟೆನೆನೆ |
ಬಲುಗರ[1]ಮಿದೆತ್ತಣದೊ ಕಾರುಣ್ಯನಿಧಿಗೆನುತೆ ನಡುನಡುಗಿ ಭೀತಿಯಿಂದೆ ||
ನೆಲೆಗೊಂಡ ವೇದಮಂ ಧರೆಯ ಪಾಷಂಡಿಗಳ್ |
ಸಲೆ ನಿಂದಿಸಿದೊಡದಂ ಮಾಣ್ಬರೇ ದ್ವಿಜರಕಟ |
ಕುಲವರ್ಧಿನಿಯನೆಂತು ಬಿಡುವೆ ನೀಂ ಪೇಳೆಂದರನುಜಾತರಗ್ರಜಂಗೆ || ೧೩ ||

ಭಯಶೋಕದಿಂದೆ ಗದ್ಗದಿಸೆ ಕಂಠಮುದಶ್ರು |
ನಯನದೊಳ್ ತುಳುಕೆ ಭರತಂ ಕರೆವ ಕಪಿಲೆಯಂ |
ನಯವಿದರ್ ಪೊಡೆದಡವಿಗಟ್ಟುವರೆ ಪಾವಕನೊಳರಸಿಯಂ ಪುಗಿಸಿದಂದು ||
ಪ್ರಿಯೆ ನಿನಗೆ ಪರಿಶುದ್ಧೆ ಕುಲಕೆ ಮಂಗಳೆ ಸುತೋ- |
ದಯಕೆ ನಿರ್ಮಲೆ ತನಗೆ ಗತಿಗುಡುವ ಸೊಸೆಯೆಂದು |
ಬಯಸಿದೊಡೆ ಬಂದಯ್ಯನಾಡನೆ ಸುರಾಸುರರ ಮುಂದೆ ಕಪಿಕಟಕಮರಿಯೆ
|| ೧೪ ||

ಅದನೆಲ್ಲಮಂ ಮರೆದು ಹುಲುಮನುಜ ರಜಕನಾ- |
ಡಿದ ದೂಸರಂ ನೆನೆದು ಕುಲಪತ್ನಿಯಂ ಬಿಡುವ |
ಹದನಾವುದಕಟ ಗುರುಲಘುವಿನಂತರವನೆಣಿಸದೆ ಬರಿದೆ ಮೂಢರಂತೆ ||
ಎದೆಗೆಟ್ಟು ದೇವಿಯಂ ದೋಷಿಯೆಂಬರೆ ಜೀಯ |
ಪದುಳವಿಹುದೆಂದು ವಿನಯದೊಳಗ್ರಜಾತನಂ |
ಕದುಬಿ ನುಡಿದಂ ಭರತನಾತನಂ ನೋಡುತೊಯ್ಯನೆ ಭೂಪನಿಂತೆಂದನು || ೧೫ ||

---

1 ಗರ=ಸಂಗ್ರಹ.

ತಮ್ಮ ನೀನಾಡಿದಂತವನಿಸುತೆ ವಿರಜೆಯಹು- |
ದುಮ್ಮಳಿಸಬೇಡ ಸೈರಿಸಲಾರೆನೀ ದೂಸ- |
ರಂ ಮಹಿಯೊಳುಳಿದರೇ ಪೃಥುಪುರೂರವಹರಿಶ್ಚಂದ್ರಾದಿನರಪತಿಗಳು ||
ಸುಮ್ಮನಪಕೀರ್ತಿಗೊಳಗಾಗಲೇತಕೆ ಮಮತೆ- |
ಯಂ ಮಹಾಯೋಗಿ ಬಿಡುವಂತಿವಳನುಳಿವೆನೆನೆ |
ಹಮ್ಮೈಸಿ ಲಕ್ಷ್ಮಣಂ ಕಂಪಿಸುತೆ ಕಿವಿ ಮುಚ್ಚುತಗ್ರಜಂಗಿಂತೆಂದನು || ೧೬ ||

ಕಾಯಸುಖಕೋಸುಗಂ ಧರ್ಮಕೃತಮಂ ಬಿಡುವ್ರೊ- |
ಲಾಯತಾಕ್ಷಿಯ ಭಾವಶುದ್ಧಿಯಂ ತಿಳಿದಿರ್ದು |
ವಾಯದ[1]ಪವಾದಕಿಂತರಸಿಯಂ ತೊರೆಯಬೇಕೆಂಬರೇ ನಿಷ್ಕರುಣದೆ ||
ಜೇಯ ತುಂಬಿದ ಬಸಿರ್ಬೆಸಿಲಾದ ದೇವಿಯಂ |
ಪ್ರೀಯದಿಂದಾರೈದು ಸಲಹಬೇಕೆಂದು ರಘು- |
ರಾಯಂಗೆ ಲಕ್ಷ್ಮಣಂ ಬಿನ್ನೈಸೆ ಮೇಲ್ವಾಯ್ದು ಶತ್ರುಘ್ನನಿಂತೆಂದನು || ೧೭ ||

ಬಿಡುವರೆಂತಿಕ್ಷ್ವಾಕುವಂಶದವರರರಸಿಯಂ |
ನುಡಿವರೆಂತಿಳೆಯೊಳಾರಾದೊಡಂ ದೂಸರಂ |
ಪಡೆವರೆಂತಮಲಸತ್ಕೀರ್ತಿಯಂ ಬುದ್ಧಿವೇಳ್ವದಕೊಡೆಯರಿಲ್ಲವಾಗಿ ||
ಕಡಿವರೆಂತೇಳ್ಗೆಯಂ ಪೆಣ್ಣಳಲ್ವೆಂಕಿಯಿಂ |
ಸುಡುವರೆಂತನ್ವಯದ ಬಾಳ್ಕೆಯನಿದಕ್ಕೆ ಕಿವಿ- |
ಗುಡುವರೆಂತೀಗಳೆನ್ನೊಡಹುಟ್ಟಿದವರೆನುತೆ ಶತ್ರುಘ್ನನುರಿದೆದ್ದನು || ೧೮ ||

ಅರಸ ಕೇಳನುಜರಾಡಿದ ನುಡಿಗೆ ತಲೆವಾಗಿ |
ತರಣಿಕುಲತಿಲಕನೊಯ್ಯನೆ ದೈನ್ಯಭಾವದಿಂ |
ತರಹರಿಸಬಾರದಪವಾದಹೃಚ್ಛೂಲಮಂ ತನಗೆ ಜಾನಕಿಯನುಳಿದು ||
ಪೆರೆಯುರ್ಚಿದುರಗನಂತಿರ್ದಪೆಂ ಸಾಕು ನಿಮ- |
ಗೊರೆದೊಡೇನಹುದೆಂದು ಬೇಸರೊಳ್ ಮನೆಗಳ್ಗೆ |
ಭರತಶತ್ರುಘ್ನರಂ ಕಳುಹುತೇಕಾಂತದೊಳ್ ಸೌಮಿತ್ರಿಗಿಂತೆಂದನು || ೧೯ ||

---

1 ವಾಯದ=ಸಟೆಯ.

ತಮ್ಮ ಬಾ ನೀನಿಂದುವರೆಗೆ ತಾನೆಂದ ಮಾ- |
ತಂ ಮೀರಿದವನಲ್ಲ ಕೆಲಬಲವನಾರೈಯು- |
ತಂ ಮರುಗದಿರು ತನ್ನ ಕೊರಳಿಗಿದೆ ಖಡ್ಗಮಲ್ಲದೊಡೀಗ ಜಾನಕಿಯನು ||
ಉಮ್ಮಳಿಸದೊಯ್ದು ಗಂಗೆಯ ತಡಿಯರಣ್ಯದೊಳ್ |
ಸುಮ್ಮನೆ ಕಳುಹಿ ಬರ್ಪುದವಳೆನ್ನೊಳಾಡಿರ್ಪ- |
ಳೊಮ್ಮೆ ಕಾನನಕೈದಬೇಕೆಂದು ಬಯಕೆಯಿಂದದೆನೆವಂ ನಿನಗೆಂದನು || ೨೦ ||

ಎನೆ ರಾಘವೇಂದ್ರ ನಿನ್ನಾಜ್ಞೆಯಂ ಮೀರಲ್ಕೆ |
ತನಗೆ ರೌರವಮಪ್ಪುದೆಂದುದಂ ಮಾಡಲ್ಕೆ |
ಜನನಿಯಂ ಕೊಂದುಗ್ರಗತಿಯಪ್ಪುದೇಗೈವೆನೆಂದು ಕಡುಶೋಕದಿಂದೆ ||
ತನು ಝೊಂಪಿಸಲ್ಕೆ[1] ಸೆರೆಬಿಗಿದು ಕಂಬನಿಯಿಂದೆ |
ನನೆದಳಲ್ದೊರೆಯೊಳಾಳ್ದ ಸುಜನಂ ಘೂರ್ಮಿಸುತೆ |
ನಿನಗೆ ದೋಷಮೆ ತಾನಿರಲ್ಕೆ ನಡೆ ಕಳುಹೆಂದನರಸನೇಂ ದಯೆದೊರೆದನೊ
|| ೨೧ ||

ಅಣ್ಣದೇವನೊಳಿಡಿದ ವಾತ್ಸಲ್ಯಮೆಂಬ ಬ- |
ಲ್ಗಣ್ಣೆ[2]ಯೊಳ್ಕಟ್ಟುವಡೆದಲ್ಲೆಸಲರಿಯದೆ ಸಿ- |
ರ್ಪಣ್ಣಭಾವದೊಳಂದು ಲಕ್ಷ್ಮಣಂ ತುರಗಸಾರಥಿಕೇತನಂಗಳಿಂದೆ ||
ಹಣ್ಣಿದ[3] ವರೂಥಮಂ ತರಿಸಿ ಪೊರಗಿರಿಸಿ ನೆಲ- |
ವೆಣ್ಣಮಗಳಿರುತಿರ್ದ ರಾಜಮಂದಿರಕೈದಿ |
ಕಣ್ಣೊಳೀಕ್ಷಿಸದೆ ತಲೆವಾಗಿ ದೂರದೊಳೆ ನಿಂದಾ ಸೀತೆಗಿಂತೆಂದನು || ೨೨ ||

ತಾಯೆ ನೀನೇತಕೆಳಸಿದೆ ನಿನ್ನನೀಗ ರಘು- |
ರಾಯಂ ತಪೋವನಕೆ ಕಳುಹಿ ಬರಹೇಳಿದಂ |
ಪ್ರೀಯಮುಳ್ಳೊಡೆ ರಥಂ ಪಣ್ಣಿ ಬಂದುದಕೊ ಬಿಜಯಂಗೈವುದೆಂದು ಮರುಗಿ ||
ಛಾಯೆಗಾಣಿಸಿ[4] ಸುಮಿತ್ರಾತ್ಮಜಂ ನುಡಿದಭಿ- |
ಪ್ರಾಯಮಂ ತಿಳಿಯದತಿಸಂಭ್ರಮಾನ್ವಿತೆಯಾದ- |
ಳಾಯತಾಂಬಕಿ ತನ್ನಭೀಷ್ಟಮಂ ಸಲಿಸುವಂ ಕಾಂತನೆಂಬುತ್ಸವದೊಳು || ೨೩ ||

---

1 ಝೊಂಪಿಸು=ಜುಮ್ಮೆನ್ನು. 2 ಬಲ್ಗಣ್ಣೆ=ಗಟ್ಟಿಯಾದಹಗ್ಗ.
3 ಹಣ್ಣು=ಸಿದ್ಧಗೊಳಿಸು. 4 ಛಾಯೆಗಾಣಿಸಿ=ಮನೋಗತವನ್ನು ಸೂಚಿಸಿ.

ಅಂಬುಜಾನನೆ ಬಳಿಕ ಪಯಣಮಂ ನಿಶ್ಚಯಿಸಿ |
ನಂಬಿದರಭೀಷ್ಟಮಂ ಸಲಿಸುವ ಕೃಪಾಳು ತಾ- |
ನೆಂಬುದಂ ಕಾಣಿಸಿದನಿಂದೆನ್ನ ಕಾಂತನೆನಗೆಂದು ಕೌಸಲೆಗೆ ಪೇಳ್ದು ||
ಮುಂಬರಿದೊಡಂಬಡಿಸಿ ಬಲವಂದು[1] ಕಾಲ್ಗೆರಗಿ |
ತುಂಬಿದ ಪರಕೆವೆತ್ತು ಕೈಕಯಿದೇವಿಗೆ ಶಿ- |
ರಂಬಾಗಿ ವರಸುಮಿತ್ರೆಗೆ ನಮಿಸಿ ಸಖಿಯರಂ ಸಂತೈಸಿ ಬೀಳ್ಕೊಂಡಳು || ೨೪ ||

ಅಗ್ರಜಂ ತರಿಸಂದು[2] ತನ್ನೊಳಾಡಿದ ಕಜ್ಜ- |
ದುಗ್ರಮಂ ಬನಕೆ ಪೋದಪೆನೆಂಬ ದೇವಿಯ ಸ- |
ಮಗ್ರಸಂತೋಷಮಂ ಕಂಡು ಸೌಮಿತ್ರಿ ಮನದೊಳ್ ಮರುಗಿ ಕಂಬನಿಯನು ||
ನಿಗ್ರಹಿಸಿಕೊಂಡು ಸಾರಥಿಗೆ ಸೂಚನೆಗೈದು |
ವ್ಯಗ್ರದಿಂದೈದಿಸಿದನಾ ರಥವನಾಗ ದೇ- |
ವಗ್ರಾಮನಿಲಯಲಕ್ಷ್ಮೀಶನುಂಗುಟದೊಳೊಗೆದಮಲಜಾಹ್ನವಿಯ ತಡಿಗೆ || ೨೫ ||

1 ಬಲವಂದು=ಪ್ರದಕ್ಷಿಣೆಮಾಡಿ.
2 ತರಿಸಂದು=ನಿಶ್ಚಯವಾಗಿ ದೃಢವಾಗಿ.

# ೧೨. ಬ್ರಾಹ್ಮಣರ ಬಲುಹು

[ಕನ್ನಡ ಭಾಮಿನೀಷಟ್ಪದೀಕಾವ್ಯಗಳಲ್ಲಿ ಅಗ್ರಸ್ಥಾನವು ಸರ್ವಮತದಿಂದ ದಶಪರ್ವಭಾರತಕ್ಕೆ ಸಲ್ಲುವುದು. ಅದರ ಕವಿಯಾದ ನಾರಣಪ್ಪನು ಗದುಗಿನ ವೀರನಾರಾಯಣಾಂಕಿತದಿಂದ ಅದನ್ನು ರಚಿಸಿ 'ಸುಧಾಮಧುರ ಕರ್ಣಾಟಭಾಷಾಭಾಮಿನೀಪತಿ' ಎಂದು ಕವಿಗಳಿಂದ ಕೊಂಡಾಡಿಸಿಕೊಂಡಿರುವನು. ಈ ಕವಿಯ ಕಾಲವು ೧೫ನೆಯ ಶತಮಾನದ ಆದಿಭಾಗವೆಂದು ನಿರ್ಧರಿಸಲಾಗಿದೆ. 'ಹಲಗೆ ಬಳಹವ ಪಿಡಿಯದೊಂದಗ್ಗಳಿಕೆ, ಪದವಿಟ್ಟಳಿಪದೊಂದಗ್ಗಳಿಕೆ ಪರರೊಡ್ಡವದ ರೀತಿಯ ಕೊಳ್ಳದಗ್ಗಳಿಕೆ ಬಳಸಿ ಬರೆಯಲು ಕಂಠಪತ್ರದ ಉಲುಹು ಕೆಡದಗ್ಗಳಿಕೆ' ಈತನಿಗಿರುವುದರಿಂದ ವರ್ಣಕ ಕವಿಗಳಲ್ಲಿ ಈತನ ಕವಿತಾಶಕ್ತಿ ಅಸದೃಶವೆನ್ನಬಹುದು. ಜೈಮಿನೀಭಾರತದಂತೆ ಇದೂ ಸರ್ವಾದರಣೀಯವಾಗಿದೆ. 'ಬ್ರಾಹ್ಮಣರ ಬಲುಹು' ಎಂಬ ಈ ಕಥಾಭಾಗವೂ ಮತ್ತೊಂದು ಕಡೆ ಕೊಟ್ಟಿರುವ ಧರ್ಮಸಂಕಟವೆಂಬ ಕಥಾಭಾಗವೂ ಆದಿಪರ್ವದ ಮೂವತ್ತೊಂದನೆಯ ಸಂಧಿಯಲ್ಲಿಯೂ ಉದ್ಯೋಗಪರ್ವದ ಹನ್ನೊಂದನೆಯ ಸಂಧಿಯಲ್ಲಿಯೂ ಕ್ರಮವಾಗಿವೆ.]

ಕೇಳು ಜನಮೇಜಯಧರಿತ್ರೀ- |
ಪಾಲ ಪಾಂಚಾಲೆಯ ಮನೋರಥ- |
ಶಾಲೆಯಲಿ ಸಾರಿದರಲೈ ಸಭೆಯಲಿ ಮಹೀಸುರರು ||
ಏಳಿ ಭುಜಬಲವುಳ್ಳವರು ವಿ-|
ಪ್ರಾಳಿಯಲಿ ಬಿಲುವಿಡಿದು ಯಂತ್ರದ |
ಕೋಲುಗಳ ಕೀವಣಿಪು[1]ದೆಂದರು ಹೊಯ್ದು ಡಂಗುರವ || ೧ ||

ಎಂದು ಸಾರಿದ ನುಡಿಯನಾ ದ್ವಿಜ- |
ವೃಂದವಾಲಿಸಿ ನಮಗಿದೇಕರ- |
ವಿಂದನಯನೆಯ ತೊಡಕು ತೆಗೆ ನಾವಾರು ಧನುವಾರು ||
ಬಂದ ದಕ್ಷಿಣೆ ಮೃಷ್ಟಭೋಜನ-|
ದಿಂದ ತೃಪ್ತರು ನಾವು ನಮಗಿದ- |
ರಿಂದ ಬಹುದಪಕೀರ್ತಿ ಕರವೆಂದುದು ಬುಧಸ್ತೋಮ || ೨ ||

---

1 ಕೀವಣಿಪುದು=ಹೂಡುವುದು.

ವಚನಶೂರರು ನಾವು ಪಾರ್ಥಿವ- |
ನಿಚಯವೇ ಭುಜಶೂರರನಿಬರ- |
ನಚಲಧನು ಭಂಗಿಸಿತು ನಮಗೀ ವಿದ್ಯೆ ವೈದಿಕವೆ ||
ಉಚಿತವಲ್ಲಿದು ನಮ್ಮ ಸಾಹಸ- |
ರಚನೆಯನು ನೋಡುವೊಡೆ ಪಂಡಿತ- |
ನಿಚಯವಿದಿರಲಿ ನಿಲಲಿ ಮಾಡುವೆವಲ್ಲಿ ವಿಸ್ಮಯವ || ೩ ||

ಸಾಂಗವೇದಪದಕ್ರಮದಿ ಸ- |
ರ್ವಾಂಗನಿಚಯದಿ ನಿಖಿಳಪೌರಾ- |
ಣಂಗಳಲಿ ಮೀಮಾಂಸೆಯಲಿ ಸ್ಮೃತಿ ತರ್ಕಶಾಸ್ತ್ರದಲಿ ||
ಭಂಗಿಸುವ ವಿಜಯಿಸುವ ಬಹುವಾ- |
ದಂಗಳಲಿ ವಾತ್ಸ್ಯಾಯನಾದಿಯು- |
ಪಾಂಗವಿದ್ಯೆಯಲೆಮ್ಮ ನೋಡೆಂದುದು ಬುಧಸ್ತೋಮ || ೪ ||

ಭರತದಲಿ ವೈದ್ಯದಲಿ ಕಾವ್ಯಸು- |
ವಿರಚಿತಾಲಂಕಾರದಲಿ ಕರಿ- |
ತುರಗ ಲಕ್ಷಣದಲಿ ಸಮಾಹಿತಮಂತ್ರಶಾಸ್ತ್ರದಲ ||
ಸರಸಕವಿತಾರಚನೆಯಲಿ ವಿ- |
ಸ್ತರದುಪನ್ಯಾಸದಲಿ ಭೂಪತಿ |
ಕರೆಸಿ ನೋಡಲಿ ನಮ್ಮನೆಂದುದು ಭೂಸುರವ್ರಾತ || ೫ ||

ಅಲ್ಲದಿರ್ದೊಡೆ ಶೋಧಿಸಿದ ತನಿ |
ಬೆಲ್ಲವಿಕ್ಕಿದ ಹೂರಿಗೆಯ ಬೆದೆ- |
ಯಲ್ಲಿ ಪರಡಿಯ ಸೇವಿಗೆಯ ಪರಿಪರಿಯ ಪಾಯಸದ ||
ಪುಲ್ಲಿಗೆಯ ತತ್ಸರಿಯ ಮಂಡಿಗೆ- |
ಯಲ್ಲಿ ನವಘೃತಸೂಪದಂಶಕ[1]- |
ದಲ್ಲಿ ನೋಡಲಿ ನಮ್ಮನೆಂದುದು ಭೂಸುರವ್ರಾತ || ೬ ||

---

1 ಸೂಪದಂಶಕ=ನಂಚಿಕೊಳ್ಳುವ ವಸ್ತು, ಚಟ್ನಿ ಮುಂತಾದುವು.

ಹೂರಿಗೆಯ ಗಾರಿಗೆಯಲಾಯೆ- |
ಣ್ಣೂರಿಗೆಯ ಲಡ್ಡುಗೆಯ ತುಪ್ಪದ |
ತೋರಹಾಲುಂಡೆಗಳ ಯೆಳ್ಳುಂಡಿಗೆಯ ಕೆನೆವೊಸರ ||
ಚಾರುಶಾಕಾವಳಿಯಲಾ ವಿ- |
ಸ್ತಾರ ಭಕ್ಷ್ಯಾವಳಿಯ ಪಾಕದೊ- |
ಳೋರೆ ಹುಸಿಯುಂಟೆಂಬ ಯಂತ್ರವ ಕಳಚಬಲುಹುಂಟು || ೭ ||

ರಸದ ಹೊರಲೇಪದಲಿ ಹುದುಗಿದ |
ಮಿಸುನಿಯಂತಿರೆ ಜೀವಭಾವ- |
ಪ್ರಸರದೊಳಗವಲಂಬಿಸಿದ ಪರಮಾತ್ಮನಂದದಲಿ ||
ಎಸೆವ ವಿಪ್ರಾಕಾರದಲಿ ರಂ- |
ಜಿಸುವ ಭೂಪತಿ ತತ್ಸಭಾಸದ- |
ವಿಸರಮಧ್ಯದಲಿದ್ದು ಕೇಳಿದನೀ ಮಹಾಧ್ವನಿಯ || ೮ ||

ನೋಡಿದನು ತಮ್ಮನನು ಸನ್ನೆಯ |
ಮಾಡಿದೊಡೆ ಕೈಕೊಂಡನವನಿಪ- |
ಗೂಡಿ ಕುಂತಿಗೆ ಭೀಮಸೇನಂಗೆರಗಿ ವಿನಯದಲಿ ||
ಕೂಡೆ ಕುಳ್ಳಿರ್ದಖಿಳವಿಪ್ರರ |
ನೋಡಿ ಮೆಲ್ಲನೆ ಧೋತ್ರದರ್ಭೆಯ |
ಗೂಡ ಸಂವರಿಸುತ್ತ[1] ಸಭೆಯಲಿ ನಿಂದನಾ ಪಾರ್ಥ || ೯ ||

ಏನು ಸುದ್ದಿಯುಪಾಧ್ಯರೆದ್ದಿರಿ- |
ದೇನು ಧನುವಿಂಗಲ್ಲಲೇ ತಾ- |
ನೇನು ಮನದಂಘವಣೆ[2] ಬಯಸಿದಿರೇ ನಿತಂಬಿನಿಯ ||
ವೈನತೇಯನು ವಗಡಿಸಿದ ವಿಷ- |
ವೇನು ಸದರವೊ ಹಾವಡಿಗರಿಗಿ- |
ದೇನು ನಿಮ್ಮುತ್ಸಾಹವೆಂದುದು ವಿಪ್ರಜನ ನಗುತ || ೧೦ ||

---

1 ಸಂವರಿಸು=ಸಿದ್ಧವಾಗು. 2 ಅಂಘವಣೆ=ಇಂಗಿತ; ಮನಸ್ಸಿನ ಅಪೇಕ್ಷೆ.

ಮದುವೆ ಬೇಕೇ ಶ್ರೋತ್ರಿಯಸ್ತ್ರೀ- |
ಮದಲಿ ಕನ್ಯಾರ್ಥಿಗಳು ನಾವೆಂ- |
ಬುದು ನಿಜಾನ್ವಯವಿದ್ಯೆಯಲಿ ಕೊಡುವುದು ಪರೀಕ್ಷೆಗಳ ||
ಮದುವೆಯಹುದಿದು ಸೌಖ್ಯಪುಣ್ಯ- |
ಪ್ರದವು ಭೂದೇವರಿಗೆ ನೀವ್ ನೆನೆ- |
ದುದು ಭಗೀರಥಯತ್ನವೆಂದುದು ವಿಪ್ರಜನ ನಗುತ || ೧೧ ||

ನೀವು ಸ್ವೈರಿಸಿ ನಿಮ್ಮ ಕಾರು- |
ಣ್ಯಾವಲೋಕನವುಂಟಲೇ ಸ- |
ದ್ಭಾವದಲಿ ನೀವ್ ರಚಿಸಿದಾಶೀರ್ವಾದಶಕ್ತಿಯಲಿ ||
ನಾವು ವಿಜಯರು ಚಾಪಯಂತ್ರವಿ- |
ದಾವ ಘನವೆಂಬರ್ಜುನನ ಸಂ- |
ಭಾವನೋಕ್ತಿಗೆ ನಿಲ್ಲದವರೊದರಿದರು ತಮತಮಗೆ || ೧೨ ||

ಕ್ರಮಿತರವಧರಿಸಿದಿರೆ ಶುದ್ಧ- |
ಭ್ರಮಿತಮೂಲನ ಹಿರಿಯವಿಷ್ಣು- |
ಕ್ರಮಿತರೇ ದೀಕ್ಷಿತರೆ ಧನುವಿಗೆ ಯತ್ನಮಾಡಿದರೆ ||
ಕ್ರಮವೆ ತಾನೀ ಕ್ಷತ್ರಿಯರನಾ- |
ಕ್ರಮಿಸುವುದು ಸದ್ಧರ್ಮವೇ ಸು- |
ಭ್ರಮಿಯಿವನು ನೆರೆ ಹಳಿವ ತಹನೀ ಶ್ರೋತ್ರಿಯರ ಕುಲಕೆ || ೧೩ ||

ಕೆಲರು ಹೋಗದಿರೆಂದು ಜರೆದರು |
ಕೆಲರು ತಾನೇ ಬಲ್ಲನೆಂದರು |
ಕೆಲರು ನುಡಿದರು ವಿಪ್ರಸಭೆಗಪಹಾಸ್ಯವಾಯ್ತೆನುತ ||
ಕೆಲರು ತಪ್ಪೇನೆಂದು ಕಳೆದರು |
ಕೆಲರು ಭದ್ರಾಕಾರಗೀತಂ- |
ಗಳುಕುವುದು ಧನು ಭಾಗ್ಯಮುಖಗೆಂದುದು ಬುಧಸ್ತೋಮ || ೧೪ ||

ತೊಟ್ಟ ಹೊಸವುಪವೀತ ಧಟ್ಟಿಯ |
ಮಟ್ಟಿ ನೊಸಲಲಿ ಕುಶೆಯ ಕರಡಿಗೆ |
ಕಟ್ಟಿಯಿರುಕಿದ ಕಕ್ಷ ಬೆರಳಲಿ ಮುರಿದ ದರ್ಭೆಗಳ ||
ಉಟ್ಟ ಭಾಸುರ ಬಳಲಗಚ್ಚೆಯ- |
ಲಟ್ಟಹಾಸದ ಜನರ ನಗೆಗಳ |
ನಟ್ಟವಿಗ[1]ನೋೞಸರಿಸಿ ಸಭೆಯಲಿ ಮೆಲ್ಲನೈತಂದ || ೧೫ ||

ತಿರುಗಿ ಕಂಡರು ಸಕಲ ಭೂಮೀ- |
ಶ್ವರರು ಗಹಗಹಿಸಿದರಿದೇನರೆ- |
ಮರುಳೊ ಜಡನೋ ವಿಪ್ರವೇಷಚ್ಛನ್ನ ಸುರಪತಿಯೊ ||
ಮರುಳುಗಳು ತಾವಕಟ ಮದನನ |
ಸರಳ ಮುರುಮೊನೆಗಾವನಂತಃ- |
ಕರಣ ನೆರೆ ಕಳವಳಿಸದೆಂದರು ನೃಪರು ತಮತಮಗೆ || ೧೬ ||

ಧನು ತನಗೆ ನೆಗಹಲ್ಕೆ ಕೃಷ್ಣಾ- |
ಜಿನವೊ ಸಾಲಿಗ್ರಾಮದೇವರೊ |
ವಿನುತ ತುಲಸಿಯೊ ಕುಶೆಯೊ ದರ್ಭೆಯೊ ಸಮಿಧೆಗಳ ಹೊರೆಯೊ ||
ನನೆದ ತಿಲವೋ ಮೇಣಿದಾಪಾ- |
ಸನದ ಕೊಳವಿಯೊ ಬಣಗುವಿಪ್ರನ |
ನೆನಹ ನೋಡಿರೆ ಘನವಲಾ ದ್ರೌಪದಿಯ ಸೌಭಾಗ್ಯ || ೧೭ ||

ಅಂಗವಿದು ಗಜತುರಗಶಸ್ತ್ರಾ- |
ಸ್ತ್ರಂಗಳರಿತವು ನಮಗೆ ವಿಪ್ರರಿ- |
ಗಂಗವೇದಪುರಾಣತರ್ಕಸ್ಮೃತಿಸುವಿದ್ಯೆಗಳು ||
ಅಂಗವಂಗಿಗಸಾಧ್ಯವಾದುದ- |
ನಂಗಿಗೊಡಬಡುವುದೆ ದ್ವಿಜಾತರು |
ಸಂಗತಾನುಷ್ಠಾನಪರರೆಂದುದು ನೃಪವ್ರಾತ || ೧೮ ||

---

1 ನಟ್ಟವಿಗ=ವೇಷಧಾರಿ.

ಇತ್ತ ನೋಡೌ ತಾಯ ಹಾರುವ- |
ರತ್ತ ಗಡ್ಡದುಪಾಧ್ಯರನು ತಾ- |
ವೆತ್ತುವರು ಗಡ ಧನುವನೆಸುವರು ಗಡ ತಿಮಿಂಗಿಳನ ||
ಹೊತ್ತುಗಳೆವರೆ ಲೇಸು ಬಳಿಕಿ- |
ನ್ನುತ್ತಮವಲಾ ವಿಪ್ರರೆನೆ ತಲೆ- |
ಗುತ್ತಿ ನಾಚಿದಳುಂಗುಟದಲೌಂಕುತ ಮಹೀತಳವ || ೧೯ ||

ಎಲವೊ ಮಟ್ಟಿಯ ಮದನ ದರ್ಭೆಯ |
ತಿಲದ ಮನ್ಮಥ ವಿಮಳಧೋತ್ರದ |
ತಳಿರುಗಾಸೆಯ ಕಾಮ ಕೃಷ್ಣಾಜಿನದ ಕಂದರ್ಪ ||
ನಳಿನಮುಖಿಯನು ವರಿಸು ಬಾ ನಿನ- |
ಗಳವಡುವಳೇಯಕ್ಕ ಮರಳಿಯೆ |
ತಲೆವಿಡಿವೆವಾವ್ ನೋಡಿಯೆಂದರು ನಗುತ ಚಪಲೆಯರು || ೨೦ ||

ಅವನಿಪತಿ ಕೇಳಿತ್ತಲೀ ಪಾ- |
ರ್ಥಿವರ ಪರಿಹಾಸವನು ಕಾಂತಾ |
ನಿವಹದಲಿ ನಿಬ್ಬರದ ನುಡಿಗಳನಾ ಮಹೀಸುರರ ||
ವಿವಿಧ ಕಟುಮಧುರೋಕ್ತಿವಿನ್ಯಾ- |
ಸವನು ಕೇಳುತ ಮುಗುಳುನಗೆಯಲಿ |
ನವಮದದ್ವಿಪದಂತೆ ಗರುವಾಯಿಯಲಿ ನಡೆತಂದ || ೨೧ ||

ಬಾಗಿ ನೋಡಿದ ತೈಲಕುಂಭವ- |
ನಾಗ ಹೊಳೆದುದು ಮತ್ಸ್ಯಲೋಚನ |
ಲಾಗಿನನುವನು ಕಂಡು ಹರುಷಿಸಿ ತಿರುವ ತೊಡರಿಸಿದ ||
ತೂಗಿ ಕಿವಿವರೆಗೊಯ್ದು ಯಂತ್ರವ |
ತಾಗಿಸಿದನಂಬಿನಲಿ ಪಾರ್ಥನ |
ಲಾಗುವೇಗವನಾರು ಬಲ್ಲರು ಚಾಪತಂತ್ರದಲಿ || ೨೨ ||

ಹಾಯೆನುತ ಬೊಬ್ಬಿರಿದು ವಿಪ್ರನಿ- |
ಕಾಯ ಕುಣಿದುದು ಕಮಲಮುಖಿ ನಿ- |
ದಾ೯ಯದಲಿ ಸೇರಿದಳು ಹಾರುವಗೆನುತ ಹರುಷದಲಿ ||
ಆ ಯುವತಿಜನಜಲಧಿ ಮಸಗಿತು |
ಬಾಯ ಮೌನದ ಬೆರಳ ಮೂಗಿನ |
ರಾಯರಿರ್ದರು ಹೊತ್ತ ದುಗುಡದ ಭಂಗಜಲಧಿಯಲಿ || ೨೩ ||

ಮೊಳಗಿದುವು ನಿಸ್ಸಾಳತತಿ ಹೆ- |
ಕ್ಕಳದ[1] ಹೆಚ್ಚಿಗೆಯಲ್ಲಿ ದಿವಿಜಾ- |
ವಳಿಯ ದುಂದುಭಿ ರವದಲುಬ್ಬಿದ ಸಾಧುವಾದಗಳ ||
ಕಳಕಳದ ಕೊಲ್ಲಣಿಗೆ[2]ಗಳ ಹೂ |
ಮಳೆಯ ಪೂರದ ಹೊನಲಿನಲಿ ಜನ |
ಮುಳುಗಿತದ್ಭುತರಸದಲಳ್ಳಿರಿದುದು[3] ಜಗತ್ತ್ರಯವ || ೨೪ ||

ಧರಣಿಪತಿ ಕೇಳಾ ಬಹಳಲಜ್ಜಾ- |
ಭರದ ಭಯದಲಿ ಬೆಮರಿಡುತ ಕುಚ- |
ಭರದಿ ಮೇಲುದ ಜಾರೆ ಜೋಡಿಸಿ ನಿಮಿರ್ದು ನಡುನಡುಗಿ ||
ತರುಣಿ ನಿಜತನುಪರಿಮಳದಿ ಮಿಗೆ |
ಹೊರೆದ ಹೂವಿನ ದಂಡೆಯನು ನೃಪ- |
ವರನ ಕೊರಳಲಿ ಹಾಯ್ಕಿದಳು ಜಯಯೆನೆ ಸುರಸ್ತೋಮ || ೨೫ ||

---

1 ಹೆಕ್ಕಳ=ಆನಂದ. 2 ಕೊಲ್ಲಣಿಗೆ=ಹಾರಾಟ. 3 ಅಳ್ಳಿರಿ=ಕಂಪಿಸು.

## ೧೩. ಅಗ್ರಪೂಜೆ

[ 'ಅಗ್ರಪೂಜೆ'ಯು ಪಂಪಭಾರತವೆಂದು ಪ್ರಸಿದ್ಧವಾಗಿರುವ ಆದಿಪಂಪನ ವಿಕ್ರಮಾರ್ಜುನ ವಿಜಯದ ಷಷ್ಠಾಶ್ವಾಸದಿಂದ ಉದ್ಧೃತವಾಗಿದೆ. ಈ ಮಹಾ ಕವಿಯನ್ನು ಕುರಿತು 'ಪುಷ್ಪಾಂಜಲಿ'ಯ ಆದಿಯಲ್ಲಿ ಪ್ರಸ್ತಾವಿಸಿದೆ. ಅರ್ಜುನನನ್ನು ಕಥಾನಾಯಕನನ್ನಾಗಿ ಮಾಡಿ ತನ್ನ ಪೋಷಕನಾದ ಅರಿಕೇಸರಿಯ ಸಾಹಸ ವರ್ಣಿಸುವ ಉದ್ದೇಶವಿಟ್ಟುಕೊಂಡುದರಿಂದ ಕವಿ ಭಾರತದ ಕಥೆಯ ಕೊನೆಯಲ್ಲಿ ಅರ್ಜುನನಿಗೆ ಪಟ್ಟಾಭಿಷೇಕವಾದಂತೆ ವರ್ಣಿಸಿದ್ದಾನೆ. ಇದು ಜೈನಕಾವ್ಯವಾದರೂ ಈ ಭಾರತಕ್ಕೂ ನಮ್ಮ ಭಾರತಕ್ಕೂ ವಿಶೇಷ ವ್ಯತ್ಯಾಸಗಳಿಲ್ಲ.

*"ಈ ಗ್ರಂಥದ ಬಂಧವು ಆದಿಪುರಾಣದ ಬಂಧದಷ್ಟು ಲಲಿತವಾಗಿಲ್ಲ. ಪ್ರೌಢವಾಗಿಯೂ ಭಾವಗರ್ಭಿತವಾಗಿಯೂ ಇದೆ. ಅದರಲ್ಲಿ ಸಂಸ್ಕೃತಪದಗಳು ಹೆಚ್ಚು; ಇದರಲ್ಲಿ ಕನ್ನಡಪದಗಳು ಹೆಚ್ಚು" ಈ ವ್ಯತ್ಯಾಸವನ್ನು 'ಪುಷ್ಪಾಂಜಲಿ'ಯಿಂದಲೂ 'ಅಗ್ರಪೂಜೆ'ಯಿಂದಲೂ ತಿಳಿಯಬಹುದಾಗಿದೆ ]

*ಕವಿಚರಿತೆ ಪ್ರಥಮಸಂಪುಟ ತಿದ್ದಿದ ಮುದ್ರಣ ಪುಟ 36.

ಬಲಿಯಂ ಕಟ್ಟಿದನಾವನೀ ಧರಣಿಯಂ ವಿಕ್ರಾಂತದಿಂದಂ ರಸಾ- |
ತಲದಿಂದೆತ್ತಿದನಾವನಂದು ನರಸಿಂಹಾಕಾರದಿಂ ದೈತ್ಯನಂ ||
ಚಲದಿಂ ಸೀಳ್ದವನಾವನಬ್ಧಿಮಥನಪ್ರಾರಂಭದೊಳ್ ಮಂದರಾ- |
ಚಲಮಂ ತಂದವನಾವನಾತನೆ ವಲಂ ತಕ್ಕಂ ಪೆರರ್ ತಕ್ಕರೇ || ೧ ||

ಮುಳಿದು ಶಿಶುಪಾಲನಾ ಸಭೆ- |
ಯೊಳಗೆ ಮಹಾಪ್ರಳಯಜಳಧಿನಾದದಿನಿರದು- ||
ಚ್ಚಳಿಸಿ ನುಡಿದಂತೆ ಕಳೆ ಕಳೆ |
ಹರಿಗೆತ್ತಿದನರ್ಘ್ಯದರ್ಘ್ಯಮಂ ಧರ್ಮಸುತಾ || ೨ ||

ತೀವಿದ ನರೆಯುಂ ಡೊಳ್ಳುಂ |
ದೇವವ್ರತನೆನಿಸಿ ನೆಗಳ್ದ ಯಶಮುಂ ಬೆರಸಿ- ||
ನ್ನೀವುದು ಹರಿಗರ್ಘ್ಯಮನೆಂ- |
ದಾವನುಮೀ ಭೀಷ್ಮರಂತು ನುಡಿದರುಮೊಳರೇ || ೩ ||

ಕುರುವೃದ್ಧಂ ಕುಲವೃದ್ಧಂ |
ಸರಿತ್ಸುತಂ ತಕ್ಕನೆಂದು ನಂಬಿದ ಸಭೆಯೊಳ್ ||
ದೊರೆಗೆಡಿಸಿ ನುಡಿದೊಡೇನೊಲ- |
ವರ[1]ಮೆನ್ನದೆ ನೀನುಮದನೆ ಕೊಂಡೆಸಗುವುದೇ || ೪ ||

---

1 ಒಲವರ=ಪಕ್ಷಪಾತ

ಮನದೊಲವರಮುಳ್ಳೊಡೆ ಕುಡು |
ಮನೆಯೊಳ್ ಹರಿಗಗ್ರಪೂಜೆಯಂ ಯಜ್ಞದೊಳೇ ||
ಮನುಜಾಧೀಶ್ವರಸಭೆಯೊಳ್ |
ನೆನೆಯಲುಮಾಗದು ದುರಾತ್ಮನಂ ಬೆಸಗೊಳ್ವಾ || ೫ ||

ಅಳವರಿಯದೆಗ್ಗು[1] ಬಳವಳ |
ಬಳೆವಿನೆಗಂ ಪಚ್ಚೆಪಸಿಯ ತುರುಕಾರಂಗ- ||
ಗ್ಗಳಿಕೆಯನೆ ಮಾಡಿ ನೀನುಂ |
ಪಳಿಯಂ ಕಟ್ಟಿದೆಯ ಭೂಪರನಿಬರ ಕೊರಲೊಳ್ || ೬ ||

ದೇವರನಡಿಗೆರಗಿಸಿ ಸಕ- |
ಲಾವನಿತಳದದಟರಂ ಪಡಲ್ವಡಿಸಿದ[2] ಶೌ- ||
ರ್ಯಾವಷ್ಟಂಭದೊಳಾನಿರೆ |
ಗೋವಳಿಗಂಗಗ್ರಪೂಜೆಯಂ ನೀಂ ಕುಡುವಾ || ೭ ||

ಸಮಕಟ್ಟರಿಯದೆ ಹರಿಗ- |
ರ್ಘ್ಯಮೆತ್ತಿ ನಿಂದಿರ್ದ ಯಜ್ಞಮದು ಮೊದಲೊಳ್ ತಾ- ||
ನಮರ್ದುಮಮರ್ದಿರದೆ ತಣಿಯುಂ- |
ಡಮರ್ದಂ ಗೋಮೂತ್ರದಿಂದೆ ಬಾಯ್ವೂಸಿದವೊಲ್ || ೮ ||

ಕುಡವೇಳ್ವನ ಕುಡುವನ ಕುಡೆ |
ಪಡೆವನ ಪೆಂಪೇಂ ನೆಗಳ್ತೆವಡೆಗುವೊ ಪೇಳ್ವಂ ||
ಕುಡವೇಳ್ಗೆಮ ಕುಡುವಣ್ಣಂ |
ಕುಡುಗೆಮ ಕುಡೆ ಕೊಳ್ವ ಕಲಿಯನರಿಯಲ್ಕಕ್ಕುಂ || ೯ ||

ದೊರೆಯಕ್ಕುಮೆ ನಿನಗೆ ಯುಧಿ- |
ಷ್ಠಿರನರ್ಘ್ಯಮನೆತ್ತೆ ಶಂಖದೊಳ್ ಪಾಲೆರೆದಂ- ||
ತಿರೆ ಮಲಿನಮಿಲ್ಲದೊಳ್ಗುಲ- |
ದರಸುಗಳಿರೆ ನೀನುಮಗ್ರಪೂಜೆಯನಾಂಪಾ || ೧೦ ||

---

1 ಎಗ್ಗು=ಅಪಮಾನ. 2 ಪಡಲ್ವಡಿಸು=ಕೆಡಹು.

ಮನದೊಲವರದಿಂದೀ ಯಮು- |
ತನಯನ ಕುಡುವಗ್ರಪೂಜೆ ಮತ್ಸನ್ನಿಧಿಯೊಳ್ ||
ನಿನಗಶನಿಯ ಮಿಳ್ತುವ ಸಂ- |
ಜಿಸ ದೊರೆಯೆಂ[1]ದೊಣರ ನಂದಗೋಪಾಲಸುತಾ || ೧೧ ||

ಮನೆ ನಿನಗೆ ನಂದಗೋಪಾ- |
ಲನ ಮನೆ ತುರುಗಾರ್ತಿ ನಿನಗೆ ಮನೆವೆಂಡಿತಿ ಪ- ||
ಚ್ಚನೆ ಪಸಿಯ ಗೋವನ್ನೈ ಕರ- |
ಮನಯದೆ ನಿನ್ನಳವಿಗಳವನರಿಯದೆ ನೆಗಳ್ದೈ || ೧೨ ||

ಮುರನಡಸಿ ಪಿಡಿದು ಕಟ್ಟಿದ |
ಪರಿಭವಮಂ ಮರೆದೆ ನಿನ್ನ ಪೆಡಗೆಯ್ಗಟ್ಟಂ ||
ಶರದಿಂ ಬಿಡಿಸಿದನಲ್ಲನೆ |
ಸರಿತ್ಸುತಂ ಬನ್ನವಿನ್ನವೆಂಬವುಮೊಳವೇ || ೧೩ ||

ದನುಜಾಂತಕನೆಂಬೀ ನಿ- |
ನ್ನ ನಚ್ಚುವೋದಂಕಮೆಲವೊ [2]ಮುನ್ನೆನ್ನನ್ನಂ ||
ದನುಜಂ ಪುಟ್ಟದೆ ಸಂದುದು |
ನಿನಗೀ ಪೆಸರೆನ್ನ ಮುಂದೆಯುಂ ಸಂದಪುದೇ || ೧೪ ||

ಆನಿರ್ದ ಸಭೆಯೊಳರ್ಘ್ಯಮು- |
ನಾನಲ್ಕಾ[3]ಟಿಸಿದ ನಿನ್ನ ಬಿಸುನೆತ್ತರನಿಂ- |
ತೀ ನೆರವಿ ನೋಡೆ ಕುಡಿಯದೊ- |
ಡೇನೋ ಶಿಶುಪಾಲನೆಂಬ ಪೆಸರೆಸೆದಪುದೇ || ೧೫ ||

ಮರೆದೆ ಮುಚುಕುಂದನೆಂಬನ |
ಮರೆವೊಕ್ಕುದನಂದು ನೀಂ ಜರಾಸಂಧಂಗಂ ||
ಬಿರುತೋಡಿದುದಂ ಭೂತಳ- |
ಮರಿಯದೆ ನೆನೆಯೆಲವೊ ಗೋವುಗಾದುದು ಪುಸಿಯೇ || ೧೬ ||

---

1 ಒಣರ್=ತಿಳಿ. 2 ಎನ್ನನ್ನಂ=ನನ್ನಂತಹವನು. 3 ಆಟಿಸು=ಅಪೇಕ್ಷಿಸು.

ಮೀನಾವೆ ಪಂದಿಯೆಂದಿನಿ- |
ತಾನುಂ ತೆರನಾಗಿ ಡೊಂಬಬಿಜ್ಜೆಯನಾಡಲ್ ||
ನೀನರಿವೆಯುರದಿದಿರ್ಚಿದೊ- |
ಡಾನರಿವೆಂ ನಿನ್ನನಿಲ್ಲಿ ದೆಸೆವಲಿಗೈಯಲ್ || ೧೭ ||

ಅರಿಯದಿದಂ ಮಾಡಿದೆನೆ- |
[1]ನ್ನರಿಯಮಿಕೆಗೆ ಸೈರಿಸೆಂದು ನೀಂ ಸಭೆಯೊಳ್ಕಾ- ||
ಲ್ಗೆರಗೆರಗು ಕೊಲ್ಲೆನೆಂದೆರ್ದೆ |
ತೆರೆವಿನೆಗಂ ಹರಿಯ ನೆರನನಸುರಂ ನುಡಿದಂ || ೧೮ ||

ಪೊಳೆದುಳ್ಕುವ ಕುಡುದಾಡೆಯ |
ಪೊಳಪು ನೊಸಲ್ಗಡರ್ದು ಪೊಡರ್ವ ಪುರ್ವೆಸೆವಿನಮು- ||
ವ್ವಳಿಸುವ ಮುಳಿಸಿನ ದಳ್ಳುರಿ- |
ಗಳನುಗುಳ್ವವೊಳುಗುಳ್ದನಸುರನುರಿವ ಪಳಿಗಳಂ || ೧೯ ||

ನಿನ್ನಯ ತಾಯ್ ಸಾತ್ವತಿಯುಂ |
ನಿನ್ನಂ ತಂದೆನ್ನ ತೊಡೆಯ ಮೇಲಿಳಿಪುವುದುಂ ||
ನಿನ್ನ ಲಲಾಟದ ಕಣ್ಣದು |
ಮುನ್ನಮೆ ಕಿಡೆ ನಿನ್ನ ಮೃತ್ಯುವೆನ್ನಯ ಕೈಯೊಳ್ || ೨೦ ||

ನೆರೆದುದನರಿದೀ ಕಿರಿಯುವ- |
ನರಿಯಡೆ ಕೆಡೆನುಡಿದನಪ್ಪೊಡಂ ನೂರುವರಂ ||
ನೆರೆ ಸಲಿಸುವುದೆಂದುದನಾಂ |
ಮರೆವನೆ ಬಯ್ ಬಯ್ಯೆ ಸಹಿಸುವೆಂ ನೂರುವರಂ || ೨೧ ||

ಮುನಿಯಲೆನಗಾಗ ಗಾಂಗೇ- |
ಯನಿರ್ದನಿರ್ದಂ ಘಟೋದ್ಭವಂ ನೆಗಳ್ದ ಪೃಥಾ- ||
ತನಯರುಮಿರ್ದರ್ ದುರ್ಯೋ- |
ಧನನಿರ್ದಂ ಕೇಳೆ ಪೇಳ್ವರಾ ಬಲ್ಲವರುಂ || ೨೨ ||

1 ಅರಿಯಮಿಕೆ=ಅಜ್ಞಾನ.

ಎನೆಯೆನೆ ಬಾಯ್ಗಂ ಬಂದನಿ- |
ತನಿತುಮನಮರಾರಿ ಬಯ್ಯೆ ಸೈರಿಸಿ ನೂರಂ- ||
ಬನಿತುವರಂ ಮನ್ನಿಸಿ ನಸು |
ಕಿನಿಸದೆ[1] ಮಿಗೆ ಕಿನಿಸಿ ದಿತಿಜಕುಳದವದಹನಂ || ೨೩ ||

ಮುಳಿದು ತನಗರ್ಘ್ಯಮೆತ್ತಿದ |
ತಳಿಗೆ[2]ಯೊಳಿಡೆ ತಿರಿದ ತೆರದೆ ತಲೆಪರಿದಾಗಳ್ ||
ಕಳಕಳಿಸಿ ನಗುತಮಿರ್ದುದು |
ತಳಿಗೆಯ ಮೇಲಸುರನದಟಿದೇನಚ್ಚರಿಯೋ || ೨೪ ||

ತಿರಿಪಿ ಕರಚಕ್ರಮಂ ದಸು- |
ಜರ ತಲೆಗಳನಸುರವೈರಿ ಮುಳಿದಿಡೆ ಪರಿದಂ- ||
ಬರತಳಮನೆಯ್ದಿ ಮೇಘದ |
ಪೊರೆವೊರೆಯೊಳ್ ತೊಡರ್ದು ನೆಲಕೆ ಬೀಳವೆ ತಲೆಗಳ್ || ೨೫ ||

1 ಕಿನಿಸು=ಕೋಪಿಸು. 2 ತಳಿಗೆ=ತಟ್ಟೆ.

# ೧೪. ಶಬರಶಂಕರವಿಲಾಸ

[ಷಡಕ್ಷರದೇವನು ಕನ್ನಡ ಮಹಾಕವಿಗಳಲ್ಲಿ ಅತಿಪ್ರಸಿದ್ಧರಾದ ಕೆಲವು ಕವಿಗಳಲ್ಲಿ ಒಬ್ಬನು. ಈತನು ವೀರಶೈವನಾದುದರಿಂದ ಆ ಮತದ ಆತನ ಅನಂತರದ ಕವಿಗಳು ಆತನನ್ನು ಬಹಳ ಗೌರವದಿಂದ ಸ್ತುತಿಸಿರುವರು. ಹನ್ನೊಂದು ವರ್ಷ ಪ್ರಾಯದಲ್ಲೆ ಆತನಿಗೆ ಕವಿತಾಶಕ್ತಿ ಉಂಟಾಗಿ ಆತನು ಬಲು ಬೇಗನೆ ಉಭಯಕವಿತಾವಿಶಾರದನೆಂದು ಕೀರ್ತಿಗೊಂಡನು. ಆತನು ಯಳಂದೂರ ಮಠದ ಸ್ವಾಮಿಯಾಗಿ ಯೋಗಾಭ್ಯಾಸ ಮುಂತಾದುವುಗಳಲ್ಲಿ ನಿರತನಾಗಿದ್ದರೂ ಕನ್ನಡ ಸಾಹಿತ್ಯಕ್ಕೆ ರತ್ನಪ್ರಾಯವಾದ ಮೂರು ಕಾವ್ಯಗಳನ್ನು ಕೊಟ್ಟನು. ಆತನ ಕಾವ್ಯಗಳಾದ ರಾಜಶೇಖರವಿಲಾಸ, ವೃಷಭೇಂದ್ರವಿಜಯ, ಶಬರಶಂಕರವಿಲಾಸಗಳಲಿ ಮೊದಲನೆಯ ಕಾವ್ಯವೇ ಅತಿ ಪ್ರಸಿದ್ಧವಾದುದು. ಆತನು ೧೭ನೆಯ ಶತಮಾನದ ಮಧ್ಯಭಾಗದಲ್ಲಿದ್ದವನಾದರೂ ಪೂರ್ವಕವಿಗಳ ಕವಿತಾಶಕ್ತಿಯನ್ನೂ ರಚನಾಕೌಶಲ್ಯವನ್ನೂ ಶಬ್ದಾಲಂಕಾರ ಅರ್ಥಾಲಂಕಾರ ಪ್ರೌಢಿಮೆಯನ್ನು ತೋರಿ ಸಾಹಿತ್ಯದಲ್ಲಿ ಗೌರವಸ್ಥಾನವನ್ನು ಪಡೆದನು. ಇಲ್ಲಿರುವ ಶಬರಶಂಕರವಿಲಾಸವು ಶಬರಶಂಕರವಿಲಾಸದ ಚತುರ್ಥಪಂಚಮಾಶ್ವಾಸಗಳಿಂದ ಆಯ್ದು ತೆಗೆದುದಾಗಿದೆ. ಇದರ ಹಲವು ಪದಗಳೂ ದಶಪರ್ವಭಾರತದ ಪಾಶುಪತಾಸ್ತ್ರದ ಕಥಾಭಾಗದ ಪದಗಳೂ ಬಹುಮಟ್ಟಿಗೆ ಹೋಲುವುದು ಆಶ್ಚರ್ಯಕರವಾಗಿದೆ.]

ಎಲೆ ಶಬರ ಕಾಡ ಬಡನರಿ- |
ಮೊಲಪುಲ್ಲೆಗಳಲ್ಲಿ ನಿನ್ನ ಸಾಹಸಮುಂ ದೋ- ||
ರ್ಬಲಮುಂ ಮೆರೆಗುಮದಲ್ಲದೆ |
ಚಲದಂಕನೊಳೆನ್ನೊಳೆಂತುಮೇಂ ಮೆರೆದಪುದೇ || ೧ ||

ಬೇಡ ನಿನಗೇಕೆ ಸಾಹಸ- |
ದಾಡಂಬರಮೆನ್ನೊಳಾಹವಕ್ಕನುಗುಣನಂ ||
ಜೋಡಿಸು ನಿನಗುಳ್ಳೊಡೆಯನ- |
ನಾಡಲದೇಂ ತೋರ್ಪೆನೆನ್ನ ಸಾಹಸದಿರವಂ || ೨ ||

ಎನೆ ನಸುನಕ್ಕು ಮಾರರಿಪುವಾತನ ಧೈರ್ಯಮನಾತನೇಳ್ಗೆವೆ- |
ತ್ತನುಗತಶೌರ್ಯಮಂ ಬಳಿಯೊಳಿರ್ಪಗಜಾತೆಗೆ ಸೂಚಿಸುತ್ತೆ ಪು- ||
ರ್ಬಿನ ಕೊನೆಸನ್ನೆಯಿಂ ಗೊರವ ನಿನ್ನಯ ಶೌರ್ಯಮದಿರ್ಕೆ ಖಡ್ಗಮಾ |
ಧನು ಶರಮೆತ್ತ ನಿನ್ನ ತಪಮೆತ್ತ ವಿಚಿತ್ರಮಿದಲ್ತೆ ಧಾತ್ರಿಯೊಳ್ || ೩ ||

ವಿಪಿನಚರ ನಿನಗೆ ತಕ್ಕುದು |
ಚಪಲಮೃಗವ್ರಜದ ಬೇಂಟೆಯುಜ್ಜುಗಮೆಮ್ಮಾ ||
ತಪದ ವಿಚಾರಂ ತಕ್ಕುದೆ |
ವಿಪರೀತಂ ನಿನ್ನ ನುಡಿಯನೊಲ್ವರೆ ಬಲ್ಲರ್ || ೪ ||

ಎಂದವನುಕ್ತಿಯಂ ಗಿರಿಶನಾಲಿಸಿ ತಾಪಸ ಲೇಸನಾಡಿದೈ |
ಕುಂದದೆ ಬೇಂಟೆಯುಜ್ಜುಗಮಿದೆಮ್ಮಯ ಕಜ್ಜಮಿದಪ್ಪುದಪ್ಪುದಾ- ||
ವಂದದಿನಿಂತು ನಿನ್ನವೊಲದಾವನೊ ಶಾಂತಿಸಮಗ್ರಶೌರ್ಯಧು- |
ರ್ಯಂ ದಿಟವಸ್ತ್ರಶಸ್ತ್ರಧರನಾದ ತಪಸ್ವಿ ಧರಾತಲಾಗ್ರದೊಳ್ || ೫ ||

ಕಟಕಿ[1]ಯಿದೇಂ ಪುಳಿಂದ ಬಿಡು ನಿನ್ನ ದುರುಕ್ತಿಯನೆಮ್ಮ ವೃತ್ತಿಯಂ |
ಪಟುತರಮಾಂತ ತಾಪಸರೆ ಬಲ್ಲರುದಾರಜಟಾಮೃಗಾಜಿನ ||
ಸ್ಫುಟಭಸಿತಂಗಳಂ ಶರಶರಾಸನಖಡ್ಗಮನಾಂತು ತಾಪಸೋ- |
ತ್ಕಟಮೃಡನಿರ್ಪನಾ ಮೃಡನ ಶಿಷ್ಯತೆಯಾಂತೆನಗೇನಿದೊಪ್ಪದೇ || ೬ ||

ನೀನೆನ್ನೊಳಾಹವಕ್ಕೆ ಸ- |
ಮಾನನೆ ತೊಲಗಾಂಪ ಧೀರನಂ ಬರಿಸೀಗಳ್ ||
ಕಾನನಚರ ಸಮರದೊಳಭಿ- |
ಮಾನವನುಳಿಯೆನೆ ಮಹೇಶ್ವರಂ ಮುಗುಳ್ನಗೆಯಿಂದಂ || ೭ ||

ಏನಾದೊಡೇನೊ ನಿನ್ನ ತ- |
ಪೋನಿಯತಿಯದಂತಿರಿರ್ಕೆ ನಿನ್ನ ಧನುರ್ವಿ- ||
ದ್ಯಾನಿಪುಣತೆಯೆಂತೆಂತನು- |
ಮಾನಮದೇಂ ತೋರ್ಪುದೆನ್ನೊಳದನನಿಸರಿಪೆಂ || ೮ ||

ಬರಿದೇಕೆ ಗಳಪಿದಪೆ ನೀಂ |
ಪೊರಮಡು ಸಮರಕ್ಕೆ ನಿನ್ನ ಭುಜಬಲದಿರವಂ ||
ನೆರೆ ಕಾಣ್ಬೆನೆನ್ನ ಮಾಸಿಯ |
ತೆರನಂ ಕಡೆಗಣ್ಣಿ ಪಿಂಗಿ ಪೆರಸಾರ್ದಪೆನೇ || ೯ ||

---

[1] ಕಟಕಿ = ಎದೆಚುಚ್ಚುವ ಮಾತು.

ಒಳಸೋರ್ದುದು ಶಾಂತಿರಸಂ |
ಮೊಳೆತುದು ಕೋಪಾಗ್ನಿ ಪೊಗೆದುದುಸಿರೊಳ್ ಸಿಡುಗ- ||
ಣ್ಗಳ ಕಡೆಯೊಳ್ಕಿಡಿಗೆದರ್ದುದು |
ಬಳಿಕಲರ್ದುದು ಮೊಗದೊಳಚಲರಿಪುನಂದನನಾ || ೧೦ ||

ಗಿರಿಯಗ್ರದೊಳುರೆ ಕರೆವಂ |
ಶರವೃಷ್ಟಿಯನಾತ್ಮಜನಕನಿಂದ್ರನೆನುತ್ತುಂ ||
ಪುರುಡಿಸಿ[1] ಶರವೃಷ್ಟಿಯನಾ |
ಗಿರಿಶಾಗ್ರದೊಳೆಯ್ದೆ ಕರೆದನರ್ಜುನನದಟಿಂ || ೧೧ ||

ಮಂಜಿನ ಪುಂಜಮೊತ್ತರಿಸಿ ಮುತ್ತಿ ಮುಸುಂಕೆ ಭಯಾರ್ತಿಗೊಳ್ವನೇ |
ಕಂಜಸಖಂ ಪತಂಗತತಿ ಪಾಯ್ದೊಡೆ ಬೆರ್ಚುಗುಮೇ ದವಾಗ್ನಿ ವಾ- ||
ತಂ ಜವದಿಂ ಪಳಂಚೆ ಗಿರಿ ಕಂಪನವಾಂಪುದೆ ಪಾರ್ಥ ಪತ್ರಜಾ- |
ತಂ ಜಡಿದೊತ್ತೆ ಪಾರಿ ಪೆರಸಾರ್ವನೆ ಧೀರಧನಂಜಯಾಂಬಕಂ || ೧೨ ||

ಶರವೃಂದಂ ಮಾಣದೆಲ್ಲಂ ಕಡಿವಡೆದಿಳೆಯೊಳ್ಬೀಳೆ ಕಣ್ದಾರಿ ಕೋಪಾ- |
ತುರಚಿತ್ತಂ ಮತ್ತಮೆಚ್ಚಂ ಕಿವಿವರೆಗುಗಿದುದ್ದಂಡಕಾಂಡಂಗಳಂ ಶಂ- ||
ಕರನಾ ಬಾಣಂಗಳಂ ಖಂಡಿಸಿ ಮಗುಳ್ದು ನಿಜಾಸ್ತ್ರಂಗಳಿಂದೆಚ್ಚನಾಗಳ್ |
ಬೆರಲೆತ್ತುತ್ತೆಯ್ದೆ ಕೊಂಡಾಡಿದನವನ ಮಹಾಶೌರ್ಯಮಂ ಪಾಂಡುಪುತ್ರಂ || ೧೩ ||

ಎಲೆ ಶಬರ ನಿನ್ನ ಪೃಥುಭುಜ |
ಬಲಮೊಳ್ಕಿತ್ತೆಸುಗೆ ಪೊಸತು ಬಿಲ್ಲಾಳ್ತನದೊಳ್ ||
ಕಲಿ ನೀನಲ್ಲದೆ ಪೆರರಾರ್ |
ಛಲದಿಂ ಸಮನೆನಿಸಿ ಕಾದಿದೈ ಬಿಡದೆನ್ನೊಳ್ || ೧೪ ||

ಶಿವನಿಂ ದಿವ್ಯತರಾಸ್ತ್ರಮಂ ಪಡೆಯಲೆಂದೇಳ್ತಂದು ಪಾರ್ಥಂ ಮಹೋ- |
ತ್ಸವದಿಂದಂ ತನಗುಳ್ಳ ಸರ್ವಶರಮಂ ದೇವೇಶ ನೋಡೆಂದು ತೋ- ||
ರ್ಪವೊಲೆಚ್ಚಂ ಕಡಿದಾ ಕಳಂಬ[2]ಮನಿತಂ ನಿಸ್ನಿಷ್ಟಮಾದಸ್ತ್ರಮಂ |
ತವೆ ನೋಡೆಂದವನಲ್ಲಿ ತೋರುವವೊಲಾತಂಗೆಚ್ಚನುಗ್ರಾಂಬಕಂ || ೧೫ ||

---

1 ಪುರುಡಿಸು=ಮತ್ಸರಿಸು. 2 ಕಳಂಬ=ಬಾಣ.

ಖಾಂಡವದಹನದೊಳಂದಾ |
ಪಾಂಡವನಂ ಪೊರ್ದಿದಕ್ಷಯಾಸ್ತ್ರಾಂಬುಧಿಯಂ ||
ಖಂಡಪರಶುಪ್ರತಾಪಾ- |
ಖಂಡಿತಬಡಬಾಗ್ನಿ ಪೀರ್ದುದಿನಿಸುಳಿಯದವೊಲ್ || ೧೬ ||

ಸವೆದುದು ನಿಷಂಗ[1]ಶರತತಿ |
ಸವೆಯದು ಕೋಪಾಗ್ನಿ ತಿಳಿವು ಮಸುಳ್ದುದು ಸಮರೋ- ||
ತ್ಸವಮತಿ ಕಳೆಯೇರಿದುದಂ- |
ದಪಂಗೆ ಪಶುಪತಿಯ ಮಾಯೆಯಂ ಮಾರುವರಾರಾ || ೧೭ ||

ಶರತತಿಯೆಲ್ಲಂ ಬರಿದಾ- |
ಯ್ತುರು ಧನುವುಂ ಪೋಯ್ತುಡಾಯುಧಂ[2] ಜಗುಳ್ದುದು ಕೋ- ||
ಡಿರದುಡಿದಿಭದವೊಲಿರ್ದಂ |
ನರನೀಶ್ವರನೊಡನೆ ಸದರಮಪ್ಪುದೆ ಸಮರಂ || ೧೮ ||

ಎಲೆ ಗೊರವ ಚಾಪಬಾಣಾ- |
ವಳಿಯುಂ ಖಡ್ಗಮುಮನಕಟ ನೀಗಿದೆ ನಿನ್ನೀ ||
ಚಲಮುಂ ಬಲಮುಮನಿನ್ನೊಂ- |
ದಲಗುಳ್ಳೊಡೆ ತಂದು ತಾಳ್ದು ಮೆರೆ ಬಳಿಕೆಮ್ಮೊಳ್ || ೧೯ ||

ಇಲ್ಲದೊಡಿಲ್ಲೆನ್ನಿತ್ತಪೆ- |
ನಿಲ್ಲಿಯೆ ನಿನ್ನಾಯುಧಂಗಳಂ ಪಿಡಿ ರಣದೊಳ್ ||
ಗೆಲ್ಲಲ್ಕೆ ಸಾರ್ದ ಕಲಿ ನೀ- |
ನೆಲ್ಲಂದದಿನೆನ್ನೊಳಾಂತು ಗೆಲ್ವುದೆ ಕಜ್ಜಂ || ೨೦ ||

ಇನಿತೊಂದುರ್ಬಟೆಯೇಂ ಪುಳಿಂದ ಬಿಡು ನಿನ್ನೀ ಬಿಂಕಮಂ ಮಾಣ್ಗೆ ಶ- |
ಸ್ತ್ರನಿಶಾತಾಸ್ತ್ರನಿಕಾಯದಿಂ ನೆಗಳ್ವ ಯುದ್ಧಂ ಮುಷ್ಟಿಯುದ್ಧಕ್ಕೆ ನೀ- ||
ನನುವಾಗೀಗಳೆ ತೋರ್ಪೆನೆನ್ನ ಬಲವದ್ದೋರ್ದಂಡಶೌರ್ಯಪ್ರವ- |
ರ್ತನಮಂ ನೋಡುಗೆ ನಿನ್ನ ನಚ್ಚಿನ ಕಿರಾತವ್ರಾತಮೆನ್ನಂದಮಂ || ೨೧ ||

---

1 ನಿಷಂಗ=ಬತ್ತಳಿಕೆ. 2 ಉಡಾಯುಧ=ಆಯುಧವಿಶೇಷ, ಖಡ್ಗ.

ಮುರಿವ ಮುರಿದೊತ್ತುವಾರ್ದು-|
ಪ್ಪರಿಸುವ ಬೀಳ್ವೇಳ್ವ ಸುಳಿವ ಸುತ್ತುವ ಡಗೆಯಂ ||
ತರಹರಿಪ ಸಾರ್ವ ಪಾರ್ವ- |
ಬ್ಬರಿಪೆಸಕಂ ಮಿಾರೆ ಕಾದಿದರ್ ಕಡುಗಲಿಗಳ್ || ೨೨ ||

ಸೋಲಿಸೆ ಜವಮುದು ಜವಮಂ |
ಸೋಲಿಸೆ ಲುಳಿ[1] ಲುಳಿಯ ಬಿನ್ನಣಂ ಬಿನ್ನಣಮಂ ||
ಸೋಲಿಸೆ ಪೊಯ್ಗಳ್ ಪೊಯ್ಗಳ |
ಸೋಲಿಸಯುಂ ಸೋಲಲಾರ್ತ್ತರಲ್ತಾ ಕಲಿಗಳ್ || ೨೩ ||

ಕ್ಷತರೇಖೆ ತಟ್ಟಲೀಯದೆ |
ಮತಿ ಮಿಗೆ ಸಮದಂಡಿಗೈದನಿವನೆಂದು ಸಮು- ||
ನ್ನತರೋಷದಿಂದೆ ತಿವಿದಂ |
ಶತಮುಖಸುತನತನುಹರನ ವಕ್ಷಸ್ಸ್ಥಳಮಂ || ೨೪ ||

ಆ ಕೈ ಮುಂಚದ ಮುನ್ನಂ |
ಲೋಕೈಕಾಧೀಶನೆತ್ತಿ ದೃಢಮುಷ್ಟಿಯನಾ ||
ಪಾಕರಿಪುತನಯನಂಗಮ- |
ನಾ ಕಪಟಕಿರಾತನೋವಿ ಮೆಲ್ಲನೆ ತಿವಿದಂ || ೨೫ ||

ಬರೆತುದು ಧೈರ್ಯವಾರ್ಧಿ ಬರನಾದುದು ಪೆರ್ಚಿನ ಶಕ್ತಿ ಬಿಂಕಮಂ |
ತೊರೆದುದು ಚಿತ್ತವೃತ್ತಿ ನೆರೆ ನೆರ್ಗಿದುದಿಂದ್ರಿಯರಾಜಿ ಬೀತುದೆ- ||
ಚ್ಚರುಮೊಳಸೋರ್ದುದುತ್ಸವಮುಡಂಗಿದುದುನ್ನತಿ ಕುಂದನಾಳ್ದೆನೆಂ- |
ಬೆರ್ಕದ ಹೇವಮಾವರಿಸೆ ನೊಂದು ಪಲಂಬಿದನಾ ಧನಂಜಯಂ || ೨೬ ||

ಎಲ್ಲಂದದಿನಾಹವದೊಳ್ |
ಗೆಲ್ಲಂ ಶಬರಂಗೆ ಸೋಲಮೆನಗಾಯ್ತುಕಟಿ- ||
ನ್ನೆಲ್ಲಿಯದು ವಿಜಯನಾಮಸ- |
ಮುಲ್ಲಸಿತಖ್ಯಾತಿಯೆಂದು ಬಿಸುಸುಯ್ವುತ್ತುಂ || ೨೭ ||

---

1 ಲುಳಿ=ಲಾಘವ.

ಜಗದೇಕವೀರಶಬ್ದಂ |
ನಗೆಗೆಡೆಯಾಯ್ತೆನಗೆ ಪರ್ಬಿದತ್ತೆಣ್ದೆಸೆಯೊಳ್ ||
ನೆಗಳ್ದಪಯಶವಿಾ ಶಬರನಿ- |
ನೊಗೆದ ಪರಾಭೂತಿವೆತ್ತ ಕಾರಣದಿಂದಂ || ೨೮ ||

ಎತ್ತಣ ಬನವೆತ್ತಣ ಕಿಟಿ- |
ಯೆತ್ತಣ ಕಾಳ್ಬಿಯದನಾಗಮಂ ಶಿವ ಶಿವ ಮೇ- ||
ಣೆತ್ತಣ ಕಾಳೆಗದುಜ್ಜುಗ- |
ಮೆತ್ತಣ ಪರಿಭವಮಿದೆನಗೆ ಸಾರ್ದುದು ಚಿತ್ರಂ || ೨೯ ||

ಈತಂ ನರನಕ್ಕುಮೊ ಪಡಿ |
ಮಾತೇಂ ಮಗುಳ್ದಾನೆ ಶಬರನಪ್ಪೆನೊ ರಣಸಂ- ||
ಜಾತಜಯಲಕ್ಷ್ಮಿಯಗ್ಗದ |
ಬೂತಾಟಮೊ ತಿಳಿಯೆನೆಂದವಂ ಚಿಂತಿಸಿದಂ || ೩೦ ||

ತಪಮೊಳಸೋರ್ದುದು ಮಂತ್ರದ |
ಜಪಮುಳಿದುದು ತೊಲಗಿದುದು ಮಹೇಶಧ್ಯಾನಂ ||
ಕುಪಿತಂಗೆನಗಂತದರಿಂ- |
ದಪಜಯಮಿದು ನೆಗಳ್ದುದಲ್ಲದೊಡೆ ಸಮನಿಪುದೇ || ೩೧ ||

ಪರಮಶಿವಾಗಮೋಕ್ತವಿಧಿಯಿಂ ಮಣಲಿಂ ನೆಗಳ್ದೊಂದು ಲಿಂಗಮಂ |
ನಿರುಪಮಭಕ್ತಿಯಿಂ ತಿರಿದು ಪಟ್ಟಳಿ ಬಂದುಗೆ ಕಕ್ಕೆ ಮುತ್ತ ಪಾ- ||
ದರಿಗಳ ಪೂಗಳಂ ಮೃದುಳ ಬಿಲ್ವದಳಂಗಳನಲ್ಲಿ ತಂದು ಶಂ- |
ಕರನನೊರಲ್ದು[1] ಪೂಜಿಸಿದನರ್ಥಿತವೈರಿಜಯಂ ಧನಂಜಯಂ || ೩೨ ||

ಮಣಲ ಲಿಂಗದ ಮಸ್ತಕಾಗ್ರದ ಪುಷ್ಪಮಂಜರಿ ಮಾಣದಾ |
ಕ್ಷಣಮೆ ತಳ್ತಡದರ್ಾ ಕಿರಾತನ ಮಂಡೆಯಲ್ಲಿರೆ ಕಂಡು ಕಾ- ||
ರಣಮಿದೇಂ ಪೊಸತೆಂದು ಸಾದ್ಭುತಮಾನಸಂ ಮಗುಳ್ದೀಕ್ಷಿಸು- |
ತ್ತಣಿಯರಂ ಬಿಡದಿತ್ತ ಲಿಂಗದ ಶೂನ್ಯಶೀರ್ಷಮನರ್ಜುನಂ || ೩೩ ||

---

1 ಒರಲ್=ಪ್ರೀತಿಪಡು.

ಹರ ಹರ ದೇವ ದೇವನಿವನಲ್ತೆ ಶಿವಂ ಭುವನೈಕವಲ್ಲಭಂ ।
ಗುರು ಸಕಲಾಮರರ್ಗೆ ಶಬರಾಕೃತಿಯಿಂ ಮದನುಗ್ರಹಾರ್ಥವಿ ॥
ಪರಿ ನಡೆತಂದನಲ್ತೆ ತಪದುಬ್ಬೆಗದುದ್ಭ್ರಮೆ ನೆತ್ತಿ ಪತ್ತೆ ಸೈ- ।
ತಿರದೆ ಮರುಳ್ತನಂದಳೆದಿದಿರ್ಚಿದೆನೆನ್ನವೊಲಜ್ಞನಾವನೊ ॥ ೩೪ ॥

ತ್ರಿಳಿದೆನೆ ಶಂಭುವೆಂದು ಬಹುಬಾಣದಿನೆಚ್ಚೊಡೆ ತಾಗದಂದದೇಂ ।
ತಿಳಿದೆನೆ ದಿವ್ಯಮಾರ್ಗಣದಿ ನಾನಿಸೆ ತಳ್ವದೆ ನುಂಗಿದಂದದೇಂ ॥
ತಿಳಿದೆನೆ ಕೈಯ ಚಾಪಮನಡಾಯುಧಮಂ ಸೆಳೆದೀಳ್ದುಕೊಂಡೊಡಂ ।
ತಿಳಿವೊಳಸೋದುದಕ್ಕಟ ಪುರಾಕೃತಕರ್ಮದ ಪೆರ್ಮೆಯೆಂತುಟೋ ॥ ೩೫ ॥

ಎಂದಿಂತು ಚಿಂತಿಸುತೆ ಪಲ- ।
ವಂದದ ಬಗೆನೊಂದು ಹಮ್ಮದಂಬೋಗಿರೆ ಪಾ- ॥
ರ್ಥಂ ದಯೆಯಿಂದವನಿರ್ದೆಡೆ- ।
ಗಿಂದುಧರಂ ತಳರ್ದು ತಂಪುವೀರಿದನಾಗಳ್ ॥ ೩೬ ॥

ಪೊಗೆಯಳಿದಗ್ನಿಯಂತೆ ಮುಗಿಲೋಡಿದ ಭಾಸ್ಕರನಂತೆ ಮಾಯೆ ಮೈ- ।
ದೆಗೆದ ನಿಜಾತ್ಮನಂತಿರೊರೆಯುರ್ಚಿದ ಕೂರಸಿಯಂತೆ ಕಾಂತಿ ಕೈ- ॥
ಮಿಗೆ ಶಬರಾಂಗಮಂ ತೊರೆದು ಪೂರ್ವನಿಜಾಕೃತಿವೆತ್ತಲಂಪಿನಿಂ ।
ಸೊಗಯಿಸುತಿರ್ದನಾಗಮಶಿರಂ ಪೊಗಳುತ್ತಿರೆ ಚಂದ್ರಶೇಖರಂ ॥ ೩೭ ॥

ಬೆಮರ್ವ ಕಳೇವರಂ ಸುರಿವ ಸಂತಸಗಂಬನಿ ತಳ್ತ ಕಂಪನಂ ।
ನಿಮಿರ್ದೆಸೆವಂಗರೋಮತತಿ ಕಂಗೊಳಿಸುತ್ತಿರೆ ತಳ್ವದೇಳ್ವ ಸಂ- ॥
ಭ್ರಮದ ಪೊದಳ್ಕೆಯಿಂ ಮುದದ ಪೆರ್ಚುಗೆ ಸಂದಣಿಗೊಳ್ವಿನಂ ಪದಾ- ।
ಬ್ಜಮನಮರ್ದೊಪ್ಪೆ ಮೌಳಿ ಮಣಿದಂ ಮಹಿಯಂ ತನು ಸೋಂಕೆ ಪಾಂಡವಂ
॥ ೩೮ ॥

ಕರುಣಿಪುದೆನಗೆಲೆ ಕರುಣಾ- ।
ಕರ ಪಾಶುಪತಾಸ್ತ್ರಮಂ ಮಹಾಬ್ರಹ್ಮಶಿರ- ॥
ಶ್ಶರಮಂ ಸಮಸ್ತರಿಪುಸಂ- ।
ಹರಮಂ ದಯೆಯಿಂದೆನುತ್ತೆ ಬೇಡುತ್ತಾಗಳ್ ॥ ೩೯ ॥

ಸರದೊಳ್ ಮಿಂದೆಸಗುತ್ತುಮಾಚಮನಮುಂ ಸದ್ಭಕ್ತಿಯಿಂ ಪಾದಪಂ- |
ಕರುಹಕ್ಕೊಲ್ದಿರಗಿರ್ದ ಗಾಂಡಿವಿಗೆ ತತ್ತನ್ಮಂತ್ರಪೂರ್ವಂ ಕೃಪಾ- ||
ಭರಿತಂ ಬ್ರಹ್ಮಶಿರೋಸ್ತ್ರಮಂ ಕರುಣಿಸುತ್ತುಂ ಮತ್ತಮಿತ್ತಂ ಗುಣಾ- |
ಭರಣಂ ಪಾಶುಪತಾಸ್ತ್ರಮಂ ಪದಪಿನಿಂ ಕೊಂಡಾಡೆ ದೇವವ್ರಜಂ || ೩೦ ||

## ೧೫. ಧರ್ಮಸಂಕಟ

ಇನತನೂಜನ ಕೂಡೆ ಮೈದುನ- |
ತನದ ಸರಸವನೆಸಗಿ ರಥದೊಳು |
ದನುಜರಿಪು ಬರಸೆಳೆದು ಕುಳ್ಳಿರಿಸಿದನು ಪೀಠದೊಳು ||
ಎನಗೆ ನಿಮ್ಮಡಿಗಳೊಳು ಸರಿಸೇ- |
ವನೆಯೆ ದೇವ ಮುರಾರಿಯಂಜುವೆ- |
ನೆನಲು ತೊಡೆಸೋಂಕಿನೊಳು ಸಾರಿದು ಶೌರಿಯಿಂತೆಂದ || ೧ ||

ಭೇದವಿಲ್ಲೆಲೆ ಕರ್ಣ ನಿಮ್ಮೊಳು |
ಯಾದವರು ಕೌರವರೊಳಗೆ ಸಂ- |
ವಾದಿಸುವೊಡನ್ವಯಕೆ ಮೊದಲೆರಡಿಲ್ಲ ನಿನ್ನಾಣೆ ||
ಮೇದಿನೀಪತಿ ನೀನು ಚಿತ್ತದೊ- |
ಳಾದುದಿಲ್ಲರಿವೆನುತೆ ದಾನವ- |
ಸೂದನನು ರವಿಸುತನ ಕಿವಿಯೊಳು ಬಿತ್ತಿದನು ಭವವ || ೨ ||

ದಾನವಾಂತಕ ಬೆಸಸು ವಂಶವಿ- |
ಹೀನನನು ನಿಮ್ಮಡಿಗಳೊಡನೆ ಸ- |
ಮಾನಿಸುವರೇ ಸಾಕೆನುತ ತಲೆವಾಗಿ ಕೈಮುಗಿಯೆ ||
ಮಾನನಿಧಿ ಎನ್ನಾಣೆ ಬಾರೈ |
ನೀನು ನಮ್ಮೆಲ್ಲರ ಹವಣೆ ವರ |
ಭಾನುವಂಶಲಲಾಮ ನೀಂ ರಾಮಂಗೆ ಸರಿಯೆಂದ || ೩ ||

ಕಳೆದುಕೊಂಡನು ವೀಳೆಯವನಂ- |
ಜುಳಿಯೊಳಾತಂಗಿತ್ತು ಕರ್ಣನ |
ಕೆಲಕೆ ಬರಸೆಳೆದವನ ಕರದೊಳು ಕರತಳವನಿಕ್ಕಿ ||
ಎಲೆ ದಿವಾಕರತನಯ ನಿನ್ನಯ |
ಕುಲವನರಿಯೆಯಲಾ ಸುಯೋಧನ- |
ನೊಳು ವೃಥಾ ಸೇವಕತನದೊಳಿಹುದುಚಿತವಲ್ಲೆಂದ || ೪ ||

ಲಲನೆ ತಾಂ ಪಡೆದೈದುಮಂತ್ರಂ- |
ಗಳಲಿ ಮೊದಲಿಗ ನೀನು ನಿನ್ನಯ |
ಬಳಿ ಯುಧಿಷ್ಠಿರದೇವ ಮೂರನೆಯಾತ ಕಲಿಭೀಮ ||
ಫಲುಗುಣನು ನಾಲ್ಕನೆಯೊಳೈದನೆ- |
ಯೊಳು ನಕುಲಸಹದೇವರಾದರು |
ಬಳಿಕ ಮಾದ್ರೀದೇವಿಯಲ್ಲಿಯದೊಂದು ಮಂತ್ರದೊಳು || ೫ ||

ಆದರಿಸೀ ಪಾಂಡವರೊಳೈವರ |
ಮೊದಲಿಗನು ನೀನಿರಲು ಧರಣಿಯ |
ಕದನವಿತ್ತಂಡಕ್ಕೆ ಕಾಮಿತವಲ್ಲ ಭಾವಿಸಲು ||
ಇದು ನಿದಾನವು[1] ಕರ್ಣ ನಿನ್ನ- |
ಭ್ಯುದಯವನೆ ಬಯಸುವೆನು ನಿನ್ನಯ |
ಪದಕೆ ಕೆಡಹುವೆನೈವರನು ಬಹುದೆನ್ನ ಸಂಗಾತ || ೬ ||

ನಿನಗೆ ಹಸ್ತಿನಪುರದ ರಾಜ್ಯದ |
ಘನತೆಯನು ಮಾಡುವೆನು ಕೌರವ |
ಜನಪ ಪಾಂಡವಜನಪರೋಲೈಸುವರು ಗದ್ದುಗೆಯ ||
ನಿನಗೆ ಕಿಂಕರರೆರಡು ಸಂತತಿ- |
ಯೆನಿಸಲೊಲ್ಲದೆ ನೀನು ದುರ್ಯೋ- |
ಧನನ ಬಾಯ್ದಂಬುಲಕೆ ಕೈಯಾನುವುದೆ ಹೇಳೆಂದ || ೭ ||

ಎಡದ ಮೈಯೊಳು ಕೌರವೇಂದ್ರನ |
ಗಡಣ ಬಲದೊಳು ಪಾಂಡುಪುತ್ರರ |
ಗಡಣವಿದಿರೊಳು ಮಾದ್ರಮಾಗಧಯಾದವಾದಿಗಳು ||
ನಡುವೆ ನೀನೋಲಗದೊಳೊಪ್ಪುವ |
ಕಡುವಿಲಾಸವ ಬಿಸುಟು ಕುರುಪತಿ |
ನುಡಿಯೆ ಜೀಯ ಹಸಾದವೆಂಬುದು ಕಷ್ಟ ನಿನಗೆಂದ || ೮ ||

1 ನಿದಾನ=ಕಾರಣ.

ಶೌರಿಯದೊಳಿವರಿಲ್ಲ ಕುಲದೊಳು |
ಸೂರಿಯನ ಸುತನೊಡನೆ ಹುಟ್ಟಿದ |
ವೀರರಗ್ಗದ ಪಾಂಡುತನಯರು ನಿನ್ನ ವೈಭವಕೆ ||
ಆರು ಸರಿಯೈ ಕರ್ಣ ನಡೆನಡೆ |
ಧಾರಿಣೀಪತಿಯಾಗಿ ನೀನಿರೆ |
ವೈರವಿತ್ತಂಡಕ್ಕೆ ಬಳಿಕಿಲ್ಲೆಂದನಸುರಾರಿ || ೯ ||

ಕೊರಳ ಸೆರೆ ಹಿಗ್ಗಿದುವು ದೃಗುಜಲ- |
ವುರವಣಿಸೆ ಕಡುನೊಂದನಕಟಾ |
ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ ||
ಹರಿಯ ಹಗೆ ಹೊಗೆದೋರದುರುಹದೆ |
ಬರಿದೆ ಹೋಹುದೆ ತನ್ನ ಜನನವ |
ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ || ೧೦ ||

ಕಾದಿ ಕೊಲುವೊಡೆ ಪಾಂಡುಸುತರು ಸ- |
ಹೋದರರು ಕೊಲಲಿಲ್ಲ ಕೊಲ್ಲದೆ |
ಕಾದೆನಾದೊಡೆ ಕೌರವಂಗವನಿಯಲಿ ಹೊಗಲಿಲ್ಲ ||
ಭೇದದೊಳು ಹೊಕ್ಕಿರಿದನೋ ಮಧು- |
ಸೂದನನು ತಾನಕಟಿನುತೆ ಚಿಂ- |
ತೋದಧಿಯೊಳದ್ದಂತೆ ಮೌನದೊಳಿರ್ದನಾ ಕರ್ಣ || ೧೧ ||

ಏನು ಹೇಳೈ ಕರ್ಣ ಚಿತ್ತ |
ಗ್ಲಾನಿಯಾವುದು ನಿನಗೆ ಕುಂತೀ |
ಸೂನುಗಳ ಬೆಸಗೈಸಿಕೊಳ್ವುದು ಸೇರದೇ ಮನಕೆ ||
ಹಾನಿಯಿಲ್ಲೆನ್ನಾಣೆ ನುಡಿ ದು- |
ಮ್ಮಾನವೇತಕೆ ಮರುಳುತನ ಬೇ- |
ಡಾನು ನಿನ್ನಪದೆಸೆಯ ಬಯಸುವನಲ್ಲ ಕೇಳೆಂದ || ೧೨ ||

ಮರುಳು ಮಾಧವ ಸಕಲ ರಾಜ್ಯದ |
ಸಿರಿಗೆ ಸೋಲುವನಲ್ಲ ಕೌಂತೇ- |
ಯರು ಸುಯೋಧನರೆನಗೆ ಬೆಸಗೈವಲ್ಲಿ ಮನವಿಲ್ಲ ||
ಹೊರೆದ ದಾತಾರಂಗೆ ರಿಪುಗಳ |
ಸಿರವನರಿದೊಪ್ಪಿಸುವೆನೆಂಬೀ |
ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ || ೧೩ ||

ಒಡನೆ ಹುಟ್ಟಿದರೆಂಬ ಕಥನವ- |
ನೆಡೆಗುಡದೆ ಬಣ್ಣಿಸಿದೆ ಪಾಂಡವ- |
ರಡಗು ಬಾಣಕೆ ಬಲಿಯೆನಿಪ್ಪೀ ಛಲವ ಮಾಣಿಸಿದೆ ||
ನುಡಿದು ಫಲವೇನಿನ್ನು ಕೌರವ- |
ರೊಡೆಯನಾದಂತಹೆನು ಬಾರೆನು |
ಪೊಡವಿಯೊಳು ನೀಂ ಹರಹಿಕೊಳು ನಿನ್ನವರ ಸಿಲಿಸೆಂದ || ೧೪ ||

ಹಲವು ಮಾತೇನಖಿಳಜನಕಿ- |
ನ್ನುಳಿವ ಸೊಗಸದು ಕೌರವೇಶ್ವರ |
ನೊಲವು ತಪ್ಪಿದ ಬಳಿಕ ಜಗದೊಳಗಾಪ್ತ ಜನವಿಲ್ಲ ||
ಸಲಹಿದನು ಮನ್ನಣೆಯೊಳೆನಗ- |
ಗ್ಗಳಿಕೆಯಲ್ಲದೆ ಹೀನವೃತ್ತಿಯ |
ಬಳಸಿ ನಡಿಸನು ಕೌರವೇಂದ್ರನನೆಂತು ಮರೆದಿಹೆನು || ೧೫ ||

ನೋಡಿ ದಣಿಯನು ನಿಚ್ಚಲುಚಿತವ |
ಮಾಡಿ ದಣಿಯನು ಬಿರುದ ಹೊಗಳಿಸಿ |
ಹಾಡಿ ದಣಿಯನು ಮಾನನಿಧಿಯನದೆಂತು ಮರೆದಪೆನು ||
ಕಾಡಲಾಗದು ಕೃಷ್ಣ ಖಾತಿಯ |
ಮಾಡಲಾಗದು ಬಂದೆನಾದೊಡೆ |
ರೂಢಿ[1] ಮೆಚ್ಚದು ಕೌರವನ ಹಗೆ ಹರಿಬವೆನಗೆಂದ || ೧೬ ||

1 ರೂಢಿ=ಭೂಮಿ; ಲೋಕ.

ವೀರಕೌರವರಾಯನೇ ದಾ- |
ತಾರನಾತನ ಹಗೆಯೆ ಹಗೆ ಕೈ- |
ವಾರವೇ ಕೈವಾರವಾದಂತಹೆನು ಕುರುನೃಪತಿ ||
ಶೌರಿ ಕೇಳ್ಕೈ ನಾಳೆ ಸಮರದ |
ಭಾರದೊಳು ತೋರುವೆನು ನಿಜಭುಜ |
ಶೌರಿಯದ ಸಂಪನ್ನತೆಯನಾ ಪಾಂಡುತನಯರೊಳು || ೧೭ ||

ಮಾರಿಗೌತಣವಾಯ್ತು ನಾಳಿನ |
ಭಾರತವು ಬಹುಜೀವಹರವೀ |
ಕೌರವನ ಋಣ ಹಿಂಗೆ ರಣದೊಳು ಸುಭಟಕೋಟಿಯನು ||
ತೀರಿಸಿಯೆ ಪತಿಯವಸರಕ್ಕೆ ಶ- |
ರೀರವನು ನೂಕುವೆನು ನಿನ್ನಯ |
ಧೀರರೈವರ ನೋಯಿಸೆನು ರಾಜೀವಸಖನಾಣೆ || ೧೮ ||

ಎನಲು ಕರ್ಣನ ದೃಢವ ಕಂಡನು |
ಮನದೊಳುತ್ಸಾಹಿಸಿದನಾದೊಡೆ- |
ಯನುಜರೈವರ ಹದನು ನಿನ್ನದು ಬಲುಹ ಮಾಡಿದೊಡೆ ||
ಮನಕೆ ಖತಿಯಹುದರುಹದಿರ್ದೊಡೆ- |
ಯೆನಗೆ ಗುಣವಿಲ್ಲೆಂಬ ಕಾರಣ- |
ವಿನಿತನಾನರುಹಿದೆನು ನೀಂ ಸುಖಿಯಾಗು ಹೋಗೆಂದ || ೧೯ ||

ಬೀಳುಕೊಂಡನು ಮನೆಗೆ ಬಂದು ವಿ- |
ಶಾಲಮತಿ ಚಿಂತಿಸಿದನಾ ಸಿರಿ- |
ಲೋಲ ಮಾಡಿದ ಮಂತ್ರ ಮನದೊಳು ನಟ್ಟು ಬೇರ್ವರಿಯೆ ||
ಕಾಳು ಮಾಡಿದನಕಟ ಕುರುಪತಿ |
ಬಾಳಲರಿಯದೆ ಕೆಟ್ಟನೀ ಗೋ- |
ಪಾಲ ಬರಿದೇ ಬಿಡನು ಜೀವವ ಕೊಳ್ಳದಿರನೆಂದ || ೨೦ ||

ವೀರರವಿಸುತನೊಂದುದಿನ ರವಿ- |
ವಾರದೊಳು ಪರಿತೋಷ ವಿಂಗೆ ಭಾ- |
ಗೀರಥೀತೀರದೊಳು ತಾತಂಗರ್ಘ್ಯವನು ಕೊಟ್ಟು ||
ಸೌರಮಂತ್ರವ ಜಪಿಸುತಿರಲಾ- |
ದಾರಿಯದ ಸುರತರುವ ಕುಂತೀ- |
ನಾರಿ ಕಾಣಲು ಬಂದಳಾತ್ಮಜನಿದ್ದ ನದಿಗಾಗಿ || ೨೧ ||

ಮಗನೆ ತಮ್ಮಂದಿರನು ಪಾಲಿಸು |
ವಿಗಡತನವನು ಮಾಣು ಪರರೋ- |
ಲಗವ ನೀಂ ಮಾಡುವುದೆ ನಿನಗಿತ್ತಂಡವನುಜರಲೇ ||
ಸೊಗಸು ನಾನೆಂದುದನು ಪಿಸುಣರ |
ಹಗೆನುಡಿಯ ಕೇಳದಿರು ಪಟ್ಟವ |
ಬಿಗಿಸಿಕೊಳು ಸಲಿಸೆನ್ನ ವಚನವನೆಂದಳಾ ಕುಂತಿ || ೨೨ ||

ತಾಯಹುದು ನಾಂ ಬಲ್ಲೆನಿದನಾ |
ಕಾಯಜನ ಪಿತನರುಹೆ ತಿಳಿದೆನು |
ರಾಯರಿತ್ತಂಡಕ್ಕೆ ಪಟ್ಟದ ಹಿರಿಯ ತಾನಹುದು ||
ರಾಯನೆನ್ನನು ನಚ್ಚಿ ಹೊರೆದನು |
ಸಾಯಲಳುಕುವೆನೇ ಸುಡೇತರ- |
ದೀಯವನಿಬಾಳಿಕೆ ಕೃತಘ್ನರಿಗಿಲ್ಲ ಗತಿಯೆಂದ || ೨೩ ||

ಇಂದು ನೀವರುಹಿದ ಬಳಿಕ ರವಿ- |
ನಂದನನೆ ಎಂದರಿದೆನಲ್ಲದೆ |
ಹಿಂದೆ ದುರ್ಯೋಧನನದಾವುದ ನೋಡಿ ಸಲಹಿದನು |
ಬಂದು ಪಾಂಡವರೊಡನೆ ಕೂಡಿದೊ- |
ಡಿಂದು ಬಹುದಪಕೀರ್ತಿ ನಿಮ್ಮಡಿ |
ಬಂದ ಕಾರ್ಯವ ಬೆಸಸಿ ಬೇಗದೊಳೆಂದನಾ ಕರ್ಣ || ೨೪ ||

ಆದೊಡೈವರು ಮಕ್ಕಳನು ತಲೆ- |
ಗಾದು ತೋರೈ ಕಂದ ನಿನಗೇ- |
ನೀ ದುರಾಗ್ರಹವೊಪ್ಪುವುದೆ ಕೌರವನ ಸೇವೆಯೊಳು ||
ಹೋದ ಬಾಣವ ಮರಳಿ ತೊಡದಿರು |
ಮಾದು ಕಳೆ ವೈರವನೆನಲ್ಕೆ ಹ- |
ಸಾದವೆಂದನು ಬೀಳುಕೊಂಡನು ಬಂದನರಮನೆಗೆ || ೨೫ ||

# ೧೬. ಬಾಷ್ಪಾಂಜಲಿ

[ರನ್ನನು ಕವಿರತ್ನತ್ರಯಗಳಲ್ಲಿ ಒಬ್ಬನು. ‘ಪೊನ್ನಂ ರನ್ನಂ ಕೂಡಿದೊಡಿನ್ನೀ ವಾಗ್ವಧುಗೆ ಭೂಷಣಂ ಪೆರತುಂಟೇ’ ಎಂದು ಮಧುರನು ಮನವಾರೆ ಆತನನ್ನು ಹೊಗಳಿರುವನು. ಜೈನಕವಿಗಳಿಗೆ ಅತಿಗೌರವಾಸ್ಪದರಾದ ಮಹಾಕವಿಗಳಲ್ಲಿ ಆತನೊಬ್ಬನಾದುದರಿಂದ ಆತನ ಅನಂತರದ ಕವಿಗಳು ಆತನ ಅಸದೃಶವಾದ ಶೈಲಿಯನ್ನು ಕೊಂಡಾಡಿರುವರು. ಪರಶುರಾಮಚರಿತೆ ಚಕ್ರೇಶ್ವರಚರಿತೆ ಅಜಿತತೀರ್ಥೇಶ್ವರಚರಿತೆ ಆತನ ಗ್ರಂಥ ರತ್ನತ್ರಯವು. ಇವುಗಳಲ್ಲಿ ಚಕ್ರೇಶ್ವರಚರಿತೆಯೇ ಗದಾಯುದ್ಧವೆಂದು ಪ್ರಸಿದ್ಧವಾಗಿರುವ ಸಾಹಸಭೀಮವಿಜಯವೆಂದು ಕೆಲವರು ಊಹಿಸುವರು. ಅಜಿತ ತೀರ್ಥೇಶ್ವರಪುರಾಣವು ಎರಡನೆಯ ತೀರ್ಥಂಕರರಾದ ಅಜಿನಾಥರ ಚರಿತೆ. ಇದು ಪುರಾಣತಿಲಕವೆಂದು ನುತವಾಗಿದೆ. ಕವಿಗೆ ತೈಲಪಚಕ್ರವರ್ತಿ ಕವಿಚಕ್ರವರ್ತಿಯೆಂಬ ಬಿರುದನ್ನಿತ್ತು ಆತನನ್ನು ಕೀರ್ತಿಗೆ ತಂದನು. ಆತನ ಕಾಲವು ೧೦ನೆಯ ಶತಮಾನದ ಅಂತ್ಯಭಾಗವೆಂದು ಗೊತ್ತಾಗಿದೆ.

ಗದಾಯುದ್ಧವು ಕನ್ನಡ ಸಾಹಿತ್ಯದಲ್ಲಿ ಒಂದು ಅಪೂರ್ವಗ್ರಂಥವು. ವೀರರಸದಲ್ಲಿ ಅದನ್ನು ಮಿಗಿಸುವ, ಇಲ್ಲವೆ, ಅದಕ್ಕೆ ಸಮಾನವಾದ ಕಾವ್ಯವು ಬೇರೆ ಇಲ್ಲ. ಆತನ ‘ಪದಸಾಮಗ್ರಿಯೂ ರಚನಾಶಕ್ತಿಯೂ ಬಂಧಗೌರವವೂ ಆಶ್ಚರ್ಯಾವಹವಾಗಿವೆ. ಪದ್ಯವನ್ನು ಆರಂಭಿಸಿದರೆ ಮಧ್ಯದಲ್ಲಿ ಆವ ತಡೆಯೂ ಇಲ್ಲದೆ ಕೊನೆಯವರೆಗೂ ಪ್ರವಾಹರೂಪವಾಗಿಯೂ ಹೃದಯಂಗಮವಾಗಿಯೂ ಪದಗಳು ಹೊರಡುತ್ತವೆ.’

ಸಾಹಸಭೀಮವಿಜಯವನ್ನು ತನ್ನ ಪೋಷಕನಾದ ತೈಲಪಚಕ್ರವರ್ತಿಯ ಪುತ್ರನೂ ಯುವರಾಜನೂ ಆದ ‘ಸತ್ಯಾಶ್ರಯ ಇರಿವ ಬೆಡಂಗ’ನ ಸಾಹಸ ವರ್ಣನೆಗಾಗಿ ರಚಿಸಿದನು. ಪಂಪನ ಕ್ರಮವನ್ನು ಅನುಸರಿಸಿ ಗ್ರಂಥಾಂತ್ಯದಲ್ಲಿ ಭೀಮನಿಗೆ ಪಟ್ಟಾಭಿಷೇಕವಾದಂತೆ ಕವಿಯು ವರ್ಣಿಸಿರುವನು. ಗದಾಯುದ್ಧದ ಕಥೆಯು ಪಂಪಭಾರತದ ಆ ಭಾಗದ ಕಥಾಕ್ರಮವನ್ನೂ ರಚನಾಕ್ರಮವನ್ನೂ ಹೋಲುತ್ತದೆ. ಇವೆರಡರಲ್ಲಿಯೂ ದುರ್ಯೋಧನನು ಸಾಹಸಧನನಾಗಿಯೂ ಉದಾತ್ತಗುಣದವನಾಗಿಯೂ ವರ್ಣಿತನಾಗಿರುವನು. ‘ಬಾಷ್ಪಾಂಜಲಿ’ ಗದಾಯುದ್ಧದ ಪಂಚಮಾಶ್ವಾಸದೊಳಗಿದೆ. ರಣರಂಗದಲ್ಲಿ ಕರ್ಣನ ಕಳೇಬರವನ್ನು ಕಂಡ ದುರ್ಯೋಧನನು ತನ್ನ ಜೀವದ ಗೆಳೆಯನಾದ ಕರ್ಣನಿಗಿತ್ತ ಬಾಷ್ಪಾಂಜಲಿ ಅದು.]

ಆನುಂ ದುಶ್ಶಾಸನನುಂ |
ನೀನುಂ ಮೂವರೆ ದಲಾತನುಂ ಕಳಿದ ಬಳಿ- ||
ಕ್ಕಾನುಂ ನೀನೆ ದಲೀಗಳ್ |
ನೀನುಂ ಮಗುಳ್ದೆತ್ತವೋದೆಯಂಗಾಧಿಪತೀ || ೧ ||

ನಿನ್ನ ಮಗಂ ವೃಷಸೇನಂ |
ತನ್ನ ಮಗಂ ಸತ್ತನಣ್ಮೆ ಲಕ್ಷಣನುಂ ನೀ- ||
ನೆನ್ನಂ ಸಂತೈಸುವುದಾಂ |
ನಿನ್ನಂ ಸಂತೈಸೆ ಬಂದೆನಂಗಾಧಿಪತೀ || ೨ ||

ಪಳಿಯಂ ಕೇಳ್ದೆನೊ ಮೆಣ್ನಡೆ- |
ವಳಿಯಂ ತಪ್ಪಿದೆನೊ ಕಾಣೆ ಕಣ್ಣಿಂದಂ ಕೂ- ||
ರ್ತರ್ಗಳಲ್ದಿವರಂ ಬಗೆದೆನೊ ಪ- |
ಜ್ಜಳಿದೆನೊ ಪೇಳ್ಕೊಡಿ ನಿನ್ನೊಳಂಗಾಧಿಪತೀ || ೩ ||

ಅರಿಯೆನಿದಂ ನಿನ್ನಿಂದಿನ |
ತೆರನಂ ನೀನೆನಗೆಯೇಕೆ ಮುಳಿದಿರ್ಪೆಯೊ ಮೇಣ್ ||
ಮರುಮಾತುಗುಡದೆ ರವಿಸುತ |
ಮರಹಿಂದಿರ್ದಪೆಯೊ ಮೇಣ್ಬಳಲ್ದಿರ್ದಪೆಯೋ || ೪ ||

ನಿನ್ನ ಕೆಳೆಯಂ ಸುಯೋಧನ- |
ನಂ ನೋಡದೆ ನುಡಿಯದಪ್ಪಿಕೊಳ್ಳದೆ ಬೆಸನೇ- ||
ನೆನ್ನದೆ ಜೀಯೆನ್ನದೆ ದೇ- |
ವೆನ್ನದೆಯೇಕುಸಿರದಿರ್ಪೆಯಂಗಾಧಿಪತೀ || ೫ ||

ಅನೃತಂ ಲೋಭಂ ಭಯಮೆಂ- |
ಎನಿತುಂ ನೀನಿರ್ದ ನಾಡೊಳಿರ್ಕುಮೆ ರವಿನಂ- ||
ದನ ನಿನ್ನ ಚಾಗಮಣ್ಮುಂ-[1] |
ಎನಿತಕ್ಕಂ ನೀನೆ ಮೊತ್ತಮೊದಲಿಗನಾದೈ || ೬ ||

ಆನರಿವೆಂ ಪೃಥೆಯರಿವಳ್ |
ದಾನವರಿಪುವರಿವನರ್ಕನರಿವಂ ದಿವ್ಯ- ||
ಜ್ಞಾನಿ ಸಹದೇವನರಿವಂ |
ನೀನಾರ್ಗೆಂದಾರುಮರಿಯರಂಗಾಧಿಪತೀ || ೭ ||

ಒಡವುಟ್ಟಿದನೆಂದರಿದೊಡೆ |
ಕುಡುಗುಂ ರಾಜ್ಯಮನೆ ಧರ್ಮತನಯಂ ನಿನಗಾಂ ||
ಕುಡಲಾರ್ತೆನಿಲ್ಲ ರಾಜ್ಯ- |
ಕ್ಕೊಡೆಯನನರಿವುತ್ತುಮಿರ್ದೆನಂಗಾಧಿಪತೀ || ೮ ||

---

1 ಅಣ್ಮು=ಪರಾಕ್ರಮ.

ನೀನುಳ್ಳೊಡುಂಟು ರಾಜ್ಯಂ |
ನೀನುಳ್ಳೊಡೆ ಪಟ್ಟಮುಂಟು ಬೆಳ್ಗೊಡೆಯುಂಟೈ ||
ನೀನುಳ್ಳೊಡುಂಟು ಪೀಳಿಗೆ |
ನೀನಿಲ್ಲದಿವೆಲ್ಲಮೊಳವೆ ಅಂಗಾಧಿಪತೀ || ೯ ||

ಇನಸುತ ಗಾಂಡಿವಿ ಸಂಮೋ- |
ಹನಾಸ್ತ್ರದಿಂದೆಚ್ಚು ನಿದ್ರೆಯಂ ಮಾಡಿದನಂ- ||
ದಿನ ಗೋಗ್ರಹಣದೊಳೀಗಳ್ |
ನಿನಗಿಂತೀ ದೀರ್ಘನಿದ್ರೆಯಂ ಮಾಡಿದನೇ || ೧೦ ||

ಹರಿ ಬೇಡೆ ಕವಚಮಂ ನೀ- |
ನಿರದಿತ್ತೈ ಕುಂತಿ ಬೇಡೆ ಬೆಗಡದೆ[1] ಕೊಟ್ಟೈ ||
ಪುರಿಗಣೆಯಂ[2] ನಿನಗೆಣೆ ಕಸ- |
ವರಗಲಿ[3] ಮೈಗಲಿಯುಮಾವನಂಗಾಧಿಪತೀ || ೧೧ ||

ನಯನದೊಳಮೆರ್ದೆಯೊಳಂ ನಿ- |
ನ್ನಯ ರೂಪಿರ್ದಪುದು ನಿನ್ನ ಮಾತಿರ್ದಪುದೆ- ||
ನ್ನಯ ಕಿವಿಯೊಳಗಿನಸಂದನ |
ವಿಯೋಗಮೆಂತಾದುದರಿಯೆನಂಗಾಧಿಪತೀ || ೧೨ ||

ನಿನ್ನಂ ಕೊಂದ ಕಿರೀಟಿಯು- |
ಮೆನ್ನನುಜನನಿಕ್ಕಿ ಕೊಂದ ಭೀಮನುಮೊಳನಾ- ||
ನಿನ್ನುಮೊಳೆಂ ಗಡ ಸಾಲದೆ |
ನಿನ್ನಯ ಕೂರ್ಮೆ[4]ಗಮದೆನ್ನ ಸೌಧರ್ಮಿಕೆಗಂ || ೧೩ ||

ಪರಶುಧರಂ ಚಕ್ರಧರಂ |
ಸುರಪತಿ ಭೂಕಾಂತೆ ಕೊಂತಿಯೆಂದೀ ಪೇಳ್ದ- ||
ಯ್ವರೆ ಕೂಡಿ ನಿನ್ನ ಕೊಂದರ್ |
ನರನೊರ್ವನೆ ಕೊಂದನಲ್ಲನಂಗಾಧಿಪತೀ || ೧೪ ||

1 ಬೆಗಡು = ಹೆದರು. 2 ಪುರಿಗಣೆ = ದಿವ್ಯಾಸ್ತ್ರ.
3 ಕಸವರಗಲಿ = ದಾನಶೂರ. 4 ಕೂರ್ಮೆ = ಪ್ರೀತಿ.

ಇಂದಾನಾದೆಂ ಮೇಣೆನ |
ನಂದನ ಕೇಳ್ ಪಾಂಡುತನಯರಾದರ್ ನಿನ್ನಂ ||
ಕೊಂದುಂ ದುಶ್ಶಾಸನನಂ |
ಕೊಂದುಂ ಬರ್ದುಕುವನದಾವನಂಗಾಧಿಪತೀ || ೧೫ ||

ಇನಸುತನಿರವಂ ದುಶ್ಶಾ- |
ಸನನಿರವಂ ಕಂಡುಮಿನ್ನುಮೆನ್ನಸುವಿದು ನೆ- ||
ಟ್ಟನೆ ಪೋದುದಿಲ್ಲ ಕಲ್ಲೆರ್ದೆ- |
ತನದಿಂದೆನ್ನಂತು ಬರ್ದನಾ[1]ವನುಮೊಳನೇ || ೧೬ ||

ಸೂನುಗಳಳಿವಂ ಪ್ರಿಯಮಿ- |
ತ್ರಾನುಜರಳಿವಂ ವಿಧಾತ್ರ ನೀಂ ಕಾಣಿಸಿಯು- ||
ನ್ನೇನಂ ಕಾಣಿಸಲಿರ್ದಪೆ |
ನೀನೆನ್ನಂ ಪಾಪಕರ್ಮನಂ ನಿರ್ಗುಣನಂ || ೧೭ ||

ಕಳೆಯಂಗಾಯ್ತು ಸುಮೋಕ್ಷಮಾಗದೆನಗಂ ಬಾಷ್ಪಾಂಬುಮೋಕ್ಷಂ ಧರಾ- |
ತಳಮಂ ಕೊಟ್ಟನಿವಂ ಜಳಾಂಜಳಿಯುಮಂ ನಾಂ ಕೊಟ್ಟೆನಿಲ್ಲನ್ಯಮಂ- ||
ಡಳಮಂ ಸುಟ್ಟನಿವಂ ಪ್ರತಾಪಶಿಖಿಯಿಂದಾನೀತನಂ ಸತ್ಕ್ರಿಯಾ- |
ನಳನಿಂ ಸುಟ್ಟೆನುಮಿಲ್ಲ ಮತ್ಪ್ರಿಯತಮಂ ಕರ್ಣಂಗಿದೇಂ ಕೂರ್ತೆನೋ ||೧೮||

ದರಹಸಿತವದನ ಸುರಕುಂ- |
ಜರಗಮನನ ಕನಕಪರ್ವತಪ್ರತಿಮದಿನೇ- ||
ಶ್ವರಸುತನ ರೂಪು ಚಿತ್ರಂ |
ಬರೆದಂತಿರ್ದಪುದು ಚಿತ್ತಭಿತ್ತಿಯೊಳೆನ್ನಾ || ೧೯ ||

ಗುರು ದೀಕ್ಷಾವಿಧಿಗಳ್ಗೆ ಮಂತ್ರಿ ಹಿತಕಾರ್ಯಾಳೋಚನಕ್ಕಾಳ್ದನು- |
ರ್ವರೆಯಂ ಕಾವ ಗುಣಕ್ಕೆ ನರ್ಮಸಚಿವಂ ಕ್ರೀಡಾರಸಕ್ಕಾನೆಯಾಳ್ ||
ಗುರುಭಾರಕ್ಕಿರಿವಾಳ್ ರಣಕ್ಕೆ ತುಳಿಲಾಳ್ಕ[2]ಟ್ಟಾಯದೊಳ್ ಮೇಳದಾಳ್ |
ಪರಿಹಾಸಕ್ಕೆನಿಸಿರ್ದನೆಂತು ಮರೆವಂ ದುರ್ಯೋಧನಂ ಕರ್ಣನಂ || ೨೦ ||

---

1 ಬರ್ದನು=ಪ್ರೌಢನು.    2 ತುಳಿಲಾಳ=ಶೂರ.

# ೧೭. ಪಶ್ಚಾತ್ತಾಪ

[ಕುಮಾರವ್ಯಾಸನ ಕರ್ಣಾಟಕಭಾರತವು ಪ್ರಥಮದ ಹತ್ತು ಪರ್ವಗಳನ್ನು ಮಾತ್ರ ಒಳಕೊಂಡಿರುವುದರಿಂದ ಅದಕ್ಕೆ ದಶಪರ್ವಭಾರತವೆಂಬ ಹೆಸರು ರೂಢವಾಯಿತು. ವಿಜಯನಗರದ ಚಕ್ರವರ್ತಿಯಾದ ಶ್ರೀಕೃಷ್ಣರಾಯನ ಆಜ್ಞೆಯ ಮೇರೆ ತಿಮ್ಮಣ್ಣನೆಂಬ ಕವಿ ಉಳಿದ ಕಥಾಭಾಗವನ್ನು ಶಾಂತಿಪರ್ವಮೊದಲ್ಗೊಂಡು ಬರೆದನು. ಈ ಕವಿ ೧೬ನೆಯ ಶತಮಾನದ ಆದಿಭಾಗದಲ್ಲಿದ್ದನು. 'ಸುರನದಿಯು ಯಮುನಾತರಂಗಿಣಿ ಬೆರಸಿ ಹರಿವಂದದಲಿ ಕವಿಕುಂಜರಕುಮಾರವ್ಯಾಸನುರುವಾಗ್ಲಹರಿಯೊಡನೆ ಸರಿಯೆನಿಸಿ' ಈ ಕವಿತೆಯನ್ನು ಮಾಡಿದನು ಈ ಭಾರತಕ್ಕೆ ಕೃಷ್ಣರಾಯಭಾರತವೆಂಬ ನಾಮಾಂಕಿತವಿದೆ. 'ಪಶ್ಚಾತ್ತಾಪವು' ಶಾಂತಿಪರ್ವದ ಎರಡನೆಯ ಸಂಧಿಯಲ್ಲಿ ದೊರಕುವುದು.]

ಆದಡಾಲಿಸು ನೃಪತಿ ಕೌರವ- |
ರಾದಿಯಾದರಿಭೂಪರನು ಕುರು- |
ಮೇದಿನೀಸ್ಥಳದಲ್ಲಿ ತಾ ಹದಿನೆಂಟು ದಿನದೊಳಗೆ ||
ಕಾದಿ ಕೊಂದಿಭಪುರಿಯ ಪಟ್ಟದೊ- |
ಳಾ ದಯಾನಿಧಿ ಧರ್ಮಪುತ್ರನು |
ಸೋದರರು ಸಹಿತಿರುತ ನೆನೆದನು ಸಕಲಬಂಧುಗಳ || ೧ ||

ಪುರುಷ ಕಾಣದ ಸತಿಯ ಚೆಲುವಿಕೆ |
ಅರಿಮಹೀಶ್ವರರರಿಯದವನೀ- |
ಶ್ವರನ ವಿಕ್ರಮ ಬಂಧುಸಂತತಿ ಬಂದು ಕಂಡೊಡನೆ ||
ಹಿರಿದು ಸಂತೋಷಿಸದ ಸಂಪದ |
ಗುರುಹಿರಿಯರಹುದೆನ್ನದವನಾ- |
ಚರಣೆ ನಿಷ್ಫಲವೆಂದು ಧರ್ಮಜ ನೆನೆದು ದುಃಖಿಸಿದಾ || ೨ ||

ಕಳೆದ ಕೈದುಗಳೊರೆಗಳೋ ಪರಿ- |
ಮಳಗಳಿಲ್ಲದ ಪೂಗಳೋ ಗತ- |
ಜಲತಟಾಕಾಬ್ಜಗಳೊ ಮೌಕ್ತಿಕರಹಿತಶುಕ್ತಿಗಳೋ ||
ವಿಲಸದರ್ಥವಿಹೀನಶಬ್ದಂ- |
ಗಳೊ ಸುಯೋಧನಕರ್ಣಮುಖ್ಯರ |
ನಿಳಯಗಳೊಯೆನುತರಸ ಸುಯಿದನು ಬಂಧುಗಳ ನೆನೆದು || ೩ ||

ಕೊಡುವ ದಾಸಿಯ ಕೊಂದು ಮೂರ್ಖನ- |
ನಡಸಿ[1] ಬೇಡುವರುಂಟೆ ಲೋಕವ |
ಬಿಡದೆ ಸಲಹುವ ನೃಪನನಿರಿದನ ಸೇವಿಸಿದರುಂಟೆ ||
ಕಡುಮುಳಿದು ಬಾಂಧವರನೆಲ್ಲರ |
ಕೆಡಹಿದಾತನ ಕೂಡೆ ಸಲೆ ಕೊಳು- |
ಕೊಡೆ[2]ಯ ಬಯಸುವರುಂಟೆಯೆನುತವನೀಶ ಚಿಂತಿಸಿದಾ || ೫ ||

ಹಿರಿಯ ಧೃತರಾಷ್ಟ್ರನು ಮಹೀತಳ- |
ದರಸುತನವನು ಮಾಡೆ ಸೇವಾ- |
ನಿರತನಾದನು ನಮಗೆ ಪಿತಸಹ ಪಾಂಡುಭೂವರನು ||
ದುರುಳರಾವ್ ಧೃತರಾಷ್ಟ್ರನಿರುತಿರೆ |
ಧರೆಯ ಭಾಗಕೆ ಕಾಡಿ ತತ್ತನು- |
ಜರನು ಕೊಲುವುದಿದಾವ ಧರ್ಮವೆನುತ್ತ ಚಿಂತಿಸಿದಾ || ೬ ||

ಶಿವಶಿವಾ ದತ್ತಾಪಹಾರದ |
ತವಕದಲಿ ನಿಜ ಬಂಧುವರ್ಗವ |
ಸವರಿ ಸೆಳೆದೆವು ಹುಟ್ಟುಕುರುಡನ ಕೈಯ ಕೋಲುಗಳ ||
ಅವನಿಯೊಳಗೆನ್ನವೊಲು ಕಡುಪಾ- |
ಪವನು ಮಾಡಿದರುಂಟೆ ಶಶಿಕುಲ- |
ದವರೊಳಗೆ ಮುನ್ನೆನುತ ಮರುಗಿದನಂದು ಯಮಸೂನು || ೭ ||

ನಾಯಬಾರದ ತರದಲಾ ಗಾಂ- |
ಗೇಯಗಿತ್ತನು ವರವ ಶಂತನು |
ಸಾಯಲಿತ್ತೆನು ವರವನಾತಗೆ ಪಿತೃವರವ ಮುರಿದು ||
ರಾಯತನ ಧೃತರಾಷ್ಟ್ರಗಿರಲ- |
ನ್ಯಾಯದಲಿ ವರ್ತಿಸಿದೆನಕಟಕ- |
ಟೀಯವಸ್ಥೆಯ ಮಾಡಿ ಕೆಡಿಸಿದೆನಮಲಶಶಿಕುಲವ || ೮ ||

---

1 ಅಡಸು = ಕೂಡು 2 ಕೊಳುಕೊಡೆ = ಬಾಂಧವ್ಯ.

ಗುರುವರನ ಕಲಶಜನ ಕೊಂದೆವು |
ಗುರುಹನನ ಸದ್ಬ್ರಹ್ಮವಧೆಯೆಂ- |
ಬೆರಡು ಸಿದ್ಧಿಸಿತೆಮಗೆ ಮೂಜಗವರಿಯಲಿನ್ನೇನು ||
ಹಿರಿಯ ಧೃತರಾಷ್ಟ್ರಂಗೆ ಸತಿ ಮಹಿ- |
ಗುರವಣಿಸಿ ಗುರುದಾರಗಮನವ |
ವಿರಚಿಸಿದೆವಂಜದೆ ಮಹಾಪಾತಕಿಗಳಾವೆಂದಾ || ೮ ||

ಪಡೆದ ತಾಯ್ ಹಿರಿಯಯ್ಯನುದರದೊ- |
ಳಡಸಿದೆವು ಪ್ರತಾಪವಹ್ನಿಯ |
ಕಡುಹ ತೋರಿದೆವಖಿಲಬಂಧುನೃಪಾಂಗನೆಯರಿಂದ ||
ಬಿಡದಕೀರ್ತಿಯ ಪಾಟಿಸಿದೆವೆಂ- |
ಪಡಿಗಡಿಗೆ ಯಮಸೂನು ಶೋಕದ |
ಕಡಲೊಳಾಳುತ್ತೇಳುತಿರ್ದನು ನೃಪತಿ ಕೇಳೆಂದಾ || ೯ ||

ಆತನನುತಾಪವನು ವಿಜ್ಞಾ- |
ನಾತಿಶಯದಿಂದರಿತು ಮುನಿಸಂ- |
ಘಾತ ಗಜನಗರಕ್ಕೆ ನಡೆತರಲೆದ್ದನಿದಿರಾಗಿ ||
ಪ್ರೀತಿಯಿಂದಭಿವಂದಿಸಿದನುರು |
ಶಾತಕುಂಭಾ[1]ಸನದೊಳಿರಿಸಿ ಮ- |
ಹಾತಪಸ್ವಿಗಳೆಲ್ಲರನು ಯಮಸೂನುವರ್ಚಿಸಿದಾ || ೧೦ ||

ಛೇದಿಸಿದೆವಣ್ಣನ ಶಿರವ ದಾ- |
ಯಾದರನು ಸಂಹರಿಸಿ ಗುರುಗಳ |
ಭೇದದಿಂದಿರಿದಾ ಪಿತಾಮಹಗಳಿವ ಮಾಡಿದೆವು ||
ಈ ದುರಾಗ್ರಹಚಿತ್ತನಿಗೆ ಪಾ- |
ಪೋದಯಗಳೇನರಿದೆ ದೋಷ- |
ಚ್ಛೇದಕರವಹ ತಪವ ಮಾಡುವುದೆನ್ನ ಮತವೆಂದಾ || ೧೧ ||

1 ಶಾತಕುಂಭ=ಸುವರ್ಣ.

ಹಾ ಸುಡಿಯದಿರು ಧರ್ಮನಂದನ |
ಹಾನಿಯೇನಿದಕೀಗ ಕೃಷ್ಣನು |
ತಾನೆ ನಿನಗೊಲಿದಿತ್ತ ರಾಜ್ಯವನೊಲ್ಲೆನೆನಬಹುದೇ ||
ಮೌನದಲಿ ತಪಗಳಲಿ ಯೋಗ- |
ಧ್ಯಾನದಲಿ ಸಂಯಮಿಗಳರಸುವ- |
ಹೀನತಲ್ಪನೆ[1] ನಿನಗೆಯೊಲಿದಿರೆ ತಪಗಳಿನ್ನೇಕೆ || ೧೨ ||

ಕೇಳು ಧರ್ಮಜ ಕೃಷ್ಣರಾಯನು |
ಹೇಳಿ ಮಾಡಿಸುವೊಡೆಯ ನೀನವ- |
ನೂಳಿಗದಲಿ ನಿಮಿತ್ತಮಾತ್ರ ಸ್ವತಂತ್ರ ನೀನಲ್ಲ ||
ಕಾಳಗದೊಳೀ ಜ್ಞಾತಿಬಂಧುಜ- |
ನಾಳಿಯನು ಗುರುಕರ್ಣಮುಖ್ಯರ |
ಸೀಳಿಸಿದನಾ ಕೃಷ್ಣನೆಂದರು ಸಕಲಮುನಿವರರು || ೧೩ ||

ಬಂದನಾ ಸಮಯದಲಿ ದೇವಮು- |
ಕುಂದನಾ ಗಜಪುರಿಗೆ ಧರ್ಮಜ- |
ನಂದು ಮುನಿಗಳು ಸಹಿತ ಕೃಷ್ಣಗೆ ನಮಿಸೆ ಭಕ್ತಿಯಲಿ ||
ತಂದ ಮಧುಪರ್ಕಾದಿಗಳನರ- |
ವಿಂದನಾಭನು ಕೈಕೊಳುತ ಯಮ- |
ನಂದನನ ಮಾನಸದ ಖೇದವ ಬಿಡಿಸಿ ತಿಳುಹಿದನು || ೧೪ ||

ಎಲೆ ಯುಧಿಷ್ಠಿರ ಹೋಗು ಭೀಷ್ಮನ |
ಬಳಿಗೆ ಧರ್ಮರಹಸ್ಯವೆಲ್ಲವ |
ತಿಳುಹುವನು ನಿನಗೆಂದು ಕೃಷ್ಣನು ಸಕಲಮುನಿವರರು ||
ಒಲಿದು ಯಮನಂದನಗೆ ಪೇಳಲು |
ನಳಿನನಾಭಗೆ ಋಷಿಗಳಿಗೆ ನೃಪ- |
ಕುಲಲಲಾಮನು ನಮಿಸಿ ಬಿನ್ನೈಸಿದನು ಖೇದದಲಿ || ೧೫ ||

---

1 ಅಹೀನತಲ್ಪನು=ಶೇಷಶಾಯಿ.

ಜಾಣತನದಲಿ ಸಾಯಬೇಕೆಂ- |
ದಾಣೆಯಿಟ್ಟೊಡಬಡಿಸಿ ಸಮರ- |
ಕ್ಷೋಣಿಯಲಿ ಶರತಲ್ಪದಲಿ ಕೆಡಹಿದೆವು ಭೀಷ್ಮನನು ||
ಊಣೆಯವ ನಾ ಹೊತ್ತೆನರ್ಧ- |
ಪ್ರಾಣದಲಿ ನೆರೆ ನೋವ ಭೀಷ್ಮನ |
ಕಾಣಹೋಹೆನದೆಂತೆನುತ ಮರುಗಿದನು ಯಮಸೂನು || ೧೬ ||

ಎನಲು ಹರಿಯಿಂತೆಂದನಾ ಭೀ- |
ಷ್ಮನಿಗೆ ನೋವಿಲ್ಲರಸ ಕೇಳಾ- |
ತನು ವಸುಗಳೊಳಗೊಬ್ಬನವತರಿಸಿದನು ಧಾತ್ರಿಯಲಿ ||
ಮನುಜಮಾತ್ರನೆ ಪರಮವೈಷ್ಣವ |
ಮುನಿಸು ಹುಟ್ಟದು ನಿನ್ನ ಮೇಲಾ- |
ತನಿಗೆ ಹೋಗುವವೇಳೆನುತ ಕಳುಹಿದನು ಮುನಿವರರ || ೧೭ ||

# ೧೮. ಬಾಲಲೀಲೆ

[ಜಗನ್ನಾಥವಿಜಯವು ಕರ್ಣಾಟಕಸಾಹಿತ್ಯದ ಶ್ರೇಷ್ಠ ಗ್ರಂಥಗಳಲ್ಲಿ ಒಂದು. ಅದನ್ನು ರುದ್ರಭಟ್ಟನೆಂಬ ಒಬ್ಬ ಬ್ರಾಹ್ಮಣಕವಿ ಹೊಯಿಸಳ ಚಕ್ರವರ್ತಿ ವೀರಬಲ್ಲಾಳನ ಕಾಲದಲ್ಲಿ ರಚಿಸಿದನು. ಆತನ ಕಾಲವು ೧೨ನೆಯ ಶತಮಾನದ ಅಂತ್ಯಭಾಗವು. ಈತನು ಜಗನ್ನಾಥವಿಜಯದಲ್ಲಿ ಜೈನ ಕಾವ್ಯಸರಣಿಯನ್ನನುಸರಿಸಿ ಜೈನ ಕವಿಗಳಷ್ಟೇ ಗೌರವವನ್ನು ಸಂಪಾದಿಸಿದನು. ಸೂಕ್ತಿಸುಧಾರ್ಣವ ಕಾವ್ಯಸಾರಗಳಲ್ಲಿ ಈ ಗ್ರಂಥದಿಂದ ಹಲವು ಪದ್ಯಗಳು ಉದ್ಧೃತವಾಗಿವೆ. 'ಬಾಲಲೀಲೆ' ಆ ಕಾವ್ಯದ ತೃತೀಯಾಶ್ವಾಸದಲ್ಲಿದೆ.]

ಉದರಮೆ ತೊಟ್ಟಿಲಾಗೆ ಭುವನತ್ರಯಮಂ ನೆರೆ ತಾಳ್ದ ದೇಹನ- |
ಗ್ಗದ ಕೃತಪುಣ್ಯಪಾಪಫಲಮಂ ಸಲೆ ತೂಗುವ ಕರ್ಮಸಾಕ್ಷಿಯಂ ||
ಪದುಳದೆ ತೊಟ್ಟಿಲೊಳ್ ಪಡಿಸಿ[1] ತೂಗಿದರಚ್ಯುತ ಜೋ ಮಹಾತ್ಮ ಜೋ |
ಸದಮಲಬೋಧ ಜೋ ಪರಮ ಜೋ ಹರಿ ಜೋಯೆನುತುಂ ಲತಾಂಗಿಯರ್ || ೧ ||

ತನ್ನಧಟಿಂದೆ ಮಾಣದೆ ಗೃಹಾಂಗಣಮಂ ಪೊರಮಟ್ಟು ಪೋಪನಂ |
ಬೆನ್ನನೆ ಪೋಗಿಪೋಗಿ ಪಿಡಿತಂದೆನಸುಂ ಜಡಿದೊಮ್ಮೆಗೋಡಿ ದಾ- ||
ಮಂ ನಡುವಂ ತೊಡರ್ಚಿ ದೃಢವಾಗಲುಲೂಖಲ[2]ದಲ್ಲಿ ಕಟ್ಟಿ ಪೋ- |
ಗಿನ್ನೆಲೆ ಪೋಗಲಾರ್ಪೊಡೆಲೆ ಚಂಚಲಚೇಷ್ಟಿತ ನೋಳ್ಪೆನೆಂಬುದುಂ || ೨ ||

ಪಸಿಮಿರುಗಲ್ ಮುಗುಳ್ನಗೆನಗುತ್ತೊರಲಂ ತೆಗೆವುತ್ತಲೊಯ್ಯನೊ- |
ಯ್ಯನೆ ಮುಳಿದಂಬಿಕಾಮುಖಮನೀಕ್ಷಿಸುತುಂ ನಡೆಗೊಂಡಿರಲ್ ಮಹಾ- ||
ರ್ಜುನಕುಜದಲ್ಲಿ ಸಿಕ್ಕಿದೊರಲಂ ತೆಗೆಯಲ್ಕನುಗೈದೊಡಾ ಯಮಾ- |
ರ್ಜುನ[3]ತರು ಕಿಳ್ತು ಬೇರ್ವೆರಸುಬಿದ್ದಿರೆ ಮಧ್ಯದೊಳಿರ್ದನಚ್ಯುತಂ || ೩ ||

ಮಿಯದಾಶಾವಧಿಯಾಗಿ ಪೆರ್ಚಿ ಬೆಳೆದಿರ್ದ ಮತ್ತಿಯಂ ಕೃಷ್ಣನ- |
ಕ್ಷಿಯ ಕೂನಾಟದೆ ಕಿಳ್ತಮಾನುಷಚರಿತ್ರಂನೋಳ್ಪ ಗೋಪಾಲರೊಳ್ ||
ಭಯಮಂ ಮಾಡದೆ ಮುದ್ದಿನಾಟದಧಟೆಂಬಂತಾಯ್ತು ಯುಕ್ತಂ ಜಗ- |
ತ್ರಯರಕ್ಷಾಪ್ರಿಯನಪ್ಪ ಕೃಷ್ಣನ ಚರಿತ್ರಂ ಭೀತಿಯಂ ಮಾಳ್ಕುಮೇ || ೪ ||

---

1 ಪಡಿಸು=ಮಲಗಿಸು. 2 ಉಲೂಖಲ=ಒರಲು.
3 ಯಮಾರ್ಜುನ=ಜೋಡುಮತ್ತಿಮರ.

ಪರಮಸುಖಾರ್ದ್ರಲೋಚನದಿನೀಕ್ಷಿಸಿ ನಂದನನಂ ಸರೋರುಹೋ- |
ದರನನಿದಾರ ಮಾಣಿಕವಿದಾರ ನಿಧಾನವಿದಾರ ಮುದ್ದಿದಾ- ||
ರರಸನಿದಾರ ಬಲ್ಲಹನಿದಾರ ಕವೀಂದ್ರನಿದಾರ ಸಿಂಹಮೆಂ- |
ದಿರದಮರ್ದಪ್ಪಿದಳ್ ಪದಪಿನಿಂ ಮೊಲೆವಾಲ್ತೊರೆದೆಚ್ಚು ಪಾಯ್ಸಿಸಂ || ೫ ||

ಎನಿತೊಂದು ಪದಪು ಮೋಹಂ |
ವನಜಾಕ್ಷನೊಳನಿತು ಪದಪು ಮೋಹಂ ಬಳ[1]ನೊಳ್ ||
ತನಗಾಗೆ ನಂದವಧು ತ- |
ತ್ತನಯದ್ವಯಕೇಳಿಯಿಂದೆ ಸುಖಮಂ ಪಡೆದಳ್ || ೬ ||

ಒಡನೊಡನಾಡಿಗಳ್ ಗಡಣದಿಂ ಬರೆ ಗೆಜ್ಜೆಯ ನುಣ್ಣರಂ ಪೊದ- |
ಳ್ದುಡಿವಣಿಯಿಂಚರಂ ನೆಗಳೆ ಕಣ್ಮಲರ್ಗಳ್ ಪೊಳೆದಾಡೆ ಧೂಳಿ ಮೆ- ||
ಯ್ಗಡರ್ದಿರೆ ಮುಗ್ಧಜಲ್ಪನಮೊಡಂಬಡೆ ರಂಜಿಸಿ ತಾಯ ದಿಟ್ಟಿ ತ- |
ವ್ಮೊಡನೊಡನೆತ್ತಲುಂ ಪರಿವಿನಂ ಪರಿದಾಡಿದರಾ ಬಳಾಚ್ಯುತರ್ || ೭ ||

[ನೆನೆಯದೆ] ಗೋಪಿ ಪಾಲ್ಗಡೆವುತುಂ ಮನೆವಾರ್ತೆಗೆ ಪೋಗೆ ಗೆಜ್ಜೆಯಿಂ |
ದನಿ ನಸು ಪೊಣ್ಮದಂತು ಪರಿತಂದೆಡಗೈಯೊಳೆ ತೋಡಿ ಬೆಣ್ಣೆಯಂ ||
ತಿನುತಿರೆ ಗೋಪಿ ಕಂಡೆಲೆಲೆ ಕಳ್ಳತನಂಗಳನಣ್ಣ ಕಂಡೆವಾ- |
ವೆನೆ ಕಡೆವಾಯ ಬೆಣ್ಣೆವೆರಸೊಯ್ಯನೆ ಪಿಂಗುವ ಕೃಷ್ಣನೊಪ್ಪಿದಂ || ೮ ||

ಶಕಟವಿಮರ್ದಿ ನೀಂ ಮುಸಲಿ[2] ಬಾರದ ಮುನ್ನಮೆ ನಮ್ಮ ಹೇಮಘಂ- |
ಟಿಕೆ ಘಣಿಲೆಂಬ ನಂದಿನಿಯ ಪಾಲಿದೆ ನೀಂ ಕುಡಿಯಲ್ಕೆ ನಿನ್ನ ಚೆಂ- ||
ಡಿಕೆ ಬಳೆದಪ್ಪುದೆಂದಬಲೆ ನಂಬಿಸೆ ಪಾಲ್ಗುಡಿದೀಗಳಂಬ ಚೆಂ- |
ಡಿಕೆಯೆನಿತುದ್ದಮಾದುದೆನುತುಂ ಬೆಸಗೊಳ್ವ ಮುಕುಂದನೊಪ್ಪಿದಂ || ೯ ||

ಚಾರಿಮೆಟ್ಟುವ ಭಂಗಿ ದೋರ್ವಲನಂ ಮನಂಗೊಳೆ ಮಂಜುಮಂ- |
ಜೀರಕಂಕಣಕಿಂಕಿಣೀರುಚಿ ಪೊಣ್ಮೆ ವಕ್ರಿತಕಂಧರಂ ||
ಸ್ಮೇರವಕ್ತ್ರಸರೋಜನುಂ ಲಲಿತಾಯತೇಕ್ಷಣನಾಗಿ ಸಂ- |
ಸಾರನಾಟಕಸೂತ್ರಧಾರಿ ಮುರಾರಿ ಕೈಪರೆಗಾಡಿದಂ || ೧೦ ||

---

1 ಬಳ = ಬಲರಾಮ.  2 ಮುಸಲಿ = ಬಲರಾಮ.

ನೀರಜೋತ್ಪಲವರ್ಣನಾಡಿದನಾಡಿದಂ ಕಮಲೇಕ್ಷಣಂ |
ಚಾರುಹಾಸವಿಲಾಸನಾಡಿದನಾಡಿದಂ ಸುಭಗಂ ಶುಭಾ- ||
ಕಾರನಾಡಿದನೆಂದು ಗೋಪಿಯರಾಡಿಸುತ್ತುಮಿರಲ್ಕೆ ಸಂ- |
ಸಾರನಾಟಕಸೂತ್ರಧಾರಿ ಮುರಾರಿ ಕೈಪರೆಗಾಡಿದಂ || ೧೧ ||

ಕ್ಷೀರಲಂಪಟನಾಡಿದಂ ನವನೀತಚೋರಕನಾಡಿದಂ |
ದಾರಕ[1]ವ್ರಜಮಲ್ಲನಾಡಿದನಾಡಿದಂ ಹರಿ ಗೋಕುಲಾ- ||
ಧಾರನಾಡಿದನೆಂದು ಗೋಪಿಯರಾಡಿಸುತ್ತುಮಿರಲ್ಕೆ ಸಂ- |
ಸಾರನಾಟಕಸೂತ್ರಧಾರಿ ಮುರಾರಿ ಕೈಪರೆಗಾಡಿದಂ || ೧೨ ||

ದಾರುಣಾಕೃತಿಪೂತನಾಂತಕನಾಡಿದಂ ಶಕಟಾದಿಸಂ- |
ಹಾರನಾಡಿದನಾಡಿದಂ ಯಮಳಾರ್ಜುನದ್ರುಮಘಾತಿಯೆಂ- ||
ಬೀ ರವಂ ನೆಗಳಲ್ಕೆ ಗೋಪಿಯರಾಡಿಸುತ್ತುಮಿರಲ್ಕೆ ಸಂ- |
ಸಾರನಾಟಕಸೂತ್ರಧಾರಿ ಮುರಾರಿ ಕೈಪರೆಗಾಡಿದಂ || ೧೩ ||

ವೀರದೈತ್ಯರನಿಕ್ಕಲಾಗಿಯೆ ಪುಟ್ಟಿದಂ ಹರಿಯೆಂದು ಕೈ- |
ವಾರದಿಂದವೆ ಮಾತನಾಡೆ ವಿರೋಧಿಗಳ್ ಯಮಲೋಕಮಂ ||
ಸಾರಲಾಡೆ ಯಶೋದೆ ರಾಗರಸಾಬ್ಧಿಯೊಳ್ ತುಳುಕಾಡೆ ಸಂ- |
ಸಾರನಾಟಕಸೂತ್ರಧಾರಿ ಮುರಾರಿ ಕೈಪರೆಗಾಡಿದಂ || ೧೪ ||

ಆನಂದಮಾಗಿ ಸುಖಿಲ- |
ಕ್ಷ್ಮೀನಿಲಯಂ ಸಕಲಸಾರಸರ್ವಸ್ವಮೆನಿ- |
ಪ್ಪಾ ನೀರಜನೇತ್ರನ ಲೀ- |
ಲಾನುಷ್ಠಿತಬಾಲಕೇಳಿ ಬಣ್ಣಿಪರಳವೇ || ೧೫ ||

ವನಜಜ ಬನ್ನಿಮಿತ್ತಮಿರಿ ಕುಳ್ಳಿರಿಮುನ್ನತ ಪೀಠದೊಳ್ ಪದಾ- |
ವನತಿಯಿನೇಳ್ ಮಹೇಂದ್ರ ದಿವಿಜರ್ ಪುಗೆ ಬಾರಿಸ[2]ವೇಡೆನುತ್ತೆ ಮು- ||
ನ್ನಿನ ನಿಜಲೀಲೆಯೋಲಗದ ಪೆರ್ಮೆಯ ಮಾತನದೊರ್ಮೆ ಸುಪ್ತಿಯೊಳ್ |
ಕನವರಿಸುತ್ತುಮಿರ್ಪ ಹರಿ ಗೋಪಿಗೆ ವಿಸ್ಮಯಮಂ ನೆಗಳ್ಚಿದಂ || ೧೬ ||

---

1 ದಾರಕ=ಬಾಲಕ. 2 ಬಾರಿಸು=ತಡೆಮಾಡು.

ಒಂದಲ್ಲದೊಂದನೆನುತುಮ- |
ದೊಂದುದಿನಂ ಕೃಷ್ಣನಾಳಿಗುಟ್ಟಿ[1]ದೊಡದನೇ- ||
ನೆಂದುಂ ಮಾಣಿಸಲರಿಯದ- |
ದೊಂದು ಕಥಾಂತರದೆ ಗೋಪಿ ಮಾಣಿಪ ಒಗೆಯಿಂ || ೧೭ ||

ಕಥೆಯಂ ಕೇಳೆಲೆ ಕಂದ ಹುಂ ರಘುಜನೆಂಬಂ ಹುಂ ಸಕಾಂತಂ ವನ- |
ಸ್ಥಿತನಾದಂ ಗುರು ಪೇಳೆ ಹುಂ ದಶಶಿರಂ ಕೊಂಡೊಯ್ದನಾ ರಾಮನಾ ||
ಸತಿಯಂ ತಾನೆನೆ ಪೂರ್ವಮಂ ನೆನೆದು ಹುಂ ಹುಂ ಕೊಳ್ಳದುತ್ಕ್ಷೇಪಹೂಂ- |
ಕೃತಿಯಂ ಮಾಡುತುಮೌಂಡುಗಚ್ಚಿ ಕಿಸುಗಣ್ಬಿಟ್ಟಚ್ಯುತಂ ರಂಜಿಕುಂ || ೧೮ ||

ಆಡುತ್ತುಂ ಸಹಪಾಂಸು |
ಕ್ರೀಡಿತರೊಳ್ ಕೃಷ್ಣನಂಬ ಮಣ್ಣಂ ತಿಂದಂ ||
ನೋಡೆಂದು ಹಳಧರಂ ಪಿಸು- |
ಣಾಡಲ್[2] ಕೇಳ್ದಮ್ಮ ಗೋಪಿ ಸೆಳೆವಿಡಿದೊಲವಿಂ || ೧೯ ||

ಹರಿನೀಂ ಮಣ್ದಿಂದೆ ತಿನ್ನಂ ಜನನಿ ಹುಸಿದನೆಮ್ಮಗ್ರಜಂ ತೋರುವಕ್ತ್ರಾಂ- |
ತರಮಂ ನೋಡೆಂದು ಬಾಯಂ ತೆರೆವುದುಮದರೊಳ್ ವಾರ್ಧಿಯೇಳುಂ- ಕುಳೋರ್ವೀ- ||
ಧರವೇಳುಂ ದ್ವೀಪವೇಳುಂ ಬೆರಸು ಜಗಮನೀರೇಳುಮಂ ಕೂಡೆ ಕಂಡ- |
ಚ್ಚರಿವಟ್ಟಂ ಮುಚ್ಚು ಮುಚ್ಚಾನನಮನೆನುತುಮಾ ಕಾಂತೆ ವಿಭ್ರಾಂತೆಯಾದಳ್ || ೨೦ ||

---

1 ಆಳಿಗುಟ್ಟು=ಹಟಮಾಡು. 2 ಪಿಸುಣಾಡು=ಚಾಡಿಹೇಳು.

## ೧೯. ಪ್ರಹ್ಲಾದ

[ಈ ವಿಷಯವು ಪ್ರಹ್ಲಾದ ಚರಿತ್ರೆಯೆಂಬ ಕಾವ್ಯದ ೬ನೆಯ ಸಂಧಿಯಿಂದ ಉದ್ಧೃತವಾಗಿದೆ. ಅದರ ಕವಿಯಾದ ನರಹರಿಯು ಕಾವೇರೀತೀರದ ಬಳ್ಳಳಪುರದ ಪ್ರಭುವೆಂದು ಆ ಕಾವ್ಯದಿಂದ ಗೊತ್ತಾಗುವುದು. ಆತನ ಕಾಲವು ೧೬ನೆಯ ಶತಮಾನದ ಮಧ್ಯಭಾಗವೆಂದು ಕವಿಚರಿತೆಯಲ್ಲಿ ಊಹಿಸಲಾಗಿದೆ. ತನ್ನಲ್ಲಿ ಯಾವ ಶಕ್ತಿಯೂ ಇಲ್ಲವೆಂದೂ ಗರುಡಗಿರಿವಾಸನು ನುಡಿಸಿದಂತೆ ಬರೆಯುವೆನೆಂದೂ ಆತನು ವಿನಯದಿಂದ ಆಡಿದರೂ ಇಲ್ಲಿರುವ 'ಪ್ರಹ್ಲಾದ'ದಲ್ಲಿ ಆತನ ವಾಕ್ಸೌಂದರ್ಯವು ವ್ಯಕ್ತವಾಗುವುದು.]

ಕಂದ ಬಾ ಎನ್ನಾನೆ ನಿರ್ಜರ- |
ವೃಂದಮಸ್ತಕಶೂಲ ಬಾ ಸುರ- |
ಸಿಂಧುಪಿತೃ[1]ಗಜಕೇಸರಿಯೆ ಬಾ ದನುಜಕುಲಕುಮುದ ||
ಚಂದ್ರಮನೆ ಬಾ ವೈರಿತಮದಿವ- |
ಸೇಂದ್ರ ಬಾ ಎಂದಮರರಿಪು ನಲ- |
ವಿಂದ ತೆಗೆದಪ್ಪಿದನು ಪ್ರಹ್ಲಾದನ ಸುಮಾನದಲಿ || ೧ ||

ಏನ ಹೇಳಿದರೇನ ಕಲಿಸಿದ- |
ರೇನನರುಹಿದರೇನ ತಿಳುಪಿದ- |
ರೇನು ವಿದ್ಯೆಯ ತುಂಬಿದರು ನೀನೇನ ಪಟಿಯಿಸಿದ್ಯೆ ||
ಏನು ಬಂದುದು ಹೇಳು ಹೇಳೆ- |
ನ್ನಾನೆಯೆಂದಮರಾರಿ ಬಲುಸು- |
ಮ್ಮಾನದಲಿ ಬಿಗಿಯಪ್ಪಿ ಮುಂಡಾಡಿದನು ನಂದನನ || ೨ ||

ತೋರು ತೋರೆನಗೊಮ್ಮೆ ಗುರುಗಳು |
ತೋರಿದಕ್ಷರವಂದಿಗಂದಿಗೆ |
ಸೇರಿದುವೊ ಮೇಣಿಲ್ಲವೋ ಒರೆ ಕಾಂಬೆನಾಂ ನಿನಗೆ ||
ತೋರಮುತ್ತಿನ ಮಕರಕುಂಡಲ- |
ಹಾರಪದಕವನೀವೆನೆಲೆ ಸುಕು- |
ಮಾರ ಬಂದೋದನಿತ ಬರೆ ಬರೆ ತೋರು ತೋರೆಂದ || ೩ ||

---

1 ಸುರಸಿಂಧುಪಿತೃ=ಹರಿ.

ಗುರು ಕಲಿಸಿದಕ್ಷರದೊಳೆರಡ- |
ಕ್ಷರವನಾಂ ಸಾಧಿಸಿದೆ ನೋಡಿದೊ |
ಬರೆದು ತೋರುವೆನೆನುತಲಮರಧ್ವಂಸಿಯಿದಿರಿನಲಿ ||
ಹರುಷ ಮಿಗೆ ಪ್ರಹ್ಲಾದ ಹರಿ ಹರಿ |
ಶರಣು ಎಂಬಕ್ಷರವ ಬರೆಯುತ- |
ಲೊರೆಯುತಿರಲಂದಾ ಹಿರಣ್ಯಕ ಕೇಳಿ ಬೆರಗಾದ || ೪ ||

ಬೆದರಿದನು ಭಯಹೊಯ್ದು ಮಗನಾ- |
ಡಿದ ನುಡಿಯ ಕೇಳುತ್ತಲಿವಗೀ |
ಪದುಮನಾಭನ ತಳ್ಳಿಯೆಲ್ಲಿಂದೆಲ್ಲಿ ಬಂತೆನುತ ||
ತ್ರಿದಶರಿಪು ಬೆರಗಾಗಿ ಶಿಶುವರಿ- |
ಯದೆ ನುಡಿದನದಕೇನು ಬುದ್ಧಿಯ- |
ಲಿದ ಬಿಡಿಸಬೇಕೆನುತಲಾ ಪ್ರಹ್ಲಾದಗಿಂತೆಂದ || ೫ ||

ಮಗನೆ ನೀನಾರೆಲ್ಲಿಯವ ಹರಿ |
ಹಗೆನಮಗೆ ನೀನರಿಯೆ ನಿರ್ಜರ- |
ರುಗಳ ಮಾತನು ಕೇಳ್ದು ನಿನ್ನಯ ಕಿರಿಯ ತಂದೆಯನು ||
ಜಗವರಿಯೆ ವಾರಾಹರೂಪಿಂ- |
ದೊಗೆದು ಕೊಂದ ದುರಾತ್ಮನವನನು |
ಪೊಗಳುವರೆ ಪ್ರಹ್ಲಾದ ಬೇಡೆನ್ನಾಣೆ ಬೇಡೆಂದ || ೬ ||

ತಂದೆ ಕೇಳೈ ಹರಿಗೆ ಹಗೆಕೆಳೆ |
ಬಂಧುಬಳಗಗಳೆಂಬ ಭೇದಗ- |
ಳೊಂದುಮಿಲ್ಲ ಕಣಾ ದಯಾಂಬುಧಿಯಾತ ನಿನ್ನವನ ||
ಕೊಂದನೆಂದೆನಬೇಡ ಪೂರ್ವದ- |
ಲಂದು ಮಾಡಿದ ದುಷ್ಕೃತದ ಫಲ- |
ದಿಂದಳಿದ ನಿನ್ನನುಜನದ ನೀ ತಿಳಿದುಕೋಯೆಂದ || ೭ ||

ಅರಿಯೆ ಸಣ್ಣವ ನೀನು ಹರಿ ನಮ- |
ಗುರುವ ಹಗೆ ಕೇಳೆನ್ನ ಮಾತನು |
ಪಿರಿದು ಮೂಜಗದೊಳಗೆ ವೇದವ್ರಾತವನವರತ ||
ಒರಲುತಿದೆ ಹರಿ ದೈತ್ಯರಿಪುವೆಂ- |
ದಿರದೆ ಸಂತತ ಮಗನೆ ನೀನರಿ- |
ದರಿದು ಹೊಗಳ್ವರೆ ಹಗೆಯ ಬಿಡುಬೇಡೆಲವೊ ಛಲವೆಂದ || ೮ ||

ಆತನನು ಬಿಡಹೇಳುವರೆ ಸುರ- |
ನಾಥಗಳವಡದಖಿಳವೇದ- |
ವ್ರಾತಗಳು ಕಾಣದ ಮುನೀಂದ್ರರ ಮತಿಗೆ ಮೈಗುಡದ ||
ಶ್ರೀತರುಣಿವಲ್ಲಭನು ಕರುಣದ- |
ಲೋತು ಬಂದನು ನನ್ನ ಭಾಗ್ಯದಿ |
ತಾತ ನೀ ಬಿಡಹೇಳಿದರೆ ನಾನೆಂತು ಬಿಡಲೆಂದ || ೯ ||

ಆದೊಡೆಲೆ ಪ್ರಹ್ಲಾದ ಕೇಳೈ |
ಬೂದಿಮುಚ್ಚಿದ ಕೆಂಡವಾ ಮಧು- |
ಸೂದನನ ನಂಬದಿರು ತಿಮಿರದ ರವಿಯ ಸಖತನದ ||
ಗಾದೆಯಂತಹುದಂತ್ಯದಲಿ ನೀ |
ವಾದಿಸದೆ ಬಿಡು ಬೇಗದಲಿ ಲ- |
ಕ್ಷ್ಮೀಧವನನೆಂದಸುರ ಬೋಧಿಸಿದನು ಕುಮಾರಂಗೆ || ೧೦ ||

ಅರಸುತಿಹ ಲತೆ ಕಾಲ ತೊಡಕಲು |
ಹರಿದು ಬಿಸುಡುವರುಂಟೆ ಸಿರಿ ಬರ- |
ಲರಿದರಿದು ಪದದಿಂದಲೊದೆದವರುಂಟೆ ಹಸಿದಿರಲು ||
ಕರೆದು ಮೃಷ್ಟಾನ್ನವನು ಬಡಿಸಲು |
ಹೊರಗೆ ನೂಸುವರುಂಟೆ ವಿಷ್ಣು- |
ಸ್ಮರಣೆ ಬಾಯಿಗೆ ಬರಲು ನಾನದನೆಂತು ಬಿಡಲೆಂದ || ೧೧ ||

ಆವ ಹಿರಿಯನದಾವ ಗುರುವವ- |
ನಾವ ಬಂಧುಪ್ರೀತಿಯುಳ್ಳವ- |
ನಾವ ಗುಣಸಂಪನ್ನನೆಂದನವರತವೆನ್ನೊಡನೆ ||
ಶ್ರೀವರನ ಕೊಂಡಾಡುತಿಹೆ ಮಸಿ- |
ಗಾವಲಿಯು ಕನ್ನಡಿಗೆ ಸಮವೆನ- |
ಲೀ ವಸುಧೆ ಮೆಚ್ಚುವುದೆ ಮರುಳೇ ಮಗನೆ ನಿನಗೆಂದ || ೧೨ ||

ಚೆಲುವನೆಂಬೆನೆ ಕಾದಕೊಳ್ಳಿಯ |
ತೊಳೆದ ಕೆಂಡದ ಪರಿಯ ದೇಹದ |
ಬೆಳಗು ಗುಣವುಂಟೆಂಬೆನೇ ಮರೆವೊಕ್ಕೆನಾ ನಿನ್ನ ||
ಸಲಹಬೇಕೆಂಬವರ ಹುಟ್ಟಿನ |
ಮೊಳೆಗೆ ಬಿಸಿನೀರೆರೆವನವನೊಳು |
ಗೆಳೆತನವ ಮಾಡುವರೆ ಬೇಡೆಲೆ ಮಗನೆ ನಿನಗೆಂದ || ೧೩ ||

ತಾತ ಕೇಳಂಧಕನು ಜರೆದೊಡೆ |
ಖ್ಯಾತಿಗೆಡುವುದೆ ಮುಕುರಸಂತತಿ |
ಜಾತಿಮರ್ಕಟ ಪಳಿದೊಡೇನಿಳಿ[1]ವುದೆ ನಿಶಾಪತಿಯ ||
ಮೂತಿಯೊಳಗಣ ಚೆಲುವು ನೀನೀ |
ಮಾತಿನಲಿ ಹಳಿದರೆ ಹರಿಯ ವಿ- |
ಖ್ಯಾತಿ ಜಗದೊಳು ಹಿಂಗಿತೇ ಹೇಳೆಂದನಾ ಬಕುತ || ೧೪ ||

ಹಿಂದೆ ಹರಿಯನು ನೆನೆಯಲೊಲ್ಲದೆ |
ಬೆಂದು ಸೀಕರಿಯಾಗಿ[2] ಭವದಲಿ |
ಬಂದು ಬಂದತಿ ಬಳಲಿದೆನು ನಾನಿಂದು ಸಿರಿದರನ ||
ಕುಂದದಂಘ್ರಿಯ ನೆನೆದು ಭವಗಳ |
ಕೊಂದು ಮುಕ್ತಿಯನೈದಬೇಕಿ- |
ನ್ನೊಂದು ಕ್ಷಣವೆನ್ನೊಡೆಯ ನಾರಾಯಣನ ಬಿಡೆನೆಂದ || ೧೫ ||

---

1 ಇಳಿ=ಕಡಮೆಯಾಗು. 2 ಸೀಕರಿಯಾಗು=ಸುಟ್ಟುಹೋಗು.

ಎನಲು ಚಿಂತಿಸಿ ಸುಯ್ದು ದಾನವ |
ಮನದೊಳಾಲೋಚಿಸಿದನಿವನೀ |
ವನಜನಾಭನನೇನ ಹೊಗಳಲು ಬಲ್ಲ ಗುರುವೈಸೆ ||
ಅನವರತ ಕಲಿಸಿದವ ಘಡ ಎಂ- |
ದೆನುತ ಮಿಾಸೆಯ ತಿರುಹಿ ಕಂಗನೆ |
ಕನಲಿ ಕಿಡಿಗಳ ಸೂಸಲಾಕ್ಷಣ ಕರೆಸಿದನು ಗುರುವ || ೧೬ ||

ಎಲವೊ ತನಯನನೋದಿಸೆಂದೊಡೆ |
ಜಲಜನಾಭನ ಹೊಗಳುವುದ ನೀ |
ಕಲಿಸಿದೆಯಲಾ ಸ್ವಾಮಿದ್ರೋಹಿಯ ನಿನ್ನ ನಂಬುವರೇ ||
ಹಲವು ಮಾತೇನಿನ್ನು ಕಂಗಳ |
ಕಳೆ ದುರಾತ್ಮನ ಮೆಟ್ಟಿ ಸೀಳೆಂ- |
ದುಲಿಯುತಿರೆ ಪ್ರಹ್ಲಾದನಿಂತೆಂದನು ಹಿರಣ್ಯಕಗೆ || ೧೭ ||

ಅಕಟ ಗುರುಗಳ ಕೊಲಿಸದಿರು ಪಾ- |
ತಕ ಕಣಾ ನೀನರಿಯ ಹಿಂದಣ |
ಸುಕೃತಫಲದಿಂದೆನಗೆ ತಾನೇ ಬಂದುದೀ ಹರಿಯಾ ||
ಬಕುತಿ ಕಲಿಸಲು ಬಪ್ಪುದೇ ಚೆಲು- |
ವಿಕೆಯ ಕೊಂಡುದಿಸದೆ ನಿಧಾನಿಸಿ |
ಮುಕುರವನು ನೋಡಿದೊಡೆ ರೂಪೇಂ ಬಹುದೆ ಹೇಳೆಂದ || ೧೮ ||

ಮುನ್ನ ಮಾಡಿದ ಸುಕೃತಫಲದಿಂ- |
ದುನ್ನತದ ಹರಿಭಕ್ತಿ ಸೇರಿತು |
ಬನ್ನಬಡಿಸದೆ ಕಳುಹು ಗುರುಗಳನೆನಲು ಸುರವೈರಿ ||
ತನ್ನ ತಾ ಬೆರಗಾಗಿ ಹರಿಯೆಂ- |
ದೆನ್ನೆನೆಂದರೆ ಮತ್ತೆ ಬಂದಿದು |
ಬೆನ್ನ ಕಟ್ಟಿತೆ ಸುತನ ದೆಸೆಯಿಂದಕಟಕಟಯೆಂದ || ೧೯ ||

ಎಲವೊ ತನ್ನಯ ಮಾತ ಕೇಳದೆ |
ಜಲಜಗರ್ಭನ ತಂದೆಯನು ವೆ- |
ಗ್ಗಳಿಸಿ ನೆರೆ ಕೊಂಡಾಡಲದರಿಂದೇನು ಫಲ ನಿನಗೆ ||
ಇಳೆಯನೀವನೊ ನಿನಗೆ ಚಾತು- |
ರ್ಬಲವ ಕೊಡುವನೊ ಬಯಸಿದುತ್ತಮ |
ಲಲನೆಯರ ಕರುಣಿಪನೊ ತನ್ನಂತೆಂದನಾ ದೈತ್ಯ || ೨೦ ||

ಸಕಲಭವಗಳನೊದೆದು ಘನಪಾ- |
ತಕವ ಮುರಿದೀಡಾಡಿ ದುರಿತ- |
ಪ್ರಕರಗಳಕೆಡೆ ತುಳಿದು ಸಂಸಾರಾಬ್ಧಿಯಿಂದೆತ್ತಿ ||
ವಿಕಳಬುದ್ಧಿಯ ಬಿಡಿಸಿ ಕಮಲಾಂ- |
ಬಕನೆ ಗತಿಯೆಂದಿರ್ದರವರಿಗೆ |
ಮುಕುತಿವನಿತೆಯನೀವನೆಲೆ ಖಳರಾಯ ಕೇಳೆಂದ || ೨೧ ||

ಹಂದಿಗಣ್ಣೆಯ ಪೂಸಿ ನೀರನು |
ತಂದೆರೆಯಲದು ಬಿಡುವುದೇ ತಾ- |
ನೆಂದಿನೊಲು ಮಲದಲ್ಲಿ ಮುಳುಗಾಡದೆ ಮಹೀತಲವ ||
ಮುಂದೆ ಸಿಂಹಾಸನದಿ ಕುಳಿತಾ- |
ಳೆಂದೊಡೊಲ್ಲದೆ ವೈರಿಯೆಂಜಲ |
ತಿಂದು ಬದುಕುವುದೇನು ಪ್ರಿಯವೋ ಖೂಳ ನಿನಗೆಂದ || ೨೨ ||

ಕೇಳೆಲವೊ ಪ್ರಹ್ಲಾದ ಧರಣಿಯ |
ಮೇಲೆ ಜೀವದೊಳಿಹನು ಹರಿಯೆಂ- |
ದಾಳಿಗೊಂಡಿಟ್ಟಾಡಬೇಡೆಮ್ಮೊಡನೆ ನೀನಿನ್ನು ||
ಬಾಳು ಬಯಲಾಗಳಿದ ನಿನ್ನವ- |
ನಾಳುತನವಿನ್ನಿಲ್ಲ ಹಿತವರ |
ಕೇಳಿ ಬಾ ಹೋಗಿನ್ನು ಬಿಡುವೆನು ಎಂದನಾ ದೈತ್ಯ || ೨೩ ||

ಏನನಾಡಿದೆ ತಂದೆ ನೀನ- |
ಜ್ಞಾನಿಯೇ ಮುನ್ನಿನ ವಿರೋಧದ |
ಬೇನೆ ತಲೆಯನು ಹಿಡಿದು ವಿಕಳಿಸುವಂದದಿಂ ಹರಿಯ ||
ಯೋನಿಜರವೊಲ್ ಮಡಿದನೆಂದನು- |
ಮಾನಿಸದೆ ಮಾತಾಡುವರೆ ಸಾ- |
ಮಾನ್ಯನೇ ಹರಿ ನಿನ್ನ ಮಾತನು ಕೇಳ್ವನಲ್ಲೆಂದ || ೨೪ ||

ನುಡಿ ಹುಸಿಯೆ ಪ್ರಹ್ಲಾದ ಕೇಳ್ ನಿ- |
ನ್ನೊಡೆಯನಳಿದುದನೊಬ್ಬ ಹೆಂಡತಿ[1] |
ನಡೆದಳರಿಯರಮನೆಗೆ ಮತ್ತೊಬ್ಬಳನು[2] ಭಕ್ತಜನ ||
ಬಿಡದೆ ಮುರಿತಿಂದುದು ಕುಮಾರನ |
ಕೆಡಿಸಿದನು ಮೃಡನೆಂಬ ಚಿಂತೆಯ- |
ಲೊಡಲುರಿದು ತಾ ಬಿದ್ದನೈ ವರದುಗ್ಧಸಾಗರದಿ || ೨೫ ||

ಇಂತಳಿದ ನಿನ್ನೊಡೆಯನೆನೆ ಶ್ರೀ- |
ಕಾಂತೆಯರಸನ ಭಕ್ತ ನುಡಿದನು |
ಭ್ರಾಂತಿ ನಿನಗಿನ್ನೆಂಬುದರಿಯಲು ಬಂದುದೀಗೆನಗೆ ||
ಸಂತತಾಮೃತಪಾನಿ ಜಗದಾ- |
ದ್ಯಂತ ಕಾಲದೊಳುಳಿವ ನಿಜ ನಿ- |
ಶ್ಚಿಂತ ನಿರ್ಮಲ ನಿತ್ಯಗುಂಟೇ ಮರಣ ಹೇಳೆಂದ || ೨೬ ||

ನಂಬನಿವನೇನೇನ ಬುದ್ಧಿಯ |
ತುಂಬಿದರು ಶಿವಶಿವ ಮಹಾದೇ- |
ವೆಂಬ ಬಾಯಲಿ ಹಾಯ್ಕಿಕೊಂಡನು ಹುಡಿಯನಿನ್ನೆನುತ ||
ಹಂಬಲಿಸಿ ಸುರವೈರಿ ಕಂಬನಿ- |
ದುಂಬಿ ಬಿಸುಸುಯ್ದುಕಟ ಮಗನೆಂ- |
ದೆಂಬ ಭ್ರಾಂತಿನ್ನೇಕೆ ತನಗೆಂದೆನುತಲುರಿದೆದ್ದ || ೨೭ ||

1 ಒಬ್ಬ ಹೆಂಡತಿ—ಭೂದೇವಿ. 2 ಮತ್ತೊಬ್ಬಳನು—ಶ್ರೀದೇವಿಯನ್ನು,

ಏನ ಹೇಳಿದೊಡಿವನು ಬಿಡ ಚತು- |
ರಾನನಯ್ಯನ ನೆನಹನೀ ಮತಿ- |
ಹೀನಸುತನಿದ್ದೇನು ಫಲ ಕೊರಳರಿವೆನೆಂದೆನುತ ||
ಭಾನುಮಂಡಲ ನಡುಗೆ ಖಡುಗವ |
ದಾನವನು ಸೆಳೆದಪ್ಪಳಿಸೆ ಗುರು |
ತಾನೆ ಬಂದಡಹಾಯ್ದು ಹಿಡಿದನು ಕರದ ಖಂಡೆಯವ || ೨೮ ||

ಬೇಡ ಬೇಡಮುರಾರಿ ಬಡಿದೊಡೆ |
ಕೋಡಗನಲೇನುಂಟು ಮಗುವಿನ |
ಕೂಡೆ ನಿನ್ನಯ ಕೋಪವೇ ಬಿಡು ಮುದ್ದನಿನ್ನವನ ||
ರೂಢಿ ಮೆಚ್ಚಲು ವಿದ್ಯೆಬುದ್ಧಿಯ- |
ನಾಡಿಸದೆ ಕಲಿಸುವೆನು ಕಡೆಯಲಿ |
ನೋಡಿ ನೀ ಪರಿಣಾಮಿಸಲುಬೇಕೆಂದನಾಚಾರ್ಯ || ೨೯ ||

ಅರಸ ಕೇಳಮುರಾರಿ ಕೋಪವ |
ಪರಿಹರಿಸಿಕೊಂಡಾಗ ಗುರುಗಳ |
ಕರೆದು ಪ್ರಹ್ಲಾದನನು ಕೈಯಲಿ ಕೊಟ್ಟು ಹರಿಯೆಂಬ ||
ದುರುಳನುಡಿಗಳ ಬಿಡಿಸಿ ತನಯನ |
ಬರೆಸಿ ವಿದ್ಯೆಯ ಕಲಿಸಿ ಹೋಗೆಂ- |
ದಿರದೆ ನೇಮವನಿತ್ತು ಕಳುಹಿದನವರ ನಿಜಗೃಹಕೆ || ೩೦ ||

# ೨೦. ಪುತ್ರಶೋಕ

[ಈ ವಿಷಯವು ರಾಜಶೇಖರವಿಲಾಸದ ತ್ರಯೋದಶಾಶ್ವಾಸದೊಳಗಿದೆ. ಈ ಕಾವ್ಯವನ್ನೂ ಅದನ್ನು ರಚಿಸಿದ ಕವಿಯನ್ನೂ ಕುರಿತು ಶಬರಶಂಕರವಿಲಾಸದ ಆದಿಯಲ್ಲಿ ಪ್ರಸ್ತಾಪಿಸಿದೆ.

ಯುವರಾಜನೂ ಮಂತ್ರಿಕುಮಾರನೂ ತಮ್ಮ ಕುದುರೆಗಳನ್ನೇರಿ ವೈಹಾಳಿಗೆ ಹೋಗುತ್ತಿರುವಾಗ ರಾಜಮಾರ್ಗದಲ್ಲಿ ಜನಸಂದಣಿ ನೆರೆದು ಅವರನ್ನು ನೋಡುತ್ತಿದ್ದಿತು. ತಿರುಕೊಳವಿನಾಚಿಯೆಂಬ ಒಬ್ಬ ಶಿವಭಕ್ತೆಯ ಐದು ವರ್ಷದ ಶಂಕರನೆಂಬ ಬಾಲಕನು ತಾಯಿ ನೀರಿಗೆ ಹೋಗಿದ್ದಾಗ ಬೀದಿಯ ಕಳಕಳವೇನೆಂದು ನೋಡುವುದಕ್ಕೆ ಬಂದು ನಿಂದಾಗ ಆಕಸ್ಮಾತ್ತಾಗಿ ಮಂತ್ರಿಕುಮಾರನ ಕುದುರೆಯ ಕಾಲಡಿಗೆ ಬಿದ್ದು ಮೃತಿಹೊಂದಿದನು. ಅವನ ತಾಯಿ ಪುತ್ರನನ್ನು ಕಾಣದೆ ಅಲ್ಲಿಗೆ ಓಡಿಬಂದು ಅವನಿಗಾಗಿ ಶೋಕಿಸುವಳು.]

ಎಲೆ ಸುಕುಮಾರ ಶಂಕರಕುಮಾರಕ ಬಾರ ಮದೀಯಲೋಚನೋ- |
ತ್ಪಲರಜನೀಶ ನಿನ್ನ ಮೊಗದಾವರೆಯಂ ಮಿಗೆ ತೋರದೆತ್ತ ಪೋ- ||
ದೆ ಲಲಿತಮಂದಹಾಸ ಲಲಿತಸ್ಖಲದಕ್ಷರವಾಣಿ ಗೆಜ್ಜೆ ಮೆ- |
ಲ್ಲಲಿಗುಡೆ ಬಂದು ಬಳ್ನಿರಿಯನಪ್ಪದೆ ತಳ್ವಿದೆಯ್ಯೆ ತನೂಭವಾ || ೧ ||

ಕರಿಗಳ ಕಾಲ್ಗೊಳಗಾದನೊ |
ವರೂಥಚಕ್ರಕ್ಕೆ ಸಿಲ್ಕಿದನೊ ಹಯಚಂಚ- ||
ತ್ಖುರಹತಿಯಿಂದಳಿದನೊ ಶಂ- |
ಕರನಕಟಕಟೆಂದು ಬಗೆದು ಬಾಯ್ವಿಡುತಿರ್ದಳ್ || ೨ ||

ಎಳಗಿಳಿಯಂ ಕೊರಲ್ಮುರಿದು ಮೋದಿದ[1]ರಾರ್ ಮರಿಯಂಚೆಯಂ ಭಯಂ- |
ಗೊಳಿಸುತೆರಂಕೆಯಂ ಪರಿದು ಪೊಯ್ದವರಾರ್ ಮೃಗಶಾಬಮಂ[2] ಕರಂ ||
ಮುಳಿದು ಶಿರೋಧಿಯಂ[3] ಕೆಡೆಯಲೆಚ್ಚವರಾರ್ ಬಿಸನಾಳಕಾಂಡಕೋ- |
ಮಳತರಕಂಠಮಂ ಕಡಿದುರುಳ್ಚಿದರಾರ್ ಸುಕುಮಾರಶೇಖರಾ || ೩ ||

ಹಾ ಮಗನೆ ಹಾ ಮನೋಜ್ಞನೆ |
ಹಾ ಮುದ್ದುಗ ಹಾ ಮದೇಭಗತಿ ಮಂಜುಳ ಹಾ ||
ಹಾ ಮಧುರವಾಣಿ ಹಾ ಮ- |
ತ್ಪ್ರೇಮಾಸ್ಪದ ಹಾ ಮದೀಯವಂಶಲಲಾಮಾ || ೪ ||

---

1 ಮೋದು=ಹೊಡೆ. 2 ಶಾಬ=ಮರಿ. 3 ಶಿರೋಧಿ=ಕಂಠ.

ಎಲ್ಲಿಯ ಹಯಮೆಲ್ಲಿಯ ನೃಪ- |
ನೆಲ್ಲಿಯ ವೈಹಾಳಿ[1]ಯೆಲ್ಲಿ ಯತಿಕಳಕಳಮಿಂ- ||
ತೆಲ್ಲಿಯ ದರ್ಶನಗಮನಮಿ- |
ದೆಲ್ಲಿಯ ಮೃತಿ ನಿನಗೆ ಬಂದುದೆಲೆ ಸುಕುಮಾರಾ || ೫ ||

ಮುನ್ನರುವರಳಿ[2]ದಳಲನೆಲೆ |
ನಿನ್ನಂ ನೆರೆನೋಡಿ ಮಗನೆ ಮರೆದಿರ್ದೆಂ ಪೇ- ||
ಳಿನ್ನಾರಿಂದಂ ಮರೆದಪೆ- |
ನೆನ್ನೊಳುಸಿರ್ ಸುಮ್ಮನಿರದಿರೆಲೆ ತನುಜಾತಾ || ೬ ||

ಗಳಗಳಸೆ ಬಳೆದು ಧನಮಂ |
ಗಳಿಸಿ ಚರಾರ್ಚನೆಯನೆಸಗಿ ಹರಕೃಪೆವಡೆದು- ||
ಜ್ಜ್ವಳಸುಖಮಸೀವನೆಂದಿರೆ |
ತಿಳಿಪಿಲ್ಲದೆ ಮಗನೆ ತುರಗಹತಿಯಿಂ ಮಡಿದೈ || ೭ ||

ಕೊರಲಂ ಮೆಟ್ಟುವ ಪದದೊಳ್ |
ತುರಗಂ ಕಂಗೆಟ್ಟು ಜನನಿಯೆಂದೆನ್ನಂ ನೀಂ ||
ಕರೆದೆಯೊ ಮರೆದೆಯೊ ದೋಷಾ- |
ಕರೆಯೆಂದೇಂ ತೊರೆದೆಯೋ ತನೂಜನೆ ಪೇಳೈ || ೮ ||

ಕಡವರಮಡಂಗಿತೇ ಪೊಸ |
ಕಡಾರಮಿಂದಕಟ ಮಾಯಮಾದುದೆ ಮೆರೆವಿಂ- ||
ಗಡಲಿಂಗಿಪೋದುದೇ ಕಡಿ- |
ವಡೆದುದೆ ಕಲ್ಪಾವನೀಜಮಿದು ವಿಧಿವಶದಿಂ || ೯ ||

ಪಸಿದೆಯೆಲೆ ಕಂದ ಬತ್ತಿತು |
ಬಸಿರಿದು ಕಳೆಗುಂದಿತಾನನಂ ಕಣ್ಬೊಣರ್ಗಳ್[3] ||
ಮಸುಳ್ದುವುಣಲ್ಬಡೆಯದೆ ಮಿಗೆ |
ಬಸವಳಿದಿಂತಿರ್ಪುದುಚಿತವೇ ಸುಕುಮಾರಾ || ೧೦ ||

---

1 ವೈಹಾಳಿ=ಕುದುರೆ ಸವಾರಿ. 2 ಅರುವರು=ಆರು ಮಂದಿ ಮಕ್ಕಳು.
3 ಕಣ್ಬೊಣರ್ಗಳ್=ಕಣ್ಣುಗಳೆರಡು.

ಸರಿವರೆಯದ ಮಕ್ಕಳ್ ಶಂ- |
ಕರನೆಲ್ಲಿದನಾಡಲೆಂದು ಬೆಸಗೊಳಲೇನೆಂ- ||
ದಿರದೆ ಮರುಮಾತುಗೊಟ್ಟಪೆ- |
ನರಸಸ ಹಯದಿಂದೆ ಮಡಿದನೆಂಬೆನೆ ಮಗನೇ || ೧೧ ||

ನೀನಾಡಿದೆಡೆಗಳಂ ಸುತ |
ನೀನೊರಗಿದ ಪಾಸುವಂ ತನೂಭವ ಪದಪಿಂ ||
ನೀನುಂಡ ತಾಣಮುಮನಿ- |
ನ್ನಾನೆಂತೀಕ್ಷಿಸುವೆನೆಂತು ಸೈರಿಪೆನಕಟಾ || ೧೨ ||

ಗಾಡಿಯೊಳಾಡಿ ಮಕ್ಕಳೊಡನಂಗಣಕ್ಕೈದಿರೆ ತಳ್ತ ಧೂಳಿಯಂ |
ನಾಡೆ ಸೆರಂಗಿನಿಂದೊರಸಿ ಮೈದೊಳೆದೊಳ್ಳುಣಿಸಿಕ್ಕಿ ಮುದ್ದುಗೈ- ||
ದೂಡಿ ವಿಳಾಸಮಂ ಮೆರೆದು ಸಿಂಗರಿಸುತ್ತಮರ್ದಪ್ಪಿ ಬೇಡಿತಂ |
ನೀಡಿ ನಿರೀಕ್ಷಿಪೆನ್ನನುಳಿದೊರ್ವನೆ ಪೋಪುದೆ ನೀಂ ತನೂಭವಾ || ೧೩ ||

ಅಳಲದಿರು ತಾಯೆ ದುಃಖಂ- |
ಗೊಳದಿರ್ ನೀನೆಂದು ನೋಡಿ ಸಂತೈಸದೆ ಕ- ||
ಣ್ಗಳ ಜಳಮಂ ತೊಡೆಯದೆ ಕಡು |
ಮುಳಿದರವೊಲ್ ಸುಮ್ಮನಿರ್ಪುದೇ ಸುಕುಮಾರಾ || ೧೪ ||

ನೋಡುವ ಕಣ್ಣೊಡೆದುದು ಮಾ- |
ತಾಡಿಪ ನಾಲಗೆ ಮುರುಂಟಿದುದು ನಿನ್ನಂ ಮುಂ- ||
ಡಾಡುವ ಕೈಯುಡಿದುದು ಸಲೆ |
ಪಾಡುವ ಬಾಯ್ಬೆಂದುದಣುಗ ನೀಂ ಮುಡಿಯಲೊಡಂ || ೧೫ ||

ಆರೊಡನುಸಿರ್ವೆಂ ದುಃಖಮ- |
ನಾರುಂಟೆನಗಕಟ ಮಗನೆ ಮಗನೆ ಮನೋಜಾ- ||
ತಾರಿಯ ಕೃಪೆ ತಪ್ಪಿದ ಬಳಿ- |
ಕಾರಾದೊಡಮೇನೊ ನಿನ್ನನೇಂ ಕಾಣಿಪರೇ || ೧೬ ||

ಮಗನೆ ನೀನಿಂತಳಿಯೆ ಸೈರಿಪೆನೆಂತೊ ಪೇಳ್ಕೈ ಶಂಕರಾ |
ಸುಗುಣನಿಧಿ ನೀನೆನ್ನ ಮೊರೆಗಳನೊರ್ಮೆ ಕೇಳ್ಕೈ ಶಂಕರಾ || ೧೭ ||

ಪರಸಿ ಪಾಡಿ ಮಹೇಶನಿಂದವೆ ಬೇಡಿ ಮುನ್ನಂ ಶಂಕರಾ |
ತುರಗಖುರಕೆಂದಕಟ ಪೆತ್ತೆನೆ ಕುವರ ನಿನ್ನಂ ಶಂಕರಾ || ೧೮ ||

ಎಂತು ಮರೆವೆನೊ ಸವಿಯಸಾಲಿಡುವಮರ್ದುವಗೆಯಂ ಶಂಕರಾ |
ಕಾಂತಿ ಶೋಭಿಸೆ ಮುದ್ದುವೀರುವ ಮೊಗದ ಬಗೆಯಂ ಶಂಕರಾ || ೧೯ ||

ಝುಣಝುಣಿಸೆ ಕಿರುಗೆಜ್ಜೆ ಕರತಳತಾಳರವಕೆಲೆ ಶಂಕರಾ |
ಕುಣಿವ ನಿನ್ನಯ ಬಿನದವೊಪ್ಪುಗುಮೆನ್ನ ಮನಕೆಲೆ ಶಂಕರಾ || ೨೦ ||

ಶರಣಪದಪಂಕಜರಜಂಗಳೊಳಾಳದೆಂತೆಲೆ ಶಂಕರಾ |
ತುರಗಖುರಹತಿಜನಿತಧೂಳಿಯೊಳಳಿದೆಯಿಂತೆಲೆ ಶಂಕರಾ || ೨೧ ||

ಎನ್ನನೋವುವನೆಂದು ನಂಬಿರಲಿಂತು ಮಡಿದ್ಯೆ ಶಂಕರಾ |
ಮುನ್ನಮೆನ್ನಯ ಹರ್ಷವಲ್ಲಿಯ ಕುಡಿಯಸುಡಿದ್ಯೆ ಶಂಕರಾ || ೨೨ ||

ನಿನ್ನಳಿವನೀಕ್ಷಿಸಿಯುಮೆನ್ನಸು ಪೋಗದಂದೆಲೆ ಶಂಕರಾ |
ನಿನ್ನೊಳೆನ್ನಯ ಕೂರ್ಮೆ ನಿಜಮೆಂತೆನಿಪುದಿಂದೆಲೆ ಶಂಕರಾ || ೨೩ ||

ಹರಣದಳಿವಿಂಗಂಜುವೆನೆ ನಿನ್ನಾಣೆ ಮಗನೇ ಶಂಕರಾ |
ಶಿರವರಿದು ನಿನ್ನಂದವಾಗದೆ ಪಿಂಗಿದಪೆನೇ ಶಂಕರಾ || ೨೪ ||

ಪರಮಕೃಪಾಕರನೆಂಬೀ |
ಬಿರುದಂ ಬಿಸುಟಕಟ ಶಂಕರಾ ಶಂಕರನಂ ||
ಹರಿಸಿ ನಡುಗಾಡೊಳಂಧೆಯ |
ಕರದಂಡಮನೆಳೆದುಕೊಂಡವೊಲ್ಮಾಡಿದೆಯ್ಯೆ || ೨೫ ||

ನೊಂದು ಪಲುಂಬಿ ಪಂಬಲಿಸಿ ಮೇಣ್ ಪಲವಾಡಿ ಬಳಲ್ದು ಬಾಡಿ ಕ- |
ಣ್ಣಿಂದಿಳಿವಶ್ರು ಕಾಳ್ಪುರಮದಾಗಿರೆ[1]ಬಾಯ್ದೆರೆ ಬತ್ತೆ ಮತ್ತೆ ಶೋ- ||
ಕಂ ದಳವೇರೆ ಪೌರರಳಲುತ್ತಿರೆ ತಾನಳುತಲ್ಲಿ ತಾಳ್ದು ತ- |
ನ್ನಂದನನಂಗಮಂ ಮೊರೆಯಿಡಲ್ ನಡೆಗೊಂಡಳಿಳಾಧಿನಾಥನೊಳ್ || ೨೬ ||

---

1 ಕಾಳ್ಪುರ=ಕಾಡ ಪ್ರವಾಹ.

# ೨೧. ಹೆಮ್ಮಕ್ಕಳಾರೈಕೆ

[ಹೊನ್ನಮ್ಮನು ಮೈಸೂರಿನ ಶ್ರೀ ಚಿಕ್ಕದೇವರಾಜನ ಸಂಚಿಯ ಊಳಿಗದವಳು. ಆಕೆಯಲ್ಲಿ ಕವಿತಾಶಕ್ತಿಯಿದೆ ಎಂದು ರಾಜನು ತಿಳಿದುಕೊಂಡು ಆಕೆಯಿಂದ ಒಂದು ಸರಸವಾದ ಕಾವ್ಯವನ್ನು ಬರೆಯಿಸೆಂದು ತನ್ನ ರಾಣಿಗೆ ಹೇಳಿದನು. ರಾಣಿಯ ಅಪ್ಪಣೆಯ ಮೇರೆ ಹೊನ್ನಮ್ಮನು 'ಹದಿಬದೆಯಧರ್ಮ'ವೆಂಬ ಸ್ತ್ರೀಯರಿಗೆ ಸುಬೋಧವಾದ ಕಾವ್ಯವನ್ನು ರಚಿಸಿದಳು. ಆಕೆ ೧೭ನೆಯ ಶತಮಾನದ ಅಂತ್ಯಭಾಗದಲ್ಲಿದ್ದಳು. 'ಹೆಮ್ಮಕ್ಕಳಾರೈಕೆ' ಆ ಕಾವ್ಯದ ಪಂಚಮಷಷ್ಠಸಂಧಿಗಳಲ್ಲಿ ದೊರೆಯುವುದು.]

ಪೆಣ್ಣ ಪೆತ್ತವರ ಬಳಗ ಬಳೆವುದು ಬೇಗ |
ಪೆಣ್ಣ ಪೆತ್ತವರು ಪೆರ್ಚುವರು ||
ಪೆಣ್ಣ[1]ಪೆತ್ತುದರಿಂದ ಪೆಸರೆನಿಸಿತು ಮಿಗೆ |
ಬಣ್ಣವೇರಿತು ಪಾಲ್ಗಡಲು || ೧ ||

ಪೆಣ್ಣಿಂದೆ ಪೆರ್ಮೆಗೊಂಡನು ಹಿಮವಂತನು |
ಪೆಣ್ಣಿಂದೆ ಭೃಗು ಪೆರ್ಚಿದನು ||
ಪೆಣ್ಣಿಂದೆ ಜನಕರಾಜನು ಜಸವಡೆದನು |
ಪೆಣ್ಣ ನಿಂದಿಸಲೇಕೆ ಪೆರರು || ೨ ||

ಸಿರಿರಾಣಿಯನು ಸೀತೆಯನು ರುಕ್ಮಿಣಿಯನು ಶ್ರೀ- |
ಹರಿಯೊಡನೊಂದೆ ಹಂತಿಯೊಳು ||
ಇರಿಸಿ ಪೂಜೆಯನೊಡರಿಸುವರು ಪಿರಿಯರು |
ಪರಿಕಿಪೊಡವರು ಪೆಣ್ಣೈಸೆ || ೩ ||

ಪೆಣ್ಣಲ್ಲವೇ ತಮ್ಮನೆಲ್ಲ ಪಡೆದ ತಾಯಿ |
ಪೆಣ್ಣಲ್ಲವೇ ಪೊರೆದವಳು ||
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು |
ಕಣ್ಣುಕಾಣದ ಗಾವಿಲರು || ೪ ||

1 ಪೆಣ್ಣ=ಲಕ್ಷ್ಮಿಯನ್ನು.

ಕುವರನಾದೊಡೆ ಬಂದ ಗುಣವೇನದರಿಂದ |
ಕುವರಿಯಾದೊಡೆ ಕುಂದೇನು ||
ಇವರಿರ್ವರೊಳಗೇಳ್ಗೆವಡೆದವರಿಂದ |
ಸವನಿಪುದಿ[1]ಹಪರಸೌಖ್ಯ || ೫ ||

ಕುಲಪುತ್ರನೋದಿ ತಿಳಿದು ನಡೆದಲ್ಲದೆ |
ಕುಲವನುದ್ಧರಿಸಲರಿಯನು ||
ಕುಲಪುತ್ರಿಯೊಳುಗುವರನಿಗಿತ್ತ ಮಾತ್ರಕೆ |
ಕುಲಕೋಟಿಯನುದ್ಧರಿಪಳು || ೬ ||

ಬಸಿರೊಳೊಗೆದು ಬಳೆದೇಕರೀತಿಯೊಳೆಲ್ಲ |
ಸಿಸುಗಳಿರ್ದೊಡಮೇನು ಬಳಿಕ ||
ಬಸೆದಿತ್ತುದನೊಡಬಡುವಳು ಪೆಣ್ ಗಂಡು |
ಪಸುಗೆ[2]ಗೊಂಬನು ಬಲ್ಮೆಯೊಳು || ೭ ||

ಪುಟ್ಟಿದ ಮನೆಯೊಳು ಪೋರಿ ಪುರುಳುಗೊಂಬ |
ದಿಟ್ಟಗಂಡುಗಳಂತಿರಲಿ ||
ಕೊಟ್ಟುದರಿಂದೆ ತಣಿವ ಕುವರಿಗೆ ಮನ |
ಮುಟ್ಟಿ ಕೊಡುವುದು ಕೋವಿದರು || ೮ ||

ಎನ್ನ ಪೆತ್ತವರಿವರೀ ಮನೆಯೊಡವೆಗ- |
ಳೆನ್ನವೆಂದೆರವಿಲ್ಲದಿರ್ಪ ||
ಕನ್ನೆಯನನ್ಯರಿಗೀವನ್ನೆವರಮುರೆ |
ಮನ್ನಿಸೀವುದು ಮಮತೆಯೊಳು || ೯ ||

ಅರಿತು ಸಿಟ್ಟಿಸೆ ಗಂಡುಮಕ್ಕಳಿಂದತಿಶಯ- |
ದೆರಕದೊಳೆಸೆವ ಪೆಣ್ಗಳನು ||
ಪೊರನೋಟದಿಂದೆ ನೋಡದೆ ಪೋಲೆಸಿಸದೆ |
ಮರುಕವೆರಸಿ ಮನ್ನಿಪುದು || ೧೦ ||

1 ಸವನಿಪುದು=ಒದಗುವುದು. 2 ಪಸುಗೆ=ಪಾಲು.

ಪದುಳಗೊಳಿಸಿ ಪಲವಗೆಪಸದನಗಳ |
ಪುದುಗಿಸಿ ಪೊಂದೊಡಿಗೆಗಳ ||
ಮದುವೆಗೆ ನೆರೆದ ಪೆಣ್ಮಕ್ಕಳ ಸಿಟ್ಟಿಪ- |
ರೆದೆಗೊಳಿಪಂತೆಸಗುವುದು || ೧೧ ||

ಸುಗುಣನಾವನು ಸುಚರಿತ್ರನಾವನು ಕಣ್ಗೆ |
ಸೊಗಸುವ ಸೊಬಗನಾರೆಂದು ||
ಬಗೆದು ಭಾವಿಸಿ ಪೆಣ್ಣನೀವುದು ವಂಶದೊ- |
ಳೊಗೆದೊಳುಗುವರಸಿಗೊಲಿದು || ೧೨ ||

ಬಾಳಿಬದುಕಿ ತಣಿವಿಲ್ಲದ ತಮ್ಮಂತೆ |
ಬಾಳಲೆಳಸುವ ಬಾಲಕಿಯ ||
ಬೀಳುಗುವರನಿಗೆ ಬೆಲೆಗೈದರೆಂಬುದ |
ಕೇಳೆ ಕಿವಿಯ ಮುಚ್ಚುವುದು || ೧೩ ||

ಆದರಿಂದೆ ಪೆಣ್ಮಕ್ಕಳನಾದರಿಪುದು |
ಮುದವೇರಿಪುದು ಮುದ್ದಿಪುದು ||
ಮದುವೆಮಂಗಲದೊಳು ಮನವೊಲಿದವರಿಗೆಂ- |
ದೊದವಿಪುದುಚಿತವಸ್ತುವನು || ೧೪ ||

ಅಣ್ಣತಮ್ಮಂದಿರನಿಬರೊಡವುಟ್ಟಿದ |
ಪೆಣ್ಣನು ಪೇರುಮೆಗೊಳಿಸಿ ||
ಬಣ್ಣ ಬಂಗಾರವ ಬಗೆಬಗೆಯಿಂದಿತ್ತು |
ತಣ್ಣನೆ ತಣಿಸಿ ಬಾಳುವುದು || ೧೫ ||

ಸತಿಪತಿಯರ ಸೌಹೃದದಿಂದೆ ಸಂಸಾರ- |
ವತಿಶಯವಡೆದು ತೋರುವುದು ||
ಇತರೇತರವೈರದಿಂದಿರ್ವರಿಗೆ ದು- |
ರ್ಗತಿಯಂತೆ ಕಂಗೊಳಿಸುವುದು || ೧೬ ||

ನಸುನಾಣ್ಚುವೆಳವೆಂಡಿರ ನಲವೇರಿಸಿ |
ಬಸಗೈಯದೆ ಬಲ್ಮೆದೋರೆ ||
ಪೊಸಪೂವ ಸರಗೈದು ಮುಡಿಯದೆ ಸಲಗಿಸಿ[1] |
ರಸದೆಗೆವೆಸಕವೆನಿಪುದು || ೧೭ ||

ಬೆದರುವ ಮುದ್ದುವೆಣ್ಣಿಗೆ ಭೀತಿಗಳೆವಂತೆ |
ಪದುಳಗೈಯದೆ ಬಲ್ಮೆದೋರೆ ||
ಸೊದೆಯುಂಡು ಸೊರ್ಕುವ ಜೊನ್ನವಕ್ಕಿಗೆ ಬಿಸು- |
ಗದಿರನೂಡುವ ಗೈಮೆಯಂತೆ || ೧೮ ||

ಅರಿಯದ ಪೆಣ್ಣನಾದರಿಸಿಯಂಜಿಕೆಗಳ |
ಪರಿವುಗೈಯದೆ ಬಲ್ಮೆದೋರೆ ||
ತರಿಸಂದು ಮಳೆಗೆ ಬಾಯ್ದೆರೆವ ಚಾದಗೆಯೊಳು |
ಬರಸಿಡಿಲೆರಗಿತೆಂಬಂತೆ || ೧೯ |

ಮುಗುದೆ ನಾಚಿಕೆಗೊಳೆ ಮುದ್ದಿಸಿ ತಿಳುಪದೆ |
ಪಗೆಸಾಧಿಸಿ ಬಲ್ಮೆದೋರೆ ||
ಉಗುರೊಳು ಬಾಜಿಪ ಬೀಣೆಗೊನಕೆಗೊಂಬ |
ಬಗೆಯೆನಿಪುದು ಭಾವಿಪೊಡೆ || ೨೦ ||

ಎರಗಿಯೆರಗದೆಳವೆಣ್ಣನೆರಗಿಸದೆ |
ಬರಿದೆ ಮುಸಿದು ಬಲ್ಮೆದೋರೆ ||
ಎರೆವ ತಣ್ಣೀರನೆಳಸುವೆಳವಳ್ಳಿಗೆ |
ತರಿಗೆಂಡವ ತಳಿವಂತೆ || ೨೧ ||

ಎನ್ನವಳೆಂದೆರಕದೊಳೀವುದು ಪೊನ್ನ |
ರನ್ನವ ಪೊಸದುಗುಲಗಳ ||
ತನ್ನ ಶಕ್ತಿಯ ವಂಚಿಸದೆ ಮನದನ್ನಳ- |
ನುನ್ನತಿವಡಿಸುವುದೊಲಿದು || ೨೨ ||

---

1 ಸಲಗಿಸು=ಬಾಡಿಸು.

ತನ್ನ ಪೆರ್ಚುಗೆಯೊಳು ಪೆರ್ಚುಗೆಗೊಂಡುರೆ |
ತನ್ನ ಕುಂದಿನೊಳು ಕುಂದುವಳ ||
ತನ್ನ ಮೈಯೊಳಗರೆಮೈಯೆನಿಸುವ ಮನ- |
ದನ್ನಳ ಮನ್ನಿಪುದೊಲಿದು || ೨೭ ||

ಎಳಜೌವನಮೊದಲಿಂದುವರೆಗಮೆನ್ನ |
ಬಳಿಸಂದು ಬಾಳಿದಳೆಂದು ||
ಇಳಿಜೌವನದೊಳಗೆರವು[1]ದೋಱದೆಯೆಂದಿ- |
ನೊಳು ನೇಹವನೊಡರಿಪುದು || ೨೮ ||

ಎರವೆಳ್ಳನಿತಿಲ್ಲದೊರ್ವರೊರ್ವರೊಳೊಡ- |
ವೆರೆದಿರ್ಪ ಸತಿಪತಿಗಳಿಗೆ ||
ದೊರಕೊಂಬುದು ಸಂಸಾರಸುಖದ ಸುಗ್ಗಿ |
ಪರದೊಳಾನಂದ ಪರ್ಬುವುದು || ೨೯ ||

1 ಎರವ = ಭೇದ

# ೨೨. ದಕ್ಷಯಜ್ಞ

[ಕನ್ನಡ ಭಾಗವತವು ಪ್ರಸಿದ್ಧಭಾಮಿನೀ ಷಟ್ಪದಿಯ ಕಾವ್ಯಗಳಲ್ಲಿ ಒಂದು. ಇದು ಚಾಟುವಿಠಲನಾಥನೆಂಬವನಿಂದ ರಚಿತವಾಯಿತೆಂದು ಪ್ರತೀತಿಯಿದ್ದರೂ ಕೆಲವು ಸ್ಕಂಧಗಳ ಮುದ್ರಿಕೆಯ ಪದಗಳನ್ನು ಪರಿಶೀಲಿಸಿದರೆ ಹಲವರು ಕೂಡಿ ಇದನ್ನು ರಚಿಸಿದಂತೆ ಅನುಮಾನವಾಗುತ್ತದೆ. ಈ ಕಾವ್ಯವು ೧೬ನೆಯ ಶತಮಾನದ ಆದಿಭಾಗದಲ್ಲಿ ಹುಟ್ಟಿತು. ಇದು ಕುಮಾರವ್ಯಾಸ ಕುಮಾರವಾಲ್ಮೀಕಿಗಳ ಭಾರತರಾಮಾಯಣಗಳಷ್ಟು ಕವಿತಾದೃಷ್ಟಿಗೆ ಯೋಗ್ಯವಲ್ಲವಾದರೂ ಅವುಗಳಷ್ಟೇ ಕನ್ನಡಸಾಹಿತ್ಯದಲ್ಲಿ ಪ್ರಸಿದ್ಧವಾಗಿದೆ. ದಕ್ಷಯಜ್ಞದ ಕಥೆ ಭಾಗವತದ ಚತುರ್ಥಸ್ಕಂಧದ ಮೊದಲನೆಯ ಸಂಧಿಯಲ್ಲಿದೆ.]

ವಿದುರ ಕೇಳಾಶ್ಚರ್ಯಕಥನವ |
ಮುದಮುಖರಿಗೊಂದುದಿನ ವರಸ- |
ತ್ರದಲಿ ನೆರೆದುದು ಸಕಲವಿಬುಧಮುನೀಂದ್ರಸಂದೋಹ ||
ಪದುಮಭವಭವಮುಖ್ಯರಾಸ್ಥಾ- |
ನದಲಿ ಕುಳ್ಳಿರಲಲ್ಲಿಗಖಿಳಾಂ- |
ಗದಲಿ ಬಂದನು ದಕ್ಷನೆದ್ದುದು ಸಕಲಮುನಿನಿವಹ || ೧ ||

ಕಾಲಿಗೆರಗಿದರಖಿಳಸುರಮುನಿ- |
ಮೌಳಿಗಳು ತನತನಗೆ ಕಾಣುತ |
ಯೋಳದೆರಗದೆ ಭದ್ರಪೀಠಾರೂಢನಾಗಿರಲು ||
ನೀಲಲೋಹಿತ[1]ನಿರವನೀಕ್ಷಿಸಿ |
ಕೋಲುಗೊಂಡಂದದಲಿ ರೋಷಕ[2]- |
ರಾಳಲೋಚನನಭಿಭವಿಸಿ ನುಡಿದನು ಮಹೇಶ್ವರನ || ೨ ||

ಕಂಡಿರೈ ಸುರವರರು ಋಷಿಗಳು |
ಕಂಡಿರೈ ಸದ್ಧರ್ಮನಿಷ್ಠರು |
ಕಂಡಿರೈ ಕಾಳಾಯ್ತುಲಾ ಕಟಕಟ ಕುಲಾಚಾರ ||
ಖಂಡಪರಶುವಿನವಿನಯವ ನೆರೆ |
ಕಂಡಿರೈ ನೀವೆಲ್ಲವರು ಕೈ- |
ಕೊಂಡು ಬೆರೆ[3]ತಿಹಬಹುದೆ ಪರರ ಸಮೃದ್ಧಿತನಕೆಂದ || ೩ ||

---

1 ನೀಲಲೋಹಿತ=ಈಶ್ವರ. 2 ಕೋಲುಗೊಂಡಂದದಲಿ=ಬಾಣತಾಗಿದ ಹಾಗೆ,
3 ಬೆರೆ=ಗರ್ವಪಡು.

ಸರಸಿಜಾಸನನೆಂದ ಮಾತಿನ |
ಗುರುತನಕೆ ಮರುಳಾಗಿ ಲೋಕೇ- |
ಶ್ವರನು ಗುರುಲಘುತನವ ಬಲ್ಲವನೆಂದು ಹೇಳಿದರೆ ||
ಮರುಳುಗೊರವಗೆ ಮಗಳನಿತ್ತಾ- |
ದರಿಸಿದೆನು ಮರ್ಕಟನ ಕೈಯಲಿ |
ಕರೆದು ಹೂವಮಾಲೆಯನು ಕೊಟ್ಟಂತಾಯ್ತು ಕೇಳೆಂದ || ೪ ||

ಇದಿರುಗೊಂಡರ್ಚಿಸುವ ಮನಸಿ- |
ಲ್ಲದಡೆ ಮಾತಿನಲುಚಿತವನು ಮಾ- |
ಡಿದರೆ ಮಾನ್ಯವೆ ತನ್ನ ಮಹಿಮೆಗೆ ಸಾಕದಂತಿರಲಿ ||
ಪದುಮವನದಲಿ ಕಪ್ಪೆ ಗುಣವರಿ- |
ಯದಡೆ ಹಾನಿಯೆ ಪರಿಮಳಕೆ ಕೆಡಿ- |
ಸಿದೆನು ಮಗಳನು ದುರ್ವಿನೀತಂಗಿತ್ತು ತಾನೆಂದ || ೫ ||

ಸ್ನಾನ ಮೊದಲಲಿ ವರ್ಜ್ಯ ಸದನು- |
ಷ್ಠಾನವಲ್ಲಿಂದತ್ತ ಮಸಣ |
ಸ್ಥಾನ ಮನೆ ಭಸ್ಮಾಂಗರಾಗ ಪಿಶಾಚ ಪರಿವಾರ ||
ತಾನರಿವನೆಂತಾತ್ಮಜನಬಹು- |
ಮಾನದಿರವನು ಕುರುಬರರಿಯದ- |
ಡೇನು ಮಾಣಿಕ ಮಾನ್ಯವಲ್ಲಾ ಜಾಣಸಭೆಯೊಳಗೆ || ೬ ||

ಅಸಿವ[1]ನೀ ಶಿವನೆಂದು ಬರಿದೇ |
ಹೆಸರ ಹೊತ್ತನಧರ್ಮಚಾರಿಯ- |
ನೊಸೆದು ಭಜಿಸುವರಿವನನೀಶ್ವರನೆಂದು ಪಾಪಿಗಳು ||
ವಸುಧೆಯಲಿ ಘನಮಾಂಸಪಾನ- |
ವ್ಯಸನಿಗಳು ಪಾಷಂಡಮತದಲಿ |
ಪಸರದಲಿ ತದ್ವೃತಿಗಳೆನುತವೆ ದಕ್ಷ ಹೊರವಂಟ || ೭ ||

1 ಅಸಿವ=ಅಶುಭಕರನು.

ಸುಮ್ಮನಲ್ಲಿಂದುಸುರದೆದ್ದು ಚ- |
ತುರ್ಮುಖನು ನೋಡುತ್ತಿರಲು ಪರ- |
ಬೊಮ್ಮಮೂರುತಿ ತಿರುಗಿದನು ಕೈಲಾಸಪರ್ವತಕೆ ||
ದೌರ್ಮನಸ್ಯದಲಿಂತು ಕಳೆದುದು |
ತಮ್ಮೊಳಗೆ ಹಲಕಾಲ ದಕ್ಷವಿ- |
ಕರ್ಮಫಲಪರಿಪಾಕವಡದಂದದಲಿ ಕೇಳೆಂದ || ೮ ||

ಸರಸಿಜಾಸನನಾ ಪ್ರಜಾಧೀ- |
ಶ್ವರರಿಗೀಶ್ವರನೆಂದು ದಕ್ಷನ |
ಕರೆದು ಪಟ್ಟವ ಕಟ್ಟಿ ಪತಿಕರಿಸಿದನು ಕಾಲದಲಿ ||
ಭರಿತವಾದುದು ಮತ್ತೆ ಮದವಂ- |
ಕುರಿಸಿ ಪಲ್ಲವಿಸಿತ್ತು ದಕ್ಷಂ- |
ಗರಸುತನದ ಪದಸ್ಥಿಕೆಯ ಪರುಠವದ[1] ಸಿದ್ಧಿಯಲಿ || ೯ ||

ಒಂದು ದಿನ ಖೇಚರರು ನಿಜಪಿತೃ- |
ಮಂದಿರದ ಯಜ್ಞೋತ್ಸವದ ಸಾ- |
ನಂದದಲಿ ಪಾಡುತ್ತ ದಿವ್ಯವಿಮಾನಶತದೊಳಗೆ ||
ಸಂದಣಿಯೊಳೈತಹುದನೀಕ್ಷಿಸು- |
ತಿಂದುಮುಖಿ ಕೈಲಾಸಶಿಖರದ- |
ಲಂದು ಬಿನ್ನಹಮಾಡಿದಳು ಪತಿಯಂಘ್ರಿಗಭಿನಮಿಸಿ || ೧೦ ||

ದೇವ ನೋಡಂಬರತಲದಲುಪ- |
ದೇವಗಣದುತ್ಸವವ ನಿನ್ನಯ |
ಮಾವ ದಕ್ಷನ ಮನೆಯ ಯಜ್ಞಾರಂಭಸಂಭ್ರಮದ ||
ಈ ವಿಬುಧನಾರಿಯರು ಪಾಡು- |
ತ್ತೀ ವಿಲಾಸದಲೈದುತಿರೆ ನಿಗ- |
ಮಾವಭಾವಿತ ನೋಡಲಾಗದೆ ತನ್ಮಹೋತ್ಸವವ || ೧೧ ||

---

1 ಪರುಠವ=ಆಡಂಬರ; ವಿಸ್ತರ.

ವಿಹಿತವಲ್ಲಾ ದೇವ ನಿಜಪಿತೃ- |
ಗೃಹಮಹೋತ್ಸವವಾರ್ತೆಯನು ಕೇ- |
ಳಿಹುದೆ ಮನೆ ಮನೆವಾರ್ತೆಯಲಿ ಮಕ್ಕಳಿಗೆ ಚಪಲವಲ ||
ಬಹಳವಹ ಯಜ್ಞೋತ್ಸವಕೆ ತಾ |
ಸಹಿತ ದೇವರ ಚಿತ್ತವೃತ್ತಿಗೆ |
ಬಹಡೆ ಬಿಜಯಂಗೈಯಬೇಕೆಂದಳು ಸರೋಜಮುಖಿ || ೧೨ ||

ಕರೆಸಿಕೊಳ್ಳದೆ ಹೋಹುದನುಚಿತ- |
ವರಸಿ ಮರುಳೆಂದೆನ್ನದಿರು ದಿಟ |
ಕರೆಸಿಕೊಳಬೇಕೆಂಬುದಿಲ್ಲ ನಿಜಾನುರಾಗದಲಿ ||
ಗುರುಗೃಹಕೆ ಪಿತೃಗೃಹಕೆ ಪತಿಪುಂ- |
ದಿರಕೆ ದೇವರಿಗಿನ್ನು ಬಣ್ಣಿಸ- |
ಲರಿಯೆನೆನ್ನರ್ತಿಯನು ಸಲಿಸುವುದೆಂದಳಿಂದುಮುಖಿ || ೧೩ ||

ಅಲ್ಲಿಗೆನ್ನಯ ತಂಗಿಯರು ನಿಜ |
ವಲ್ಲಭರು ಸಹಿತೈದುವರು ಹುಸಿ- |
ಯಲ್ಲ ನಾವಿರಲೇಕೆ ಮನೆಯಲಿ ಕೆಡುವುದೇನಿಂದು ||
ಸಲ್ಲದೆನೆ ಬಹುಕಾಲ ಕಾಣದೆ |
ನಿಲ್ಲದೆನ್ನಯ ಚಿತ್ತ ನೀನೇ |
ಒಲ್ಲೆ ಬಿನ್ನಹಮಾಡಲಂಜುವೆನೆಂದಳಬುಜಾಕ್ಷಿ || ೧೪ ||

ಏಳು ಸಾಕೇಳೆಲ್ಲವನು ತಾ |
ಕೇಳಿದೆನು ತಪ್ಪೇನು ನಿನ್ನಯ |
ಹೇಳಿಕೆಗೆ ಹೊರೆಯಿಲ್ಲ ಹೋಗಲುಬಹುದೆ ಬಾಂಧವರ ||
ಆಲಯಕೆ ಮುದಮುಖರು ರೋಷಕ- |
ರಾಳದೃಷ್ಟಿಯಲೀಕ್ಷಿಸದೆ ಒರ- |
ಹೇಳಿ ದಿಟವನು ಮಾಡದಿರ್ದೊಡೆ ವನಿತೆ ಕೇಳೆಂದ || ೧೫ ||

ನೆನೆದೆ ನಾನಿದನೀಗಳೀ ಮಾ- |
ತಿನಲಿ ಮರೆದಿರ್ದುದನು ನಿನ್ನಯ |
ಜನಕನೆನ್ನನು ವಿಶ್ವಸೃಗ್ಯಜ್ಞೋತ್ಸವದ ನಡುವೆ ||
ವನಿತೆ ತಾ ಬರಲೇಳದಭಿವಾ- |
ದನವ ಮಾಡದೆ ಕುಳ್ಳಿರಲು ಕಡು |
ಮುನಿದು ಮಾತಿನ ಮೊನೆಯ ಗಾಯದಿ ನೋಯಿಸಿದನೆನ್ನ || ೧೬ ||

ಅಂಬಿನಲಿ ಮೇಣಿರಿದಡಾ ವ್ರಣ |
ತುಂಬಲಾ ವ್ಯಥೆ ತೆರಳುವುದು ದುರು- |
ದುಂಬಿದುರ್ಜನರಿಂದ ಮಾತಿನ ಬಾಣ ತಾಗಿದರೆ ||
ಅಂಬುಜಾನನೆ ತೆರಳದಾ ವ್ಯಥೆ |
ಯಿಂಬುಗೊಂಡೊಡಲೊಳಗೆ ಮನವನು |
ಚುಂಬಿಸು[1]ವುದನು ತೆರಳುವನ್ನೆಗ ಮರೆಯಲರಿದೆಂದ || ೧೭ ||

ಮರೆವೆನೆಂದೆನು ನಿಂದಿಸಿದಡದ- |
ನರಿಯದಜ್ಞಾನಿಗಳ ಕೃತವನು |
ಮರೆವೆನಾನೆಂತೆನ್ನ ಭಕ್ತರ ನಿಂದೆಯನು ಮಾಡೆ ||
ನೆರೆ ಮಹಾರೌರವದಲವರನು |
ಮುರಿದು ನೂಕದೆ ಕಲ್ಪಶತದಲಿ |
ಮರುಗಿಸದೆ ಮನದಳಲು ಹಿಂಗದು ಮಹಿಳೆ ಕೇಳೆಂದ || ೧೮ ||

ಆಗದೆನಗೆಲೆ ಸತಿ ಗಮನ ನೀ |
ಹೋಗದಿರು ನಿಜಬಂಧುಜನದನು- |
ರಾಗ ಮುನ್ನಿನ ಪರಿಯಲಿರದಸ್ಮದ್ವಿರೋಧದಲಿ ||
ತಾಗಿ ಬಾಗಲದೇಕೆ ದೇಹ- |
ತ್ಯಾಗಪರಿಯಂತಹುದವಜ್ಞತೆ |
ಮೇಗರೆಯ[2] ಮಾತಲ್ಲವೆಲೆ ನಳಿನಾಕ್ಷಿ ಕೇಳೆಂದ || ೧೯ ||

---

1 ಚುಂಬಿಸು=ನಾಟು. 2 ಮೇಗರೆಯ=ತೇಲಿಸಿ ಆಡಿದ.

ನೋಡಲಾಗದೆ ಬಂಧುವರ್ಗದ |
ಮಾಡುವುಪಚಾರವನು ನಿಮ್ಮಡಿ |
ಗೂಡಿ ಗಮನವನರ್ತಿಸುತ್ತಿದೆ ನನ್ನ ಮನವಿರದೆ ||
ಬೇಡ ಹೋಗದಿರೆಂಬ ವಚನವ- |
ನಾಡಿ ಕೆಡಿಸದಿರೆಂದು ಪತಿಯನು |
ಕಾಡಿದಳು ಕಾಲ್ವಿಡಿದು ಕಂಬನಿದುಂಬಿ ಕಮಲಾಕ್ಷಿ || ೨೦ ||

ಹಲವು ಪರಿಯಲಿ ಕಾಂತೆ ನಿಜಕಾ- |
ದಲಗೆ[1] ಕರುಣೆಯ ತೋರಿ ಚಿತ್ತವ- |
ನೊಲಿಸಲಾರದೆ ಬಂದು ದರುಶನಪಾರವಶ್ಯದಲಿ ||
ನಿಲಯವನು ಹೊರವಂಟಳಂಗನೆ |
ಬಳಲಿ ಬಿಸುಸುಯ್ವುತ್ತ ಹೋಗಲು |
ಬಳಿಯಲೈದಿದುದೀಶ್ವರಾಜ್ಞೆಯ ಮೇಲೆ ಪರಿವಾರ || ೨೧ ||

ಆ ಮಹಾಧ್ವರದೆಡೆಗೆ ಭುವನ |
ಸ್ತೋಮವಂದಿತೆ ಬರಲು ಬಹಳ |
ಪ್ರೇಮದಲಿ ಕಾಣುತ್ತ ತಾಯ್ತಂಗಿಯರು ತಮತಮಗೆ ||
ರೋಮಹರುಷದಲಪ್ಪಿದರು ಸು- |
ಕ್ಷೇಮವಾರ್ತೆಗಳೆಸೆಯಲುಳಿದಂ- |
ತಾ ಮಹಾನೆರವಿಯಲಿ ಮೌನದಲಿರ್ದುದಖಿಳಜನ || ೨೨ ||

ಎಡೆಗಲಿಸಿ ನಿಜರುದ್ರಭಾಗವ |
ಕೊಡದೆ ಮಾಡುವ ಮಖವನೀಕ್ಷಿಸಿ |
ಸುಡುವವೊಲು ನೋಡಿದಳು ಸುರರನು ಸಕಲಋತ್ವಿಜರ ||
ಮೃಡನನುಳಿದುಂಬವರಿಗಾಹುತಿ- |
ಗೊಡುವರಿಗೆ ತತ್ಫಲವನಿದೊ ಕೈ- |
ಯೊಡನೆ ಕಾಣಿಸಿಕೊಡುವೆನೆನುತುರಿದೆದ್ದಳಬುಜಾಕ್ಷಿ || ೨೩ ||

---

1 ಕಾದಲ=ಪತಿ.

ಸಾಕು ನಿಮ್ಮುಪಚಾರವೆನುತವೆ |
ನೋಕಿದಳು ಪೀಠವನು ತಾನಿರ-|
ದೋಕರಿಸಿ[1]ದಳು ಕಂಗಳಲಿ ಕೆಂಗಿಡಿಯುಸಡಿಗಡಿಗೆ ||
ಲೋಕನಿಕರವನಿರದೆ ಸುಡುವ ಪಿ-|
ನಾಕಿಯರ್ಧಶರೀರ ತಾನೆಂ- |
ಬಾಕೃತಿಯ ತೋರಿದಳು ತಳೆದಳು ರೌದ್ರಮಯರಸವ || ೨೪ ||

ವಿಕಳಮತಿ ಕೇಳೆಲವೊ ವಿಶ್ವಾ-|
ತ್ಮಕನಲಾಯ್ತೆ ವಿಭೇದ ವಿಶ್ವ- |
ಪ್ರಕರಬಾಂಧವನೊಳಗೆ ಬಲಿದುದೆ ಬಹಳವಿದ್ವೇಷ ||
ಸಕಲಲೋಕಾಧೀಶ್ವರೇಶ್ವರ |
ನಿಕರಸೇವಿತಪಾದಪೀಠನೊ- |
ಳಕಟ ನೀನೆಲೆ ಬಣಗೆ[2] ಬೆರತೆಯಲಾ ಗುರುತ್ವದಲಿ || ೨೫ ||

ಮಂದಮತಿಗಳು ಜರೆದು ಹಿರಿಯರ |
ನಿಂದಿಸುತ್ತಿರೆ ಹೊರವಡುವುದ- |
ಲ್ಲಿಂದ ಕಿವಿಗಳ ಮುಚ್ಚಿಕೊಂಡಲ್ಲದಡೆ ಸೀಳುವುದು ||
ನಿಂದಿಸುವ ನಾಲಗೆಯನೆರಡರೊ- |
ಳೊಂದು ನೆರೆ ಕೈಗೂಡದಿರ್ದಡೆ |
ಹೊಂದುವುದು[3] ಸದ್ಧರ್ಮವಲ್ಲಿಯೆಯೆಂದಳಬುಜಾಕ್ಷಿ || ೨೬ ||

ಸಾಕು ನಿನ್ನಿಂದಾದ ದೇಹವಿ- |
ದೇಕೆ ಸುಡು ಸುಡು ಮುನಿದ ಹೊತ್ತು ಪಿ- |
ನಾಕಿ ದಕ್ಷನ ಮಗಳಲಾ ನೀನೆಂಬನೆನ್ನೊಡನೆ ||
ಲೋಕದಲಿ ನಿಂದ್ಯಾಶನವನವಿ- |
ವೇಕದಲಿ ಮರೆದುಂಡರದ ಮುಗು- |
ಳೋಕರಿಸಿದಡೆ ಶುದ್ಧಿಯೆಂದಳು ಕಮಲದಳನಯನೆ || ೨೭ ||

1 ಓಕರಿಸು=ಕಾರು. 2 ಬಣಗು = ನೀಚ.
3 ಹೊಂದುವುದು=ಸಾಯುವುದು.

ಎಂದು ಸತಿ ಸಕ್ರೋಧಲೋಚನೆ |
ತಂದೆಯೊಡನೆ ಮಹಾಧ್ವರದ ಜನ- |
ವೃಂದವೀಕ್ಷಿಸಲೆದ್ದು ಬಡಗಣ ದೆಸೆಯ ಭೂಮಿಯಲಿ ||
ಇಂದುಮೌಳಿಯ ಪದಸರೋಜ |
ದ್ವಂದ್ವವನು ಹೃದಯದಲಿ ಹಿಡಿದರ- |
ವಿಂದಮುಖಿ ಕುಳ್ಳಿರ್ದಳನುಪಮಯೋಗನಿಷ್ಠೆಯಲಿ || ೨೮ ||

ಧರಿಸಿದಳು ದೇಹದಲಿ ಸತಿ ದು- |
ರ್ಧರಮರುತ್ಪಾವಕನನಂಗೀ- |
ಕರಿಸಿದಳು ಮನದೊಳಗೆ ಸಾಕ್ಷಾತ್ಕರಿಸಿ ಶಿವಪದವ ||
ಇರಲಿರಲು ಯೋಗಾಗ್ನಿಯಲಿ ತನು- |
ವುರಿದುದಾ ಕ್ಷಣಕದನು ಕಂಡಾ |
ನೆರವಿ ಬೈದುದು ದಕ್ಷನನು ಹಾಯೆನುತೆ ಮಿಗೆ ಮರುಗಿ || ೨೯ ||

ಗಗನದಲಿ ಭೂಮಿಯಲಿ ದಶದಿ- |
ಕ್ಕುಗಳೊಳಗೆ ಹಾಹಾಮಹಾರವ |
ಬಿಗಿದುದೋರಂತೊದರಿದರು ಸುರನರಮುನೀಶ್ವರರು ||
ಮಗಳ ಮರಣವನೀಕ್ಷಿಸುತ ಮೈ- |
ದೆಗೆಯನೀ ದುರ್ಬುದ್ಧಿಯೆನುತಾ |
ಜಗದ ಮಾತೆಯ ಕೇಡಿನಲಿ ಮರುಗಿದುದು ಮೂಲೋಕ || ೩೦ ||

## ೨೩. ವಿರೂಪಾಕ್ಷದರ್ಶನ

[ವೀರಶೈವಕವಿಗಳಲ್ಲಿ ಹಂಪೆಯ ಹರಿಹರದೇವನು ಜೈನಕವಿಗಳಲ್ಲಿ ಆದಿಪಂಪನಷ್ಟೇ ಗೌರವಾಸ್ಪದನು. ಆತನು ೧೨ನೆಯ ಶತಮಾನದ ಮಹಾಕವಿಗಳಲ್ಲಿ ಒಬ್ಬನು. ಆತನು ಗಿರಿಜಾಕಲ್ಯಾಣ, ಪಂಪಾಶತಕ, ಶಿವಗಣದ ರಗಳೆಗಳು, ಮುಡಿಗೆಯ ಅಷ್ಟಕ ಎಂಬ ಗ್ರಂಥಗಳನ್ನು ಬರೆದಿರುವನು. ಆತನು ಬರೆದ ಪ್ರಾರಂಭದ ರಗಳೆಕಾವ್ಯಗಳಿಂದ ಜನರು ಆತನನ್ನು ರಗಳೆಯ ಕವಿಯೆಂದು ತೆಗಳಲು ಗಿರಿಜಾಕಲ್ಯಾಣವೆಂಬ ವಸ್ತುಕಕಾವ್ಯವನ್ನು ರಚಿಸಿ ಯಶೋವಂತನಾದನು. ಪಿಟಿಕುಳಕ್ಷಳ ನಿಬಂಧನೆಯನ್ನು ಕಿತ್ತೊಗೆದು ಹೊಸ ಕ್ರಮವನ್ನು ಹೊರಡಿಸಿದವನು ಈತನು. ಈತನ ಗಿರಿಜಾಕಲ್ಯಾಣವು ಸರಸವಾಗಿಯೂ ಸರಳವಾಗಿಯೂ ಇರುವುದರಿಂದ ಅದು ಸಾಹಿತ್ಯಪ್ರೇಮಿಗಳ ವಿಶೇಷಾದರಣೆಗೆ ಪಾತ್ರವಾಗಿದೆ. ಇಲ್ಲಿರುವ 'ವಿರೂಪಾಕ್ಷದರ್ಶನ'ವು ಆ ಕಾವ್ಯದ ನವಮಾಶ್ವಾಸದಲ್ಲಿದೆ.]

ಗಿರಿಸುತೆಯಂ ಕಾಣ್ಬನ್ನಂ |
ವರಪರಮಬ್ರಹ್ಮಚರ್ಯದಿಂದಂ ತಾನಿ- ||
ರ್ದಿರವಂ ತೋರುವ ತೆರದಿಂ |
ಗಿರಿಶಂ ವಟುವೇಷಮಂ ವಿರಾಜಿಸೆ ತಳೆದಂ || ೧ ||

ಮಿಗೆ ಶೀತಾಂಶು ಚಕೋರಿಯಲ್ಲಿಗೆ ವಸಂತಂ ರಾಜಿಪುದ್ಯಾನದ- |
ಲ್ಲಿಗೆ ಸೂರ್ಯಂ ಸರಸೀಜದಲ್ಲಿಗೆ ವರಪ್ರಾಣಾನಿಲಂ ದೇಹದ- ||
ಲ್ಲಿಗೆ ಮೇಘಂ ಶಿಖಿ[1]ಯಲ್ಲಿಗೊಪ್ಪುವ ಮರಾಳಂ ಪೂರ್ಣಕಾಸಾರದ- |
ಲ್ಲಿಗೆ ಬರ್ಪಂತೆ ಭವಾನಿಯಲ್ಲಿಗಭವಂ ಬಂದಂ ಜಗದ್ವಲ್ಲಭಂ || ೨ ||

ಬರೆ ಗಿರಿಶಂ ವಸಂತಋತುವಲ್ಲದೊಡಂ ಮುದದಿಂದೆ ಭೋಂಕನಂ- |
ಕುರಿಸಿತು ಮಾವು ಪಲ್ಲವಿಸಿತಲ್ಲಿಯಶೋಕೆ ವಸಂತದೂತಿಯೊ- ||
ಪ್ಪಿರೆ ನೆರೆ ಪೂತುದನ್ಯಭೃತ[2]ನುನ್ನತಿಯಿಂ ಕರೆದತ್ತು ಮಲ್ಲಿಕಾ |
ಪರಿಮಳಭಾರದಿಂ ಕುಸಿದು ಮೆಲ್ಲನೆ ತೀಡಿತು ದಕ್ಷಿಣಾನಿಲಂ || ೩ ||

---

1 ಶಿಖಿ=ನವಿಲು.　　2 ಅನ್ಯಭೃತ=ಕೋಗಿಲೆ.

ಜಯೆವಿಜಯೆ[1]ಗಳಿದು ಪೊಸತತಿ- |
ಶಯವೀ ಶಿಶಿರದೊಳಿದೇಂ ಭವಾನಿ ವಸಂತೋ- ||
ದಯಸೂಚನೆಯಾದುದು ನಿ- |
ಮ್ಮಯ ಪುಣ್ಯತಪಃಪ್ರಭಾವಕಾರಣಮಲ್ತೇ || ೪ ||

ಎನುತಿರೆ ಬಂದು ಭಾವಿಸಿ ತಪೋವನಮಂ ಶಶಿಮೌಳಿ ಪೊಕ್ಕು ಮೆ- |
ಲ್ಲನೆ ಬರುತುಂ ಪಥಶ್ರಮಮನಾಂತು ಬಳಲ್ದವೊಲಾಗಿ ತೇಂಕುತುಂ ||
ಮನದೊಳನೂನಸಂಪದಮನೆಯ್ದುತುಮೀಕ್ಷಿಸುತಿರ್ಕೆಲಂಗಳಂ |
ಘನಮಹಿಮಂ ಸ್ವತಂತ್ರವಿಭು ಪೊರ್ದಿದನೊಂದು ವಿನೂತ್ನ ಚೂತಮಂ || ೫ ||

ತರಳನಪೂರ್ವಿಗನತಿಥಿ |
ಸ್ವರೂಪನೀಷದ್ವಿಭೂತಿಲಸಿತಲಲಾಟಂ ||
ವರವಿಪ್ರನೆನುತೆ ಬಂದಾ- |
ದರಿಸಿದರೊಲವಿಂದೆ ಚರಣತಳಮಂ ತೊಳೆದರ್ || ೬ ||

ಎಳವಾಳೆಯ ಸುಳಿಯೆಲೆಯೊಳ್ |
ನಳನಳಿಸುವ ಕಂದಮೂಲಮಂ ನವಜಂಬೂ- ||
ಫಳಮಾಮ್ರಫಳಂ ಕದಳೀ |
ಫಳಂಗಳಂ ತೀವಿ ತಂದು ಮುಂದಿಳಿಪುತ್ತುಂ || ೭ ||

ಎಲೆಯತಿಥಿ ಬಳಲ್ದಿರೆಮ್ಮೀ |
ಫಲದಿಂದಂ ನಿಮ್ಮ ಪಸಿವನುಡುಗಿಸಿಯೆನೆ ಹೈ ||
ಫಲಮಂ ಕೈಕೊಂಡಪೆವೀ |
ಲಲನೆಯದಾರ್ ತಪವಗಣ್ಯಮಾವನ ಪುಣ್ಯಂ || ೮ ||

ಇವರಿರವಿನ ಚಿಂತಾರತಿ |
ನಿವಗೇಕೀ ಕ್ಷುಧೆಯನೀ ಪಥಶ್ರಮಮಂ ತೀ- ||
ರ್ಚುವ ಬಗೆಯಂ ಬೇಗಂ ಮಾ- |
ಡುವುದೆನೆ ನಸುನಗುತೆ ವಿಪ್ರನಂದಿಂತೆಂದಂ || ೯ ||

---

1 ಜಯೆವಿಜಯೆ=ಪಾರ್ವತಿಯ ಸಖಿಯರು.

ಬೆಸಗೊಂಡೊಡೆ ದೋಷಮೆಯಿೞ |
ಪೊಸಕನ್ನೆ ತಪೋನಿರೋಧದಿಂದಿದೆರ್ೞಣೆ ಸೈ- ||
ರಿಸಬರ್ಪುದೆ ತಪಮಂ ಮಾ- |
ಣಿಸುವವರಿಲ್ಲಾ ಸಹಾಯಸಂಪದಮಿಲ್ಲಾ || ೧೦ ||

ಎನೆ ಕೇಳ್ದು ಗಿರಿಜೆ ಮನದೊಳ್ |
ಮುನಿಯುತ್ತುಂ ಜಪವನುಡುಗಿ ಜಪಮಾಲೆಯನೊ- ||
ಯ್ಯನೆ ಕೈಯೊಳೋಸರಿಸಿ[1] ಮೆ- |
ಲ್ಲನೆ ಕಣ್ದೆರೆಯುತ್ತೆ ಕಂಡಳಾ ವರವಟುವಂ || ೧೧ ||

ಇಂದುಗೆ ಮೇಘಂ ಕವಿದೊಡ- |
ಮಿಂದೀ ಲೋಕಕ್ಕೆ ತಣ್ಪು ತಪ್ಪದ ತೆರದಿಂ- ||
ದಿಂದುಧರಂ ವರವಟುವೇ- |
ಷಂದಳೆದೊಡಮಗಜೆಗಾದುದತಿಹರ್ಷಮುಖಂ || ೧೨ ||

ಈ ಸುಕುಮಾರತೆಯಿೞ ಸಲ- |
ವೀ ಸುಕರತೆಯಿೞ ನವೀನಯೌವನಮದವೀ ||
ಭಾಸುರತೆಯಿೞ ಸುಧಾಮಯ- |
ವೀ ಸುಖದೊಳ್ ತಪವಿದೆಂತು ಬಂದುದು ಮುಗುದೇ || ೧೩ ||

ನಿನಗೇಕೀ ತರುಣತೆಯೊಳ್ |
ಘನತಪವೆಡೆಗೊಂಡುದಕಟ ನವಲತೆಯಂ ಸೂ- ||
ರ್ಯನ ಬಿಸಿಲಿಂ ಕೊರಗಿಪ ದು- |
ಷ್ಟನನೆನಗರಿಪಬಲೆ ಸೌಕುಮಾರ್ಯಾಭರಣೇ || ೧೪ ||

ಎಳಗೆಂಪನುಗುಳ್ವ ಮೃದುಕೋ- |
ಮಳಪದಕಮಳಂಗಳೀಗಳತಿಕಠಿನಮೆನಿ- ||
ಪ್ಪಿಳೆಯೊಳ್ ಹರಹರ ಕಲ್ನೆಲ- |
ಕಳವಟ್ಟುವಿವೆಂತು ಬಾಲಹಂಸೀಯಾನೇ || ೧೫ ||

---

1 ಓಸರಿಸು=ಬಂದ ಕಡೆಗೆ ಇಡು.

ಮಿಸುಗುವ ಶಶಿವದನಂ ಕಡು- |
ವಿಸಿಲಿಂ ಕೊರಗಿತ್ತು ಕುಸುಮಮಾಳಿಕೆಯಿಂ ರಂ- ||
ಜಿಸುವ ಕಚಭಾರಮಯ್ಯೋ |
ಪೊಸಜಡೆಯಂ ಪಡೆದುದಕಟ ಘನಯೌವನದೊಳ್ || ೧೬ ||

ಬಿಸಿಲೆನ್ನದೆ ಮಳೆಯೆನ್ನದೆ |
ಶಿಶಿರಮಿದೆನ್ನದೆ ತೃಷೋನ್ನತಿ ಕ್ಷುಧೆ ನಿದ್ರಾ- ||
ವಿಸರಮುಮಂ ನೆರೆಗೆಲ್ದೀ |
ವಸುಮತಿ ಬೆರಗಾಗೆ ತಪದೊಳಿರ್ಪವರುಂಟೇ || ೧೭ ||

ವನಜಾನನೆಯೇರುಂಜ- |
ವ್ವನದೊಳ್ ವನದೊಳ್ ನಿರೋಧದೊಳ್ ಪೇಳಿಂತಾ- ||
ವನನುದ್ದೇಶಿಸಿ ತಪಮಿದ- |
ನೆನಗರಿಪಿದೊಡೇನು ದೋಷಮೋ ಮೃಗನಯನೇ || ೧೮ ||

ಬೆಸಗೊಂಡಪನಮಳದ್ವಿಜ- |
ನುಸಿರಲ್ಕಾಂ ಬಾರದುಸಿರದಿರಬಾರದೆನು- ||
ತ್ತಸದೃಶತಪಮಂ ಮನದು- |
ಬ್ಬಸದಿಂದೆ ಭವಾನಿ ಮಾಣ್ದು ಮೆಲ್ಲನೆ ನುಡಿದಳ್ || ೧೯ ||

ಬಗೆವೆರ್ಚಿ ಕೇಳುತಿರ್ದಪೆ |
ಮಿಗೆ ಪೇಳ್ದಪೆನೆಲೆಲೆ ಧೂರ್ತವಿಪ್ರನೆ ಕೇಳ್ ಶಂ- ||
ಭುಗೆ ಕಾರುಣ್ಯಾಬ್ಧಿಗೆ ಶೂ- |
ಲಿಗೆ ಕರುಣಂ ಪುಟ್ಟುವಂತೆ ತಪದಿಂದಿರ್ಪೆಂ || ೨೦ ||

ಎನುತುಂ ಗದ್ಗದಿಸುತೆ ಪುಳ- |
ಕನಿಕಾಯಮನಾನುತಶ್ರುವಂ ಕಳೆಯುತ್ತುಂ ||
ಘನಹರ್ಷಚಿತ್ತೆಯಾಗು- |
ತ್ತೆ ನಗೇಶ್ವರಪುತ್ರಿ ಶಂಕರನ ಪೆಸರ್ಗೊಂಡಳ್ || ೨೧ ||

ಅಕ್ಕಕ್ಕೆ[1] ಕಾಮಹರನೊಳ್ |
ಮುಕ್ಕಣ್ಣನೊಳಖಿಳವೇದಶಾಸ್ತ್ರಕ್ರಮಮಂ ||
ಮಿಕ್ಕವನೊಳ್ ಪಿತೃವನದೊಳ್ |
ಪೊಕ್ಕವನೊಳದೆಂತು ಚಿತ್ತವಿಟ್ಟೆ ಲತಾಂಗಿ || ೨೨ ||

ಭೀಕರವಪ್ಪ ಶೂಲಿಯಭಿಲಾಷೆಯೊಳೀ ತಪವಾತನೇಕೆ ನೀ- |
ನೇಕೆ ಕೃಪಾಣವೇಕೆ ಲತೆಯೇಕೆ ಲಸತ್ಕರಿಯೇಕೆ ರಂಭೆ[2] ತಾ- ||
ನೇಕೆ ಕೃಶಾನುವೇಕೆ ಪೊಸಪೂವಿನ ಮಾಲೆಯದೇಕೆ ಭಾನುವೇಕಾ |
ಕುಮುದಂಗಳೇಕೆ ಸಿಡಿಲೇಕೆ ಮರಾಳನದೇಕೆ ಲೋಕದೊಳ್ || ೨೩ ||

ನೀನಿನಿಯಳ್ ವಿಷಮಾತಂ |
ನೀನತಿಮೃದು ಕಠಿನಗುಣಗಣಾಶ್ರಯನಾತಂ ||
ನೀನಬಲೆಯುಗ್ರನಾತಂ |
ನೀನುರುತರಭೀರು ಸರ್ಪಭೂಷಣನಾತಂ || ೨೪ ||

ಪುಲಿದೊವಲುಡಿಗೆಯ ಹಾವಿನ |
ನೆಲೆದೊಡಿಗೆಯ ನೊಸಲ ಕಣ್ಣ ಖಟ್ವಾಂಗದ ಪಂ- ||
ದಲೆ[3]ಗಳ ಮಾಲೆಯ ಶೂಲದ |
ಕಲಿಗಂಜದೆ ಮನಮನೆಂತು ಮಾಡಿದೆ ಮುಗುದೇ || ೨೫ ||

ತಪವಂತದಿರ್ಕೆ ಮಾಡುವ |
ಜಪವಿರ್ಕೆ ಮೃಗಾಂಕಮೌಳಿಯಂ ಭರದಿಂ ಧ್ಯಾ- ||
ನಿಪುದಿರ್ಕೆ ಶಂಭುವಂ ನಿಂ- |
ದಿಪುದಂ ಕೇಳ್ವೊಂದು ಪಾಪಮಿಂದೆನಗಾಯ್ತೋ || ೨೬ ||

---

1 ಅಕ್ಕಕ್ಕೆ=ಇರಲಿರಲಿ. 2 ರಂಭೆ=ಬಾಳೆ.
3 ಪಂದಲೆ=ಹಸಿರುಂಡಗಳು.

ಘೋರತಪದಲ್ಲಿ ಕೋಪಿಸ- |
ಬಾರದು ತಾಂ ತಪದ ಕೇಡು ಪತಿಸಿಂದೆಯುಮಂ ||
ಸೈರಿಸಬಾರದೆನುತ್ತೆ ವಿ- |
ಚಾರಮನುಳಿದಗಜೆ ಮನದ ಮುಳಿಸಿಂದಾಗಳ್ || ೨೭ ||

ಆದ ನಿರೋಧದ ನಿಂದೆಯ- |
ನಾದರಿಸದೆ ಭಸಿತದಿಂದೆ ವಿಪ್ರನನಿಡೆ ತಾಂ- ||
ಪೋದುದು ವಟುವೇಷಂ ಶಿವ- |
ನಾದೊಡದೇಂ ಪುಸಿ ದಿಟಕ್ಕೆ ನಿಲ್ವುದೆ ಜಗದೊಳ್ || ೨೮ ||

ಮುಗಿಲ ತೆರೆ ಸರಿದ ಶಶಿಯುಂ- |
ತೊಗೆದ ತಮಂ ತೆಗೆದ ತರುಣತರಣಿಯ ತೆರದಿಂ ||
ಪೊಗೆ ತಳ್ಗಿ[1]ದಗ್ನಿಯಂತಿರೆ |
ಮಿಗೆ ವೇಷಂ ತೊಲಗಿ ತೊಳಗುತಿರ್ದಂ ರುದ್ರಂ || ೨೯ ||

ಸರಿದುದು ಪುಸಿವೇಷದ ತೆರೆ |
ಸುರಿದುದು ಕೆಯ್ವಾರ ತೆರದೆ ಹೂವಳೆ ಸರಸಂ- ||
ಬರಿದುದು ಜೀರಿಗೆ ಬೆಲ್ಲದ |
ಪರಿಯಿಂ ಮುಳಿದಿಟ್ಟ ಭಸಿತಮುದೆ ಮದುವೆಯವೊಲ್ || ೩೦ ||

1 ತಳ್ಗು = ಕ್ಷೀಣಹೊಂದು.

# ೨೪. ಉತ್ತಮ ಧರ್ಮ

[ಮಂಗರಸನು ವರ್ಣಕಕಾವ್ಯಗಳನ್ನು ಬರೆದ ಜೈನಕವಿಗಳಲ್ಲಿ ಅತಿಪ್ರಸಿದ್ಧನಾದವನು. ಆತನು ಕಲ್ಲಹಳ್ಳಿಯ ನಾಯಕನ ವಂಶದವನು; ೧೬ನೆಯ ಶತಮಾನದ ಆದಿಯಲ್ಲಿದ್ದಂತೆ ಆತನ ಕಾವ್ಯಗಳಿಂದಲೇ ಗೊತ್ತಾಗಿದೆ. ಆತನು ಜಯನೃಪಕಾವ್ಯ, ಪ್ರಭಂಜನಚರಿತೆ, ಶ್ರೀಪಾಲಚರಿತೆ, ಸಮ್ಯಕ್ತ್ವಕೌಮುದಿ, ಸೂಪಶಾಸ್ತ್ರಗಳನ್ನು ರಚಿಸಿದನು. ಜಯನೃಪಕಾವ್ಯವು ಕನ್ನಡ ಸಾಹಿತ್ಯದಲ್ಲಿ ಅಪೂರ್ವವೆನ್ನಬಹುದಾದ ಪರಿವರ್ಧಿನೀಷಟ್ಪದಿಯಲ್ಲಿ ರಚಿತವಾಗಿದೆ. ಜಯನೃಪನಿಗೆ ಒಬ್ಬ ಯತಿರಾಯನು ಬೋಧಿಸಿದ 'ಉತ್ತಮಧರ್ಮ'ವೆಂಬ ಈ ನೀತಿಯು ಆ ಕಾವ್ಯದ ದಶಮಸಂಧಿಯಲ್ಲಿ ದೊರೆಯುವುದು.]

ಎರಕಂ[1] ಮನದೊಳೊದವೆ ತಾಮರೆಗಾ- |
ಲ್ಗೆರಗಿ ಕರಂ ಭೀತಿಯೊಳಿರ್ಪರ್ ನಾ- |
ಡೆರೆಯನ ಚಿತ್ತದ ಭಕ್ತಿಲತೆಗೆ ಸದ್ಧರ್ಮಾಮೃತಜಲಮಂ ||
ಎರೆದು ಸಲಹಬೇಕೆನುತುಂ ಸತ್ಯ- |
ಕ್ಕೆರವಟ್ಟೆ[2]ನಿಸುವ ಜತಿರಾಯಂ ಕ- |
ಣ್ದೆರೆದಾನನಮಂ ನೋಡಿ ಬಳಿಕ ಹರಿಸಂ ಮಿಗೆ ಹರಸಿದನು || ೧ ||

ಪರಸಿದ ಯತಿಕುಲತಿಲಕಗೆ ಕೈಮುಗಿ- |
ದರಮಗನಿಂತೆಂದಂ ಜತಿರಾಯಾ |
ಧರೆಯೊಳ್ ಧರ್ಮದೊಳುತ್ತಮಧರ್ಮಮದಾವುದು ನಿರವಿಸೆನೆ ||
ಒರೆದಂ ಹಿಂಸಾನೃತವಂಚನಪರ |
ತರುಣೀರತಬಹುಕಾಂಕ್ಷೆಗಳಂ ನೆರೆ |
ಪರಿಹರಿಸುವುದುತ್ತಮಮೆನುತವರ ತೆರನನಿರದಿಂತೆಂದು || ೨ ||

ಕೊಲೆಯಿಂ ಸಾವೆಡೆಯೊಳಗಾ ಜೀವಕೆ |
ಸಲೆ ದುಃಖಂ ಜನಿಯಿಪುದಾ ದುಃಖದ |
ಫಲಮಾ ಕೊಂದವನಂ ನರಕಾವನಿಯೊಳಗುದಯಿಸಿ ಬಳಿಕ ||
ಪಲವಗಲಪ್ಪನ್ನೆವರಂ ದುಃಖದ |
ಜಲನಿಧಿಯೊಳ್ ತೇಂಕಾಡಿಪುದದರಿಂ[3] |
ಕೊಲೆಯಂ ಮರೆವುದು ಸದ್ಧರ್ಮ ಕಣಾ ಭವ್ಯಜನೋತ್ತಂಸಾ || ೩ ||

---

1 ಎರಕ=ಭಕ್ತಿ; ಪ್ರೇಮ. 2 ಎರವಟ್ಟು=ಆಶ್ರಯ.
3 ತೇಂಕಾಡಿಪುದು=ತೇಲಾಡಿಸುವುದು.

ದೈವಾಧೀನದೆ ಕಾಲಕ್ಕೊದಗುವ |
ಸಾವಂ ಮುನ್ನವೆ ನೆನೆನೆನೆದನಿಶಂ |
ನೋವ್ಪ್ರತ್ತಿಹುದಾತ್ಮಂ ಮತ್ತಾ ನೋವನ್ಯರಿನೊದವಿದೊಡೆ ||
ನೋವನವರ ಮೇಲೆಂತುಟು ಬಿಡುವುದು |
ಜೀವನಮಿಹಪರದೊಳಗದರಿಂದಾ |
ಜೀವವ್ಯಥೆಯಂ ಬಿಡುವುದೆ ಧರ್ಮಂ ಭವ್ಯಜನೋತ್ತಂಸಾ || ೪ ||

ಕೊಂದ ಪಗೆಯನಾ ಕೊಲೆಯಿಂ ಸತ್ತವ- |
ನೊಂದಾಗಿರ್ದ ಹಿತವರ್ಗದಲಾಗಿಯು- |
ಮೊಂದಿನಿಸುಂ ಕೊಲ್ಲದೆ ಸುಮ್ಮನಿರರ್ ನಿಶ್ಚಯಮದರಿಂದ ||
ಒಂದಾಗುದಯಿಸಿ ಬಳಿದಾ ತನುವಂ |
ಹೊಂದಿಸಿದನನಾ ಜೀವಂ ಮುಂದಕೆ |
ಕೊಂದಿಕ್ಕದೆ ನಿರ್ನೆರ[1]ಮೆಂತಿರ್ಪುದು ಭವ್ಯಜನೋತ್ತಂಸಾ || ೫ ||

ಹಿಂದಣ ಭವದೊಳ್ವಾಯ[2]ಕ್ಕೆನ್ನಂ |
ಕೊಂದೆಯಲಾಯೆನುತುಂ ಕಡುಮುನಿಸಂ |
ತಂದು ಪಚಾರಿಸಿ ನಾನಾ ತೆರದುಪಸರ್ಗಮನಾ ಹಗೆಗೆ ||
ತಂದು ಕರಂ ಕೊಲ್ವುದು ಬಲ್ಗರ[3]ಮದ- |
ರಿಂದಾ ಹಿಂಸೆಯ ದಂದುಗ[4]ಮಂ ನೆರೆ |
ಸಂದೆಗಮಿಲ್ಲದೆ ಬಿಡುವುದು ಧರ್ಮಂ ಭವ್ಯಜನೋತ್ತಂಸಾ || ೬ ||

ಏನೇನವರಿಚ್ಛೈಸಿದ ವಸ್ತುವ- |
ನಾನದೆ[5]ಯೊಲಿದು ಕುಡುವುದತ್ಯುತ್ತಮ |
ದಾನಂ ತತ್ಫಲದಿಂ ಸುರಸುಖಮಪ್ಪುದು ನಿಜದೇಹಕ್ಕೆ ||
ತಾನೇ ಅತಿಹಿತವೆನಿಸುವ ಜೀವನ |
ದಾನದ ಫಲಮುಪವರ್ಗಮನಾಗಿಸಿ |
ಮಾನಿತಸೌಖ್ಯಮನೀಯದೆ ನಿಲ್ವುದೆ ಭವ್ಯಜನೋತ್ತಂಸಾ || ೭ ||

---

1 ನಿರ್ನೆರ=ಸುಮ್ಮಗೆ. 2 ವಾಯ=ಮೋಸ.
3 ಗರ=ಪ್ರೇತ. 4 ದಂದುಗ=ಕ್ಲೇಶ. 5 ಆನದೆ=ಪ್ರತಿಕೂಲಿಸದೆ.

ಕೊಲೆಯೆಂಬುದು ಸಂಸಾರಕೆ ಸಂಕಲೆ |
ಕೊಲೆಯೆಂಬುದು ನಾರಕದೊಳ್ಪಿರ್ದಲೆ |
ಕೊಲೆಯೆಂಬುದು ಭವಭವದೊಳ್ ಜೀವನಮಂ ಬಿಡದಡರ್ವ ಹೊಲೆ
ಕೊಲೆಯೆಂಬುದು ಘನತರದುಃಖದ ಬಲೆ |
ಕೊಲೆಯೆಂಬುದು ಭೀಭತ್ಸದಗುಂದಲೆ[1] |
ಕೊಲೆಯನದರಿಸುಳಿವುದೆ ಸದ್ಧರ್ಮಂ ಭವ್ಯಜನೋತ್ತಂಸಾ || ೮ ||

ಪುಸಿ ಪುಣ್ಯೋಪಾರ್ಜಿತಕನುಚಿತಮಾ |
ಪುಸಿ ನಾಲಗೆಯ ಕೊನೆಗೆ ಕತ್ತರಿಯಾ |
ಪುಸಿ ಪೃಥಿವಿಗೆ ಪುಳುವಗೆಯಾ ಪುಸಿ ನರಕದ ಕಾರಾಗಾರ ||
ಪುಸಿ ಪುಳುವಿನ ಕೊಂಡಕೆ ಸಂಗಡಮಾ |
ಪುಸಿಯತಿದುಃಖಕೆಯಾಡುಂಬೊಲಸಾ[2] |
ಪುಸಿಯಂ ಬಿಡುವುದೆ ಸದ್ಧರ್ಮ ಕಣಾ ಭವ್ಯಜನೋತ್ತಂಸಾ || ೯ ||

ಉಂಟಾದುದನಿಲ್ಲೆಂದಿಲ್ಲದುದನು- |
ಮುಂಟೆಂದಾ ಗುರುದೈವದ ಹೊರೆ[3]ಯೊಳ್ |
ತುಂಟತನದಿ ಹುಸಿದಾ ಹುಸಿ ತನಗೇಳೆಂಟುದಿವಸದೊಳಗೆ ||
ಕಂಟಕಮಂ ಮಾಳ್ಪುದು ಮರುಭವದೊಳ್ |
ಟೆಂಟಣಿಪುದು[4] ದುಃಖಮನದರಿಂದವೆ |
ಗೆಂಟಂ[5] ಮಾಡುವುದಾ ಹುಸಿಯಂ ಕೇಳ್ ಭವ್ಯಜನೋತ್ತಂಸಾ || ೧೦

ಮರೆದುಂ ಪುಸಿದು ನುಡಿವ ಹುಸಿ ಸಿರಿಯಂ |
ಪರಿಪಡಿಪುದು[6] ಸಂತಾನಂಗೆಡಿಸುವು- |
ದರನಂ[7] ತೆಗಳಿಸುವುದು ಪಳಿಯಂ ಪುಟ್ಟಿಸುವುದು ಮರುಭವಕೆ ||
ನೆರೆದುಃಖಂಬಡಿಪುದು ತಾನರಿದದ- |
ನುರೆಯೊರಲಿದೊಡದು ಮಾಡುವ ದುಃಖದ |
ತೆರನಂ ನಾನೇನೆಂದರಿಯೆಂ ಕೇಳ್ ಭವ್ಯಜನೋತ್ತಂಸಾ || ೧೧ |

---

1 ಆಗುಂದಲೆ=ಆಧಿಕ್ಯ. 2 ಆಡುಂಬೊಲ=ವಿಹಾರಸ್ಥಳ.
3 ಹೊರೆ=ಸಮೀಪ. 4 ಟೆಂಟಣಿಸು=ಒದಗಿಸು. 5 ಗೆಂಟು=ದೂರ.
6 ಪರಿಪಡಿಸು=ನಾಶವಡಿಸು. 7 ಅರ=ಧರ್ಮ.

ಕಳವಂ ಕನ್ನದ ಬಾಯೊಳಗರಿದೊಡೆ ।
ಪೊಳಲೊಳ್ ತಿರಿವ ತಳಾರರ್ ಕಂಡೊಡೆ ।
ಯಿಳೆಯಧಿಪತಿ ಕೇಳ್ದೊಡೆ ತಡೆಯದೆ ತಲೆಯಂ ಹೊಯಿಸಲ್ ಸತ್ತು ॥
ಇಳಿದು ನರಕಭೂಮಿಯ ಹೆರ್ಕುಳಿಯೊಳ್ ।
ಮುಳುಗಿ ನೆಗೆದು ಜೀವಿಸುತಿಹರದರಿಂ ।
ಕಳವಂ ಮರೆವುದು ಸದ್ಧರ್ಮ ಕಣಾ ಭವ್ಯಜನೋತ್ತಂಸಾ ॥ ೧೨ ॥

ಕಳವು ತನುವನಿರದೊಕ್ಕುವ ಕಳವಾ ।
ಕಳವು ನರಕದೊಳ್ ಕಾಡುವ ಕಳವಾ ।
ಕಳವು ತನಗೆ ಬೇಕೆಂದು ಬಗೆದು ಭಾವಿಪ ಮಾನಸವಿಕಳ ॥
ಕಳವುಜ್ಜ್ವಲಚಿತ್ತದ ಕಳಕಳವಾ ।
ಕಳವಿಳೆಗನ್ಯಾಯದ ಮೊಕ್ಕಳ[1]ವಾ ।
ಕಳವಂ ಬಿಡುವುದೆ ಸದ್ಧರ್ಮ ಕಣಾ ಭವ್ಯಜನೋತ್ತಂಸಾ ॥ ೧೩ ॥

ಗಂಡನಿರಿದು ಹಜ್ಜೆಗೆ ಬಲ್ಲೇಣಂ ।
ಕೊಂಡೆಲ್ಲರ್ ಚೀಃ ಎಂಬಂತೆಳೆವರ್ ।
ದಂಡಂಗೊಂಡಾಜ್ಞೆಯನೊದವಿಪನರಸಂ ಮರುವುಟ್ಟಿನೊಳು ॥
ಹಿಂಡಿ ಹಿಳಿದು ದಂಡಿಸುವುದು ನಾರಕ ।
ಮಂಡಳಿಯತಿ ಕೋಪದಿನದರಿಂ ಪೆರ ।
ವೆಂಡಿರನೆಳಸುವುದನುಚಿತ ಕಾಣಾ ಭವ್ಯಜನೋತ್ತಂಸಾ ॥ ೧೪ ॥

ಅತಿಕಾಂಕ್ಷೆಯನಾವಂ ಮಾಳ್ಪನವಂ ।
ಸತತಂ ಹಿಂಸೆಗೆ ಬಗ್ಗುವನಲ್ಲನ- ।
ನೃತಕಂಜುವನಲ್ಲಂ ಕಳವಿಂಗೆ ಸುಗಿವನಲ್ಲಂ ಪರರ ॥
ಸತಿಯ ರತಕ್ಕೆಳಸದನಲ್ಲಂ ದು- ।
ರ್ಗತಿಗೆಯಗಿವ[2]ನಲ್ಲಂ ಮತ್ತದರಿಂ- ।
ದತಿಕಾಂಕ್ಷೆಯನುಳಿವುದೆ ಸದ್ಧರ್ಮಂ ಭವ್ಯಜನೋತ್ತಂಸಾ ॥ ೧೫ ॥

---

1 ಮೊಕ್ಕಳ=ರಾಶಿ.    2 ಅಗಿ=ಹೆದರು

ದುರಿತವನಂ ಬೆಳೆವುದಕೆ ಹೊಲಂ ಕೊಲೆ ।
ಪರಕಲಿಸಿದ[1] ನವದೋಹಲಮನೃತಂ ।
ಪರಿಕಾಲುದಕಮದಕೆ ಕಳವನ್ಯಸ್ತ್ರೀರತಮೇ ಗೆಯ್ಮೆ ॥
ಪರಿರಕ್ಷಣೆಯತಿಕಾಂಕ್ಷೆಯದರಿನವು ।
ನಿರುತಂ ಪೊರ್ದದೊಡೆಲ್ಲಿಯ ಸಂಸೃತಿ ।
ಯುರುಕಿಲ್ಬಿಷಮೆಲ್ಲಿಯದು ವಿಚಾರಿಸೆ ಭವ್ಯಜನೋತ್ತಂಸಾ ॥ ೧೬ ॥

ಮುಂದಣ ಜನ್ಮಕ್ಕುಣ್ಬಘದಶನ- ।
ಕ್ಕಂದಡುವಡಿಗೆಗೆ ಕೊಲೆಯೊಲೆ ಹುಸಿ ಕಲ[2]- ।
ವೊಂದಿದ ಕಳವುದಕಂ ಪರನಾರೀರತವಿಂಧನವಾಸೆ ॥
ಮುಂದೈಸಿದ ಕಿಚ್ಚದರಿಂದಿಂತಿವ- ।
ನೆಂದುಂ ಸಮನಿಸದಿರ್ದೊಡೆ ದುರಿತಮ- ।
ನೆಂದುಂ ಭುಂಜಿಸನದು ನಿಜ ಕಾಣಾ ಭವ್ಯಜನೋತ್ತಂಸಾ ॥ ೧೭ ॥

ನಿರುತಂ ಮಾನಕಷಾಯದೆ ಕೋಪಾಂ- ।
ಕುರಮುಪ್ಪುದು ತತ್ಕ್ರೋಧೋದ್ರೇಕದಿ ।
ಪರಜೀವವ್ಯಥೆಯಹುದಾ ವ್ಯಥೆಯಿಂ ನರಕ ತಿರಿಕಜನ್ಮಂ ॥
ದೊರೆಕೊಂಬುದು ತಜ್ಜನ್ಮದಿನತಿದು- ।
ರ್ಧರದುಃಖಂ ಬಿಡದದರಿಂದದನುರೆ ।
ಪರಿಹರಿಸುವುದಿದು ಸದ್ಧರ್ಮ ಕಣಾ ಭವ್ಯಜನೋತ್ತಂಸಾ ॥ ೧೮ ॥

ಏನನೊರೆವೆನತಿಲೋಭಂ ಲೋಕಕೆ ।
ಹೀನಂ ತನ್ನಂ ಭೋಗಿಸಲೀಯದು ।
ದಾನಂ ಮೊದಲಾದರನಂ ಮಾಡಿಸಲೀಯದು ಭವಭವಕೆ ॥
ನಾನಾದುಃಖಮನುಣಿಸದೆ ನಿಲ್ಲದು ।
ತಾನದರಿಂದಿಹಪರವೆರಡರ್ಕಂ ।
ಮಾನಿತಸುಖಮಂ ಕುಡದದು ಕಾಣಾ ಭವ್ಯಜನೋತ್ತಂಸಾ ॥ ೧೯ ॥

---

1 ಪರಕಲಿಸು = ತುಂಬು.
2 ಕಲ = ಮಡಕೆ.

ಗುಣಿಯೆನಿಪೊಡಖಿಳ ವಿಬುಧಾ- |
ಗ್ರಣಿಯೆನಿಪೊಡೆ ಪರಮಮುಕ್ತಿರಮಣೀಮಣಿಭೂ- ||
ಷಣಮೆನಿಪೊಡೆ ಕನಸಿನೊಳಂ |
ಗಣಿಯಿಸಲಾಗಿತರದೋಷಮಂ ಸ್ವಗುಣಮುಮಂ || ೧೬ ||

ಗುಣಹಾನಿಯಿಂದಧೋಗತಿ |
ಗುಣದಿಂ ಸ್ವರ್ಗಾಪವರ್ಗಸುಖಮಕ್ಕುಮೆನಲ್ ||
ಗುಣಹೀನನ ಸಿರಿಯಿಂದಂ |
ಗುಣಿಗಳ ಬಡತನಮೆ ನಾಡೆಯುಂ ಲೇಸಲ್ತೆ || ೧೭ ||

ಕುಡಲಾರ್ಪೊಡೊಡೆಯನಪ್ಪುದು |
ಕುಡಲಾರದೆ ಬೇಡಿದವರ್ಗಳಂ ಮರುಗಿಸುತಿ- ||
ರ್ಪೊಡವೆಯಿನಾರ್ಗಂ ಮರುಕಮ- |
ನೊಡರಿಸದಿರ್ಪೊಂದು ಬಡತನಂ ಲೇಸಲ್ತೆ || ೧೮ ||

ಸಿರಿ ತನಗೊಲ್ದಲ್ಲಿಯೆ ಕರೆ |
ಕರೆದೀವುದು ಬಂಧುಜನಕಮಾಶ್ರಿತಜನಕಂ ||
ಕರೆದೀಯದಿರ್ದೆಯಾದೊಡೆ |
ಸಿರಿ ಸಂತೆಯ ನೆರವಿಯಂತೆ ಚೂಡಾರತ್ನಾ || ೧೯ ||

ಹಿಂದೆ ಗಳಿಸಿದುದು ಪೋದುದು |
ಮುಂದಕ್ಕಿನ್ನೇವೆನೆಂದು ಚಿಂತಿಸಲೇಕೈ ||
ಅಂದಂದು ಸೇದು ಬಾವಿಗೆ |
ತಂದುದಕವನೆರೆದರುಂಟೆ ಸುಗುಣಕರಂಡಾ || ೨೦ ||

ಬಿಡು ಮುತ್ತಂ ಮಾಣಿಕಮಂ |
ಪಿಡಿದೊಡ್ಡಿದ ಯತಿಯ ಕೈಯೊಳಿಕ್ಕಿದಪರೆ ಒ- ||
ರ್ಪಿಡಿಗೂಳನಿಕ್ಕಿ ಸಗ್ಗಂ |
ಬಡೆಯದ ನರನೆಗ್ಗನಲ್ತೆ ಭುವನಾಭರಣಾ || ೨೧ ||

ಕಾಯಿಲ್ಲದೆ ಪಣ್ಣಂ ತನ- |
ಗಾಯಿಲ್ಲದೆ ಬಾಳನುತ್ತು ಬಿತ್ತದೆ ಫಲಮಂ ||
ಈಯದೆ ವಿಧುವಿಶದಯಶಃ |
ಶ್ರೀಯಂ ಬಯಸಿದೊಡೆ ಬರ್ಕುಮೇ ಬಗೆವಾಗಳ್ || ೨೧

ಸಿರಿಗೆ ದರಿದ್ರತೆ ಬಾಳ್ಕೆಗೆ |
ಮರಣಂ ಜರೆ ಯೌವನಕ್ಕಮಭಿಘಾತಮೆನು- ||
ತ್ತಿರೆ ಕಂಡುಂ ಕೇಳ್ದುಂ ಗಡ |
ಪರಿವರ್ತಿಸರಾತ್ಮಹಿತದೊಳತಿ ದುರ್ಮತಿಗಳ್ || ೨೨

ತನುಬಳವುಂ ವಿಳಾಸದಳವುಂ ಧನಸಂಕುಳವುಂ ವಿನೂತ್ನಯೌ |
ವನಭರವುಂ ಕಳತ್ರದಿರವುಂ ಸುತರಾದರವುಂ ಸರಾಗಿಯ- ||
ಪ್ಪನ ಸಲವುಂ ಲತಾಂಗಿಯೊಲವುಂ ಸಿರಿಯೊಳ್ನಿಲವುಂ ನಿತಾಂತಮೆಂ- |
ದಿನಿತುಮನಿತ್ಯಮೆಂದಿವರಗಲ್ಕೆಗೆ ದುಃಖಿಗಳಾಗಲಕ್ಕುಮೇ || ೨೩

ಕಲ್ಲಿಂ ಕಾಂಚನಮಂ ತಡ- |
ಮಿಲ್ಲದೆ ಸತ್ಕ್ರಿಯೆಯ ಬಲದೆ ತೆಗೆವಂತೆ ಕರಂ ||
ಪೊಲ್ಲಮೆನಿಪ್ಪೊಡಲಿಂ ಕೇ- |
ಡಿಲ್ಲದ ಪುಣ್ಯಮನುಪಾರ್ಜಿಪಾತಂ ಚತುರಂ || ೨೪